ಬೆಳ್ಳಿ ಮಾಲಿಕೆ



ಗುಲಬರ್ಗಾ ಜಿಲ್ಲೆಯ

# ಜನಪದ ಕಲಾವಿದರು

ಶ್ರೀಮತಿ ಗಿರಿಜಾ ಕರ್ಪೂರ



# ಗುಲಬರ್ಗಾ ಜಿಲ್ಲೆಯ

# ಜನಪದ ಕಲಾವಿದರು

•

ಶ್ರೀಮತಿ ಗಿರಿಜಾ ಕರ್ಪೂರ

•

ಕರ್ನಾಟಕ ಜಾನಪದ ಅಕಾಡೆಮಿ,
ಬೆಂಗಳೂರು-೦೨

GULBARGA JILLEYA JANAPADA KALAVIDARU

Written by : Smt. GIRIJA MALLIKARJUNAPPA KARPUR

Published by : Dr. S. Prasada Swamy,
Registrar,
Karnataka Janapada Academy,
Kannada Bhavan, J. C. Road,
Bangalore -02

Pages : 12 + 116 = 128

Price : Rs. 60-00

© : ಕರ್ನಾಟಕ ಜಾನಪದ ಅಕಾಡೆಮಿ

ಪ್ರಕಟಣೆ : ಅಕ್ಟೋಬರ್ ೧, ೨೦೦೯

ಪ್ರಕಾಶಕರು : ಡಾ. ಎಸ್. ಪ್ರಸಾದಸ್ವಾಮಿ,
ರಿಜಿಸ್ಟ್ರಾರ್,
ಕರ್ನಾಟಕ ಜಾನಪದ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೦೯

ಹಿಂದಿನ ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

ಶ್ರೀ ಗವೀಶ ಹಿರೇಮಠ | ಡಾ. ಹಂಪನಹಳ್ಳಿ ತಿಮ್ಮೇಗೌಡ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ | ಡಾ. ಕೆ. ಚಿನ್ನಪ್ಪಗೌಡ

ಶ್ರೀ ಅರಾಟೆ ಮಂಜುನಾಥ | ಡಾ. ಬಿ. ಎಸ್. ತಲ್ವಾಡಿ

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೬೦೬೩, ೯೮೮೯೦೪೭೦೭

# ಅಧ್ಯಕ್ಷರ ನುಡಿ

ಅಕಾಡೆಮಿ ಈ ಅವಧಿಯಲ್ಲಿ ಮಹತ್ವದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಾನಪದದ ಬೌದ್ಧಿಕ ಅಧ್ಯಯನ ಹಾಗೂ ಪ್ರದರ್ಶನ, ಸಂರಕ್ಷಣೆಗಳು ಈ ಯೋಜನೆಯ ಹಿನ್ನೆಲೆಯಾಗಿವೆ. ಪ್ರಕಟಣೆಗೆ ಒತ್ತು ನೀಡುವ ಅಗತ್ಯ–ಸಂದರ್ಭಗಳ ಕಾರಣದಿಂದ ತ್ರೈಮಾಸಿಕ, ಮಹಾಪ್ರಬಂಧ, ಅಪ್ರಕಟಿತ ಲೇಖನ ಸಂಗ್ರಹಗಳ ಪ್ರಕಟಣೆಯ ಜೊತೆ ಜಾನಪದಕ್ಕಾಗಿ ದುಡಿವ, ಬದುಕನ್ನು ಮುಡಿಪಾಗಿಟ್ಟಿರುವ ಕಲಾವಿದರ ಪರಿಚಯದ ಕೃತಿಗಳು ಈ ದಿಸೆಯಲ್ಲಿ ಮುಖ್ಯವಾದವು.

'ಜಾನಪದ ತಲೆಮಾರು' ಮಾಲಿಕೆಯ ಐದನೆ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ. ಇದರೊಡನೆ ಕನ್ನಡ, ಇಂಗ್ಲಿಷ್‌ನಲ್ಲಿ ಜಾನಪದ ಕುರಿತ ಗ್ರಂಥವೊಂದರ ಪ್ರಕಟಣೆಯ ಯೋಜನೆಯಿದೆ.

ಗುಲಬರ್ಗಾ ಜಿಲ್ಲೆಯ ಕಲಾವಿದರ ಪರಿಚಯದ ಈ ಕೃತಿ ಮಾಹಿತಿಯುಕ್ತ. ಸರಳತೆ, ಸ್ಪಷ್ಟತೆ ಇದರ ಗುಣ. ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಈ ಪ್ರಯತ್ನ ಜನಪದರ ಅಸ್ತಿತ್ವದ ಗುರುತೂ ಹೌದು. 'ಬೆಳ್ಳಿಮಾಲಿಕೆ'ಯ ಈ ಕೃತಿಯನ್ನು ರೂಪಿಸಿದ ಶ್ರೀಮತಿ ಗಿರಿಜಾ ಕರಪೂರ ಅವರಿಗೆ, ಸಹಕರಿಸುವ ಅಕಾಡೆಮಿ ಸದಸ್ಯರಿಗೆ, ರಿಜಿಸ್ಟ್ರಾರ್ ಅವರಿಗೆ, ಕಛೇರಿ ಸಿಬ್ಬಂದಿಗೆ ಮತ್ತು ಓದುಗರಿಗೆ ಕೃತಜ್ಞತೆಗಳು.

**ಗೊ. ರು. ಚನ್ನಬಸಪ್ಪ**

ಅಧ್ಯಕ್ಷ

ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

# ಕೆಲ ಮಾತು

ಅಕಾಡೆಮಿಗೆ ೨೫ ವರ್ಷ ತುಂಬಿದ ನೆನಪಿನ 'ಬೆಳ್ಳಿ ಮಾಲಿಕೆ'ಯಲ್ಲಿ ಈಗಾಗಲೇ ಏಳು ಪುಸ್ತಕ ಹೊರಬಂದಿವೆ. ಈಗಿನ ಮೂರು ಸೇರಿದಲ್ಲಿ ಹತ್ತು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಕಾಡೆಮಿ ಮಹತ್ವದ ಹೆಜ್ಜೆಗುರುತುಗಳನ್ನು ದಾಖಲಿಸಿದೆ. ಈ ಹಿಂದಿನ ಅಧ್ಯಕ್ಷರು ಒಂದೊಂದು ಆಯಾಮ ಜೋಡಿಸಿ ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಬಹುಮುಖ ಹಾಗೂ ಜನಮುಖಿತ್ವಗಳನ್ನು ಕಲ್ಪಿಸಿರುವುದು ವೇದ್ಯ.

ಮಾನ್ಯ ಗೊ. ರು. ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಅಕಾಡೆಮಿ ಇನ್ನಷ್ಟು ಕ್ರಿಯಾಶೀಲವಾಗಿದೆ. 'ಜನಪದ ಜಗಲಿ', 'ಜಾನಪದ ಸಂಭ್ರಮ', 'ಗ್ರಾಮೀಣ ಚಿತ್ರಕಲಾ ಪ್ರದರ್ಶನ' ಮೊದಲಾದ ಹಲವು ಹತ್ತು ಯೋಜನೆಗಳು ಕಾರ್ಯಗತವಾಗುತ್ತಲಿವೆ. ಅಂತೆಯೇ 'ಜಾನಪದ ತಲೆಮಾರು' ಮಾಲಿಕೆಯ ಐದನೇ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾ 'ಕಲಾವಿದರ ಪರಿಚಯ ಮಾಲಿಕೆ' ಯೋಜನೆ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ, ಪರಿಚಯಕ್ಕೆ ಉತ್ತಮ ವೇದಿಕೆಯಾಗಿರುವ ಈ ಯೋಜನೆಗೆ ಅಕಾಡೆಮಿ ಮರುಚಾಲನೆ ನೀಡಿದೆ.

'ಬೆಳ್ಳಿ ಮಾಲಿಕೆ'ಯ ಸರಣಿಗೆ ಈ ಕೃತಿ ಹೊಸ ಸೇರ್ಪಡೆ. ಗುಲಬರ್ಗಾ ಜಿಲ್ಲೆಯ ಜಾನಪದ ಕಲಾವಿದರನ್ನು ಕುರಿತ ಈ ಕೃತಿ ಮಾಹಿತಿಗಳ ತೌರಾಗಿದೆ. ಕನ್ನಡ ಸಂಸ್ಕೃತಿ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತಿರುವ ಈ ಅಪೂರ್ವ ಕಲಾವಿದರ ಮಾಹಿತಿ ನೀಡುವ ಈ ಕೃತಿ ಅಕಾಡೆಮಿಯ ಹೆಮ್ಮೆಯ ಪ್ರಕಟಣೆಯಾಗಿದೆ.

ಈ ಕಲಾವಿದರ ಮಾಹಿತಿಯನ್ನು ಕಲೆಹಾಕಿ, ಸಂಗ್ರಹಗೊಳಿಸಿ, ಸೂಕ್ತ ಪ್ರಸ್ತಾವನೆ ನೀಡಿರುವ ಶ್ರೀಮತಿ ಗಿರಿಜಾ ಕರ್ಪೂರ ಅವರಿಗೆ, ಅಂತೆಯೇ ಅಕಾಡೆಮಿ ಸದಸ್ಯರಿಗೆ ಮತ್ತು ಸ್ಥಾಯಿ ಸಮಿತಿ ನೀಡಿದ ಸಹಕಾರಕ್ಕಾಗಿ ವಿಶೇಷ ನೆನಕೆಗಳು.

ಅಕಾಡೆಮಿಯ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಆರ್. ಜಯರಾಮರಾಜೇ ಅರಸು ಅವರಿಗೆ, ಆಗಾಗ ಸೂಕ್ತ ಸಲಹೆಗಳ ಮೂಲಕ ಅಕಾಡೆಮಿಯ ಕಾರ್ಯಗಳಿಗೆ ನಿರ್ದಿಷ್ಟತೆಯನ್ನು ಒದಗಿಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೆ ವಂದನೆಗಳು.

ಅಕಾಡೆಮಿಯ ಸಿಬ್ಬಂದಿಗಳಾದ ಪ್ರಕಾಶ್, ನಾಗರತ್ನ, ಶಿವಲಿಂಗಯ್ಯ, ಕಲ್ಪನಾ ಅವರ ಸಹಕಾರ ಅಪೂರ್ವವಾದುದು.

ಈ ಕೃತಿಯ ಕರಡು ತಿದ್ದಿ, ಪುಸ್ತಕದ ಸೊಗಸಿಗೆ ಕಾರಣರಾಗಿರುವ ಶ್ರೀ ಗವೀಶ ಹಿರೇಮಠ ಅವರಿಗೆ, ಸುಂದರವಾಗಿ ಮುದ್ರಿಸಿರುವ ಗದುಗಿನ ಪ್ರಭು ಗ್ರಾಫಿಕ್ಸ್‌ನವರಿಗೆ, ಓದುವ ಸಹೃದಯರಿಗೆ ಅನಂತ ನಮನಗಳು.

**ಡಾ. ಎಸ್. ಪ್ರಸಾದಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

# ಲೇಖಕರ ಒಂದೆರಡು ಮಾತು . . . . . .

ಅಕಾಡೆಮಿಯ ಬೆಳ್ಳಿ ಹಬ್ಬದ ನಿಮಿತ್ತ ರಾಜ್ಯದ ಜಾನಪದ ಕಲಾವಿದರ ಮಾಹಿತಿ ಸಂಗ್ರಹಿಸಿ ಒಂದೊಂದು ಜಿಲ್ಲೆಯ ಸಮಸ್ತ ಮಾಹಿತಿಯನ್ನು ಹೊರ ತರುವ ಅಕಾಡೆಮಿಯಿಂದ ಘನ ಕಾರ್ಯ ನಡೆದು ಗುಲಬರ್ಗಾ ಜಿಲ್ಲೆಯ ಜನಪದ ಕಲಾವಿದರ ಪರಿಚಯ ಬರೆಯುವ ಅವಕಾಶ ನನ್ನದಾಗಿದೆ. ಈ ನಿಮಿತ್ತವಾದರೂ ನಮ್ಮ ಕಲಾವಿದರನ್ನು ಗುರುತಿಸುವ, ಸ್ಮರಿಸುವ ಅವಕಾಶ ಒದಗಿ ಬಂದುದಕ್ಕಾಗಿ ನಾನು ಧನ್ಯೆ.

ಅನಕ್ಷರಸ್ಥರ ಭಾವನೆಗಳು, ಹರುಷಗಳು ಹರಿದು ಬಂದು ಜನಮೆಚ್ಚುಗೆಯಾದವುಗಳು. ಎಲ್ಲೋ ಪ್ರತಿಭಾವಂತನೊಬ್ಬ ಹಾಡು ಕಟ್ಟಿ ಹಾಡಿ ಖುಷಿ ಪಡುತ್ತಾನೆ. ಅದು ಜನರ ಮೆಚ್ಚುಗೆ ಪಡೆದು ಬಾಯಿಂದ ಬಾಯಿಗೆ ಹರಿದು ಸಾವಿರಾರು ಹಳ್ಳಿಗರ ಬಾಯಲ್ಲಿ ಕೇಳಿಬರುತ್ತದೆ. ನಮ್ಮ ಪಾರಂಪರಿಕ ದೇಶಿ ಕಲೆಯನ್ನು ಉಳಿಸಿ ಬೆಳೆಸುವ ವಿಧಾನ ಅತೀ ಮಹತ್ವದ ಸ್ಥಾನ ಪಡೆದಿದೆ.

ಜನಪದ ಕಲೆ ನಮ್ಮ ಬದುಕು ಭಾವನೆಗಳಿಗೆ ಹತ್ತಿರವಾದುದು, ನಮ್ಮ ಬದುಕಿಗೆ ಸಂಪೂರ್ಣ ಮಾರ್ಗದರ್ಶನ ನೀಡುವಂಥದು. ಜಾಗತೀಕರಣ ಇಂದು ನಮ್ಮನ್ನು ಹೆಬ್ಬಾವಿನಂತೆ ನುಂಗುತ್ತಲಿದೆ. ಅದನ್ನು ಸಮರ್ಥ ರೀತಿಯಲ್ಲಿ ಎದುರಿಸಿ ಜನಪದ ಕಲೆಯನ್ನು ರಕ್ಷಿಸಬೇಕಾಗಿದೆ. ನಮ್ಮ ಜನಪದ ಕಲಾವಿದರು ಮನಸ್ಸು ಮಾಡಿದರೆ ಮಾತ್ರ ಜನಪದ ಕಲೆಗಳು ಉಳಿಯಲು, ಬೆಳೆಯಲು ಸಾಧ್ಯ. ಜಾಗತೀಕರಣದ Use and throw ನೀತಿಯನ್ನು ಬಿಟ್ಟು ಜಾನಪದದ ಪ್ರತಿಭೆಗಳ ಪುನರುಜ್ಜೀವನಕ್ಕೆ ಬದ್ಧರಾಗಬೇಕು.

ಜಗತ್ತಿನಲ್ಲಿಯೇ ಭಾರತವು ಒಂದು ವಿಶಿಷ್ಟ ಸ್ಥಾನವನ್ನು ಹೊಂದಿದೆ. ಹಾಗೆಯೇ ಕರ್ನಾಟಕವು ಇಡೀ ಭಾರತದಲ್ಲಿ ಪ್ರಮುಖ ಸ್ಥಾನ ಹೊಂದಿದೆ. ಅಷ್ಟೊಂದು ಸಾಂಸ್ಕೃತಿಕ

ಸಂಪತ್ತು ನಮ್ಮಲ್ಲಿದೆ. ಗುಲಬರ್ಗಾ ಜಿಲ್ಲೆ, ಜಾನಪದ ಕಲೆಗಳ ಆಗರ. ಜಾನಪದ ಕಲೆಗಳಾದ ದೊಡ್ಡಾಟ, ಸಣ್ಣಾಟ, ಡಪ್ಪಿನಾಟ, ಕೋಲಾಟ, ಗೀ ಗೀ ಪದಗಳು, ಸೋಬಾನೆ, ಜೋಗುಳ, ಭುಲಾಯಿ, ಎಣ್ಣೆ ಹಚ್ಚುವ ಮದುವೆ, ಕುಟ್ಟುವ, ಬೀಸುವ ಸೀಗೆ ಹಾಡುಗಳು, ಋತುಮತಿಯ ಹಾಡುಗಳು, ನೀತಿಯ ಪದಗಳು, ಹಂತಿಯ ಪದಗಳು, ಡೊಳ್ಳು ಕುಣಿತ, ಹಲಗೆ ಕುಣಿತ, ಪುರವಂತಿಕೆ, ಭಜನೆ ಮುಂತಾದವುಗಳು. ಇವುಗಳಲ್ಲಿ ಯಾವುದಕ್ಕೂ ಕಮ್ಮಿ ಇಲ್ಲದ ಜಿಲ್ಲೆ ಗುಲಬರ್ಗಾ ಜಿಲ್ಲೆ.

ಬೀಸುವ, ಕುಟ್ಟುವ, ಸೋಬಾನ ಹಾಡುಗಳಿಗೆ ಬೀಸುಕಲ್ಲಿನ ನಾದವೇ, ಕುಟ್ಟುವ ಶಬ್ದವೇ ಶೃತಿ. ಸೋಬಾನ ಹಾಡುಗಳಿಗೆ ಹಿಂದೆ ಹಾಡುವ ಹಾಡೇ ಪಕ್ಕವಾದ್ಯಗಳು.

ಹಿಂದೆ ನಮ್ಮ ಹಿರಿಯರು ಎಷ್ಟು ಗಟ್ಟಿಮುಟ್ಟಾಗಿದ್ದು ದೀರ್ಘಾಯುಷಿಗಳಾಗಿದ್ದರೆಂದರೆ ನೂರುನೂರಾಹತ್ತು ವರ್ಷ ಬಾಳಿದರೂ ಯಾವುದೇ ಕಾಯಿಲೆಗಳು ಬಳಿ ಸುಳಿಯುತ್ತಿರಲಿಲ್ಲ. ಜೋಳ, ಗೋದಿ ಕುಟ್ಟಿ ಬೀಸುವುದರಿಂದ ದೇಹಕ್ಕೆ ಒಳ್ಳೆಯ ವ್ಯಾಯಾಮ ಸಿಕ್ಕುವುದಲ್ಲದೆ ಶುದ್ಧ ಸಾತ್ವಿಕ ಹಿಟ್ಟುಗಳನ್ನು ತಯಾರಿಸಿ ರೋಗಗಳಿಂದ ದೂರವಿದ್ದು ಗಟ್ಟಿ ಮುಟ್ಟಾಗಿರುವುದಲ್ಲದೆ ತಮ್ಮ ಜೀವನದ ರೀತಿ-ನೀತಿಗಳನ್ನು ಜನಪದ ಸಂಗೀತ, ಜನಪದ ಸಾಹಿತ್ಯ, ಕುಟ್ಟುವ, ಬೀಸುವ, ಗರತಿಯರ ಹಾಡುಗಳಾಗಿ ಹೊರ ಹೊಮ್ಮಿದವು. ಅಲ್ಲದೆ ಸದೃಢ ವಂಶ ಬೆಳೆಸುವಲ್ಲಿ ಸಹಾಕಾರಿಯಾದವು.

ನಮ್ಮ ಜಾನಪದದ ಮುಗ್ಧ ಕಲಾವಿದರು ಎಂದೂ ಪ್ರಸಿದ್ಧಿ - ಪ್ರಶಂಸೆಗಳಿಗೆ ಹಪಾಹಪಿಸಿ ಯಾರ ಮುಂದೆಯೂ ಕೈಯೊಡ್ಡಿದವರಲ್ಲ. ತಮ್ಮ ಹಾಗೂ ತಮ್ಮ ಸುತ್ತ ಮುತ್ತಲಿನ ಜನರ ಸಂತೋಷಕ್ಕಾಗಿ ಹಾಡಿದವರು, ಅಭಿನಯಿಸಿದವರು. ಅಂಥ ಪ್ರತಿಭೆಗಳನ್ನು ಅಕಾಡೆಮಿ ಗುರುತಿಸಿ ಗೌರವಿಸುತ್ತಿರುವುದು ಅಕಾಡೆಮಿ ತನ್ನ ಜವಾಬ್ದಾರಿ ನಿಭಾಯಿಸಿದಂತೆ. ನೂರಾರು ಎಲೆ ಮರೆಕಾಯಿಯಂತಿರುವ ಕಲಾವಿದರನ್ನು ಗುರುತಿಸಿ ಅವರ ಬದುಕು-ಕಲೆ ಕುರಿತಂತೆ ಗ್ರಂಥ ಹೊರ ತರುವಲ್ಲಿ ಪ್ರಯತ್ನಿಸುತ್ತಿದೆ. ಸ್ವತಃ ಯಕ್ಷಗಾನ ಕಲಾವಿದರಾದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆ (ರಾಷ್ಟ್ರಪ್ರಶಸ್ತಿ ವಿಜೇತ) ಅವರು ಜಾನಪದ ಕಲಾವಿದರ ಪರವಾಗಿ ರೂಪಿಸಿದ ಹತ್ತಾರು ಯೋಜನೆಗಳಲ್ಲಿ ಕಲಾವಿದರ ಸಂಚಿಕೆ ಹೊರ ತರುವ ಕಾರ್ಯ ಬಹಳ ಮಹತ್ವದ್ದಾಗಿದೆ.

ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಹಳ್ಳಿಗರಿಗೆ ಆಸಕ್ತಿ ಮೂಡಿಸುತ್ತ, ಪ್ರೋತ್ಸಾಹಿಸುತ್ತ, ಅಕಾಡೆಮಿಯ ರಜಿಸ್ಟ್ರಾರರು ಹಾಗೂ ಸಿಬ್ಬಂದಿಗಳು ಪ್ರಾಂಜಲ ಮನಸ್ಸಿನಿಂದ ದುಡಿಯುತ್ತಿದ್ದಾರೆ. ಗುಲಬರ್ಗಾ ಜಿಲ್ಲೆಯ ಎಲ್ಲ ಹಿರಿಯ ಮತ್ತು ಕಿರಿಯ ಕಲಾವಿದರಿಗೆ ತಮ್ಮ ತಮ್ಮ ಕ್ಷೇತ್ರದಲ್ಲಿ ನೈಪುಣ್ಯತೆಯನ್ನು ಪಡೆದವರಿಗೂ ಸಾಧಕ ಬಾಧಕಗಳನ್ನು ಲೆಕ್ಕಿಸದೆ ಕಲೆಯ ಸೇವೆಯನ್ನು ಮಾಡುತ್ತಿರು ವಯೋವೃದ್ಧರಿಗೂ

ಇಂಥ ಕಲಾರತ್ನಗಳನ್ನು ಗುರುತಿಸುವಲ್ಲಿ ನೆರವಾದ ಜನಸಮೂಹಕ್ಕೆ ವಿಶೇಷವಾಗಿ ಸಹಾಯ ನೀಡಿದ ಈಶ್ವರಯ್ಯ ಕೋಡಂಬಲ್ ಪ್ರಾಧ್ಯಾಪಕರು, ಸರಕಾರಿ ಕಾಲೇಜು, ಸೇಡಂ ಮತ್ತು ಮನೆಯಲ್ಲಿ ನನಗೆ ಸಹಾಯ ಮಾಡಿದ ನನ್ನ ಪತಿಯಾದ ಶ್ರೀ ಮಲ್ಲಿಕಾರ್ಜುನಪ್ಪ ಮಾಣಿಕಪ್ಪ ಕರಪೂರ, ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಇ.ಬಿ. ಮತ್ತು ಪ್ರಸಕ್ತ ಸಂಚಿಕೆಯನ್ನು ಮುದ್ರಿಸಿಕೊಟ್ಟ 'ಪ್ರಭು ಗ್ರಾಫಿಕ್ಸ್'ನವರಿಗೂ ನನ್ನ ಹಾರ್ದಿಕ ವಂದನೆಗಳು.

ಶ್ರೀಮತಿ ಗಿರಿಜಾ ಕರ್ಪೂರ

ನವೆಂಬರ್, ೨೦೦೭

## ಪರಿವಿಡಿ


೧. ಶ್ರೀ ಕಾಶಿನಾಥ ಚವ್ಹಾಣ . . . . . ೧
೨. ಶ್ರೀ ಚಂದ್ರಶೇಖರ ಹೊಸುರಕರ್ . . . . . ೩
೩. ಶ್ರೀಮತಿ ಗಿರಿಜಾ ಮ. ಕರ್ಮೂರ . . . . . ೫
೪. ಶ್ರೀಮತಿ ಅವ್ವ ಗೌರವ್ವ ಕಾಡಾದಿ . . . . . ೭
೫. ಶ್ರೀ ತುಕಾರಾಮ ನೀಲಪ್ಪ ಭಜಂತ್ರಿ . . . . . ೯
೬. ಶ್ರೀ ಧನಸಿಂಗ ಚವ್ಹಾಣ . . . . . ೧೧
೭. ಶ್ರೀ ಶಿವಲಿಂಗಯ್ಯ ರೇವಣಸಿದ್ದಯ್ಯ ಸಾಲಿಮಠ . . . ೧೩
೮. ಶ್ರೀ ಅಮೃತೇಶ ಕಲಶೆಟ್ಟಿ . . . . . ೧೫
೯. ಶ್ರೀ ಶಾಂತಪ್ಪ ವೀರಭದ್ರಪ್ಪ ಉಡಚಣ . . . . ೧೭
೧೦. ಶ್ರೀಮತಿ ಬಂಗಾರೆವ್ವ ಸಾಲಿ . . . . . ೧೯
೧೧. ಶ್ರೀ ಬಾಬುರಾವ ಕೋಬಾಳ . . . . . ೨೧
೧೨. ಶ್ರೀ ಪುಂಡಲೀಕ ಪೂಜಾರಿ . . . . . ೨೩
೧೩. ಶ್ರೀ ಮೋನಪ್ಪ ಗೋಲಪ್ಪ ಪೋದ್ದಾರ . . . . ೨೫
೧೪. ಶ್ರೀಮತಿ ಮಹಾದೇವಿ ಸಿದ್ದಣ್ಣ ಸರಸಂಬಿ . . . . ೨೭
೧೫. ಶ್ರೀ ಸಿದ್ಧಾರೂಢ ಮಲ್ಲಪ್ಪ ಗಡೇದ . . . . . ೨೮
೧೬. ಶ್ರೀಮತಿ ಚತುರಾಬಾಯಿ ಶಿವಸಿಂಪಿ . . . . ೨೯
೧೭. ಶ್ರೀ ವೀರಣ್ಣ ಗುರುಪಾದಪ್ಪ ಶೀಲವಂತ . . . . ೩೧
೧೮. ಶ್ರೀ ಸಾಯಬಣ್ಣ . . . . . ೩೩
೧೯. ಶ್ರೀಮತಿ ದಾನಮ್ಮ ರೇಣಗಿ . . . . . ೩೫
೨೦. ಶ್ರೀ ಪಂಪಯ್ಯ ಸ್ವಾಮಿ . . . . . ೩೭

೨೧. ಶಿವಲಿಂಗಪ್ಪ ಡಿಗ್ಗಿ . . . . ೩೯
೨೨. ಶ್ರೀ ಭಿಮಾಶ್ಯಾ ಶರಣಪ್ಪ ಭಕರೆ . . . . ೪೧
೨೩. ಶ್ರೀ ಗಿರಿಜಾಬಾಯಿ ರಾಠೋಡ . . . . ೪೨
೨೪. ಶ್ರೀ ಸಂಬಣ್ಣ ಮಹಾದೇವಪ್ಪ ಸಿಂಪಿ. . . . ೪೪
೨೫. ಶ್ರೀ ಬಸವಣ್ಣೆಪ್ಪ ನಾವದಗಿ . . . . ೪೭
೨೬. ಶ್ರೀ ಬಸವಣ್ಣೆಪ್ಪ ಕರಬಸಪ್ಪ ಮುಂದೋಡಗಿ . . . ೪೮
೨೭. ಶ್ರೀ ಸಿದ್ದಪ್ಪ ಮೇಟಿ . . . . ೪೯
೨೮. ಶ್ರೀ ಮಲ್ಲಿಕಾರ್ಜುನ ಸಂಗಾವಿ . . . . ೫೧
೨೯. ಶ್ರೀ ಶಿವಶರಣಪ್ಪ ಕೋಬಾಳ . . . . ೫೪
೩೦. ಶ್ರೀ ರುಕ್ಮಣಪ್ಪ ಗರಡಕರ್ . . . ೫೬
೩೧. ಶ್ರೀಮತಿ ಶಾಂತಮ್ಮ ಹೊನ್ನಡ್ಡಿ . . . . ೫೮
೩೨. ಶ್ರೀ ಬಸವಂತ ರೂಂಪಳ್ಳಿ . . . . ೬೦
೩೩. ಶ್ರೀ ಚನ್ನಯ್ಯಸ್ವಾಮಿ . . . . ೬೨
೩೪. ಶ್ರೀ ಭೂಪರಾವ್ ಪಡದಳ್ಳಿ . . . . ೬೪
೩೫. ಶ್ರೀ ನಾಗಪ್ಪ ಅಮ್ಲಾಪೂರ . . . . ೬೬
೩೬. ಶ್ರೀಮತಿ ಶಿವಮ್ಮ ಭಾವಿದೊಡ್ಡಿ . . . . ೬೮
೩೭. ಶ್ರೀ ಹಣಮಂತ ಫತ್ತೆಪೂರ . . . . ೭೦
೩೮. ಶ್ರೀಮತಿ ಕಮಲಮ್ಮ ನಾಟಿಕರ್ . . . . ೭೧
೩೯. ಶ್ರೀ ಹಣಮಂತರಡ್ಡಿ ನಾಗರಡ್ಡಿಕರ್ . . . ೭೩
೪೦. ಶ್ರೀ ಶರಣಪ್ಪ ಇದಲಾಯಿ . . . . ೭೫
೪೧. ಶ್ರೀ ಬಸವಣ್ಣೆಪ್ಪ ಶಿವಪ್ಪ ರೇವೂರ . . . . ೭೭
೪೨. ಶ್ರೀ ನಾಗಪ್ಪ ಶೇರೀಕಾರ . . . . ೭೯
೪೩. ಶ್ರೀ ಮೊಗಲಪ್ಪ ತೋಡಿ . . . . ೮೧
೪೪. ಶ್ರೀ ವೇದಮೂರ್ತಿ ಗುರುಲಿಂಗಯ್ಯ . . . ೮೩
೪೫. ಶ್ರೀಮತಿ ನಾಗಮ್ಮ ಸಾಲಿಮಠ . . . ೮೫
೪೬. ಶ್ರೀ ಮೋನಪ್ಪ ವಿಠ್ಠಪ್ಪ ಸುತಾರ (ಬಡಿಗೇರ) . ೮೭

೪೭. ಶ್ರೀ ಗಣಪತಿ ಪಡಪದ . . . . ೮೯
೪೮. ಶ್ರೀ ಶಿವರುದ್ರಪ್ಪ ಗುರುಸಿದ್ದಪ್ಪ ಆಂವಟೆ . . . ೯೧
೪೯. ಶ್ರೀ ದೊಂಡಿಬಾ ಮಕಾಜಿ ಚವ್ಹಾಣ . . . . ೯೩
೫೦. ಶ್ರೀ ಅಣ್ಣಪ್ಪ ಮಲಕಾಜಪ್ಪ ಹಡಲಗಿ . . . . ೯೫
೫೧. ಶ್ರೀ ದಿಗಂಬರ ಪಂಚಾಳ (ವಿಶ್ವಕರ್ಮ) . . . ೯೭
೫೨. ಶ್ರೀ ಬಕ್ಕಪ್ಪ ಗೇನಳ್ಳಿ ಐನೂಲಿ . . . . ೧೦೦
೫೩. ಶ್ರೀ ಸಾಯಬಣ್ಣದಾಸ . . . . ೧೦೩
೫೪. ಶ್ರೀ ಶ್ರೀಮಂತ ಆಲ್ದಿ . . . . ೧೦೫
೫೫, ಶ್ರೀಮತಿ ಅಂಬುಬಾಯಿ ಬಡಿಗೇರ . . . . ೧೦೭
೫೬. ಶ್ರೀಮತಿ ಶಕುಂತಲಾ ಮುತ್ತಗಿ . . . . ೧೦೯
೫೭. ಶ್ರೀ ಬಸವರಾಜ ಅಲಗೂಡ . . . . ೧೧೧
೫೮. ಶ್ರೀ ವಿಠ್ಠಲರಾವ ಹನುಮಂತರಾವ ಹೊಸಗೌಡ . . ೧೧೩
೫೯. ಶ್ರೀಮತಿ ಅಂಬವ್ವ ಭೀಮಣ್ಣ ಪಟ್ಟಣ . . . ೧೧೫

# ಕಾಶಿನಾಥ ಚವ್ಹಾಣ

ಜಾನಪದ ಸಾಹಿತ್ಯ ಮತ್ತು ಕಲೆ ಎರಡನ್ನೂ ಉಳಿಸಿ ಬೆಳೆಸಿದ ಅಪರೂಪದ ವ್ಯಕ್ತಿ ಶ್ರೀ ಕಾಶಿನಾಥ ಚವ್ಹಾಣ ಅವರು. ೭೦ಕ್ಕೂ ಅಧಿಕ ಬಯಲಾಟದ ಕಥೆಗಳನ್ನು, ಸಾವಿರಕ್ಕೂ ಹೆಚ್ಚು ಗೀಗೀ ಪದಗಳನ್ನು ಇವರು ತಮಗೆ ಸಿಕ್ಕ ಮೋಡಿ ಲಿಪಿಯಲ್ಲಿರುವುದನ್ನು ಕನ್ನಡಕ್ಕೆ ಅನುವಾದ ಮಾಡಿ ಸಂಗ್ರಹಿಸಿ ಮೂಲ ಧಾಟಿಯಲ್ಲಿಯೇ ನಿರರ್ಗಳವಾಗಿ ಹಾಡುವ ಗೀ ಗೀ ಪದಗಳ ಸರದಾರ.

"ಕಲ್ಗಿ – ತುರಾಯಿ" ಎಂಬ ಲಾವಣೀ, ಗೀ ಗೀ ಪದಗಳ ಸಂಗ್ರಹವನ್ನು ಮೋಡಿ ಲಿಪಿಯಲ್ಲಿದ್ದುದು ಕನ್ನಡಕ್ಕೆ ಅನುವಾದ ಮಾಡಿ ಸಂಪಾದಿಸಿ ೧೯೯೫ರಲ್ಲಿ ಪ್ರಕಟಗೊಂಡ ಇವರ ಪುಸ್ತಕ ವಿಶಿಷ್ಟವಾದುದು. ಹರದೇಶಿ–ನಾಗೇಶಿ ಹಾಡುಗಳ ಸ್ಪಷ್ಟ ಕಲ್ಪನೆ ಕೊಡುತ್ತದೆ. ಜೋಡಿ ಪದ್ಯಗಳನ್ನು ಸಖಿಗಳನ್ನು, ಖ್ಯಾಲಿಗಳನ್ನು ಕೂಡಾ ಕಲ್ಗಿ–ತುರಾಯಿಯಲ್ಲಿ ಸ್ಪಷ್ಟ ಚಿತ್ರಣ ಮೂಡಿಸಿದ್ದಾರೆ. ಇವರ ಸೇವೆ ಗಮನಿಸಿ ಸಂಸದ ಸದಸ್ಯರಾದ ಶ್ರೀ ಬಸವರಾಜ ಪಾಟೀಲ, ಸೇಡಂ ಇವರು ಶ್ರೀ ಕೊತ್ತಲಬಸವೇಶ್ವರ ಹೈದರಾಬಾದ ಕರ್ನಾಟಕ ಗೀ ಗೀ ಪದದವರ ಸಂಸ್ಥೆ (ರಿ) ಸ್ಥಾಪಿಸಿ ಇವರನ್ನು ಪ್ರಧಾನ ಕಾರ್ಯದರ್ಶಿಗಳನ್ನಾಗಿ ನೇಮಿಸಿದ್ದಾರೆ. ಹೈದರಾಬಾದ ಕರ್ನಾಟಕ ಅಭಿವೃದ್ಧಿ ಸಂಸ್ಥೆಯ ಸದಸ್ಯರಾಗಿದ್ದಾರೆ. ಅಲ್ಲದೆ ಓಂ ಶ್ರೀ ಸಾಯಿಬಾಬಾ ರಂಗಭೂಮಿ ಕಲಾವಿದರ ಸಂಘ ಸ್ಥಾಪಿಸಿ (೧೯೯೧) ಅದರ ಮೇಲ್ವಿಚಾರಕರಾಗಿದ್ದಾರೆ. ೨೦೦೧ ರಿಂದ ಕೇಂದ್ರ ಸರಕಾರದ ಗ್ರಾಮೀಣ ಜಾನಪದ ಮತ್ತು ಬುಡಕಟ್ಟು ಜನಾಂಗದ ಸಾಂಸ್ಕೃತಿಕ ತಜ್ಞರ ಸಮಿತಿ ಸದಸ್ಯರಾಗಿ ಕಲೆಯ ಸೇವೆ ಗೈದ ಇವರು ೨೦೦೪ ರಲ್ಲಿ ಮತ್ತೆ ಆಯ್ಕೆಯಾಗಿ ಸತತ ೫ ವರ್ಷಗಳಿಂದ ಕೇಂದ್ರ ಸರಕಾರದ ಸೇವೆ ಸಲ್ಲಿಸುತ್ತಿದ್ದಾರೆ.

ಆಗಿನ ಮಾಧ್ಯಮವಾದ ಮೋಡಿಯಲ್ಲಿ ಸೈದ ಚಿಂಚೋಳಿಯಲ್ಲಿ ಮೋಡಿ ಪಂಡಿತರಾದ ಚಂದ್ರಶ್ಯಪ್ಪ ದುಂಡಪ್ಪ ಅವರಲ್ಲಿ ೪ನೇ ತರಗತಿಯವರೆಗೆ ಅಭ್ಯಾಸ

ಮಾಡಿದರು. ಕಲೆಯ ಕಡೆಗೆ ಒಲವಿದ್ದುದರಿಂದ ಇವರು ಶೈಕ್ಷಣಿಕ ಕಡೆಗೆ ಹೋಗದೆ ಕಲಾ ಕ್ಷೇತ್ರಕ್ಕೆ ಬಂದು ಪ್ರತಿಭಾವಂತರಾಗಿ ಬೆಳದರು.

ಕಾಶಿನಾಥರ ತಂದೆ ಅಮೃತಪ್ಪ ಅವರು ಪ್ರಸಿದ್ಧ ಗೊಂದಲಿಗ ಹಾಡುಗಾರ. ಕಡುಬಡತನದ ಮನೆಯಾದರೂ ಸಾಂಸ್ಕೃತಿಕವಾಗಿ ಸಿರಿವಂತವಾದದ್ದು. ತನ್ನ ತಂದೆಯೊಡನೆ ತುಂಥಣಿ ಹಾಡುತ್ತ ಎಳೆ ಕಂಠದಲ್ಲಿ ಅಣುಕು-ತುಣುಕು ಹಾಡುತ್ತಿದ್ದಾಗ ಒಮ್ಮೆ ಮಹಾಗಾಂವದ ಮೀರ ಸಾಬರು ಶಿಷ್ಯನಾಗಿ ಸ್ವೀಕರಿಸಿ ಮಾರ್ಗದರ್ಶನ ನೀಡಿದರು. ಗೀ ಗೀ ಪದದ ಕವಿಗಳಾದ ದೇವಗಾಂವದ ಮಹಾಲಿಂಗಪ್ಪ, ಮಹಾರುದ್ರಪ್ಪ, ಗುಂಡಪ್ಪ, ಹಜರತ್ ಸಾಹೇಬ, ಜಂಬಗಾ (ಬಿ) ಯ ಶರಣಯ್ಯ ಕಲಬುರ್ಗಿಯ ಅಂಬಾದಾಸ, ಮೊಹ್ಮದ ಸಾಬ, ಮೋದಿನ ಸಾಬ ಮುಚ್ಚಖೇಡ ಇವರೆಲ್ಲ ಇವರಿಗೆ ಗುರುಗಳು.

ಡಪ್ಪಿನಾಟ ಮತ್ತು ಗೊಂದಲಿ ಇವರ ವಂಶ ಪಾರಂಪರ್ಯ ಕಲೆಗಳು. ತಂದೆಯವರಿಂದ ಕಲಿತಂಥ ಈ ವಿದ್ಯೆಗಳನ್ನು ಅವರು ಮುಂದುವರೆಸಿಕೊಂಡು ಹೋಗುವಲ್ಲಿ ಶ್ರಮಿಸುತ್ತಿದ್ದಾರೆ. ಡಪ್ಪಿನಾಟದಲ್ಲಿ ಡಪ್ಪು, ಹಾರ್ಮೋನಿಯಂ, ಗುಂಡತಾಳ ಮತ್ತು ತುಂಥಣಿ ಇವೆಲ್ಲವುಗಳಲ್ಲೂ ಇವರು ಪರಿಣಿತರು.

ಅಮೃತರಾಜ, ಮದನ ಮಝರಿ, ನಂದಗೋಪಾಲ, ಬ್ರಹ್ಮಲಿಖಿತ, ಸತ್ಯ ಶರಾವತಿ, ನನ್ನ ಭೂಮಿ, ಗುಣರೂಪ ಸಾಹುಕಾರ, ಸಾಜ್ಯ ಸಿಂಹಾ ಸಿಂಹ, ತಾರಾಮತಿ ಇವೆಲ್ಲವುಗಳು ಇವರು ಆಡಿದ ಡಪ್ಪಿನಾಟಗಳು. ಒಂದೊಂದು ಆಟದಲ್ಲಿ ೫೦ ಹಾಡುಗಳಿರುತ್ತವೆ. ಅವೆಲ್ಲವುಗಳನ್ನು ನಿರರ್ಗಳವಾಗಿ ಹಾಡುತ್ತಾರೆ.

ಖೇರ್ಡಾ ಬಿ., ರುಮ್ಮನಗೂಡ, ಮೋಘಾ ಚಿಂಚೋಳಿ, ಬಿಜಾಪೂರ, ಧಾರವಾಡ, ಅಫಜಲಪೂರ, ಮಾಶಾಳ ಅಥಣಿ, ಬೆಂಗಳೂರು, ಯಾದಗಿರಿ ಹೀಗೆ ರಾಜ್ಯದಾದ್ಯಂತ ಕಾರ್ಯಕ್ರಮಗಳನ್ನು ನೀಡಿ ಹೆಸರುವಾಸಿಯಾಗಿದ್ದಾರೆ. ೩೦೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿದ್ದಾರೆ. ೪೦ ವರ್ಷಗಳ ಸತತ ಸೇವೆ ಡಪ್ಪಿನಾಟದೊಂದಿಗೆ ಗೀ ಗೀ ಪದಗಳು, ಕೃಷ್ಣ ಪಾರಿಜಾತ, ಬಯಲಾಟ, ಶರಣರ ಜೀವನ ಚರಿತ್ರೆಗಳ ಹಾಡುಗಳನ್ನು ಹಾಡುತ್ತಾರೆ.

ಹೈದರಾಬಾದ ಕರ್ನಾಟಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೮೦ ಹಳ್ಳಿಗಳಲ್ಲಿ ೨ ರಂತೆ ೨೦೦ರಕ್ಕೂ ಹೆಚ್ಚು ಕಾರ್ಯಕ್ರಮಗಳು, ಆಕಾಶವಾಣಿ, ದೂರದರ್ಶನ, ಆರೋಗ್ಯ ಇಲಾಖೆ, ಕೇಂದ್ರದ ಸಂಗೀತ ನಾಟಕ ವಿಭಾಗ, ಜಿಲ್ಲಾ ಸಾಕ್ಷರತೆ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಾನಪದ ಮೇಳ, ಜಾನಪದ ಜಾತ್ರೆ ಕಲಾಮೇಳಗಳು, ಸ್ವತಃ ಕಾವ್ಯ ರಚನೆ ಸಂಘದಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಶಿಷ್ಯಂದಿರನ್ನು ಹೊಂದಿದ್ದಾರೆ.

ಕಾಶಿನಾಥ ಚವ್ಹಾಣ
ಶ್ರೀ ಕಲ್ಗಿ ತುರಾಯಿ ಸಂಘ
ಫಿಲ್ಟರ್ ಬೆಡ್ ರಸ್ತೆ, ಚೆನ್ನವೀರ ನಗರ, ಗುಲಬರ್ಗಾ

# ಚಂದ್ರಶೇಖರ ಹೊಸೂರಕರ್

ಜಾನಪದ ಕಲಾವಿದರಾದ ಶ್ರೀ ಚಂದ್ರಶೇಖರ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ನಾಣ್ಣುಡಿಯಂತೆ ಅಲ್ಪ ಸಮಯದಲ್ಲೇ ಅಪಾರ ಕೀರ್ತಿ ಗಳಿಸಿದ ಹೆಮ್ಮೆಯ ಕಲಾವಿದರು. ಇವರು ಶರಣನಾಡು ಕಲ್ಬುರ್ಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಮಣ್ಣೂರು ಗ್ರಾಮದವರು. ೩-೫-೧೯೫೯ರಲ್ಲಿ ಮಧ್ಯಮ ವರ್ಗದ ಶ್ರೀ ಮಹಾದೇವಪ್ಪ ಮತ್ತು ಶ್ರೀಮತಿ ಶಾಂತಾಬಾಯಿ ಇವರ ಐದು ಜನ ಗಂಡು ಮಕ್ಕಳಲ್ಲಿ ಹಿರಿಯ ಮಗನಾಗಿ ಜನಿಸಿದ ಇವರು ತಮ್ಮ ಪ್ರಾಥಮಿಕ, ಪ್ರೌಢ ಶಿಕ್ಷಣ ಮಣ್ಣೂರಿನಲ್ಲಿ ಮುಗಿಸಿ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಡೆದರು. ಸರಕಾರಿ ಕೆಲಸಕ್ಕೆ ಸೇರಿದ್ದರೂ ಕಲೆ ಇವರನ್ನು ತನ್ನ ಮಾರ್ಗದೆಡೆಗೆ ಸೆಳೆಯುತ್ತಿತ್ತು.

ಚಿಕ್ಕಂದಿನಲ್ಲೇ ಉತ್ಸಾಹಭರಿತರಾಗಿ ಹೆಚ್ಚಿನ ಸಮಯಯವನ್ನು ಕಲೆಗಾಗಿ ಸವೆಸುತ್ತಿದ್ದರು. ಶಿಕ್ಷಣ ಮುಗಿದ ಮೇಲೆ ಪೂರ್ತಿಯಾಗಿ ತಮ್ಮ ಸಮಯವನ್ನು ಕಲೆಗಾಗಿ ಮೀಸಲಿಟ್ಟರು. ದೊಡ್ಡಾಟಗಳಲ್ಲಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ಅಭಿನಯಿಸಿ ಜನರ ಮೆಚ್ಚುಗೆಗೆ ಪಾತ್ರರಾದರು.

ದೇವಿ ಪಾತ್ರ, ದ್ರೌಪದಿ, ಸೀತೆ, ಕುಂತಿ, ಶ್ರೀ ಕೃಷ್ಣ, ದಾಕ್ಷಾಯಿಣಿ, ಶ್ರೀ ರಾಮಚಂದ್ರ, ಧರ್ಮರಾಜನ ಪಾತ್ರಗಳು ದೊಡ್ಡಾಟಗಳಲ್ಲಿ ಇವರು ಮಾಡಿದ ಪಾತ್ರಗಳು.

ಇವರು ಆಡಿದ ದೊಡ್ಡಾಟಗಳೆಂದರೆ ದೇವಿ ಮಹಾತ್ಮೆ, ದಕ್ಷ ಬ್ರಹ್ಮ, ಯುದ್ಧಕಾಂಡ, ವನಕಾಂಡ, ಲಂಕಾದಹನ, ಭೀಮ ವಿಲಾಸ, ದ್ರೌಪದಿ ವಸ್ತ್ರಾಪಹರಣ, ಶ್ರೀ ಕೃಷ್ಣನ ಕಾರಸ್ಥಾನ, ಕರ್ಣಾರ್ಜುನರ ಕಾಳಗ, ಮಹಿಷಾಸುರ ಮರ್ಧಿನಿ, ಬಾಣಸುರ, ಕನಕಾಂಗಿ, ದಾನಶೂರ ಕರ್ಣ.

ಆಕಾಶವಾಣಿ ಬಿ ಗ್ರೇಡ್ ಕಲಾವಿದರಾದ ಇವರು ಅಭಿನಯಿಸಿದ ೩೧ ದೊಡ್ಡಾಟಗಳು ಪ್ರಸಾರಗೊಂಡಿವೆ. ದೂರದರ್ಶನದಲ್ಲಿಯೂ ಇವರ ದೊಡ್ಡಾಟಗಳು ಪ್ರಸಾರಗೊಂಡಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಾಡಿನೆಲ್ಲೆಡೆ ಕಾರ್ಯಕ್ರಮಗಳನ್ನು ನೀಡಿದ್ದರೆ.

ಇವರಿಗೆ ಸಂದ ಪ್ರಶಸ್ತಿಗಳೆಂದರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕಲಾಕೇಸರಿ ಬಿರುದು, ರಾಜ್ಯೋತ್ಸವ ಸಮಿತಿ ದಂಡಾಧಿಕಾರಿಗಳ ಕಚೇರಿಯಿಂದ ೨೦೦೫ರಲ್ಲಿ ಕಲಾಪ್ರವೀಣ ಪ್ರಶಸ್ತಿ, ಕರ್ಜಗಿ ವಲಯದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗೌರವ, ಮಹಾದೇವ ಬಯಲಾಟ ಸಂಘ ಕಟ್ಟಿ ೨೫ ವರ್ಷಗಳಿಂದ ಅಧ್ಯಕ್ಷರಾಗಿ ಸೇವೆ. ಗ್ರಾಮಪಂಚಾಯತಿ ಸದಸ್ಯರಾಗಿ ಗ್ರಾಮೀಣ ಮಟ್ಟದಲ್ಲಿ ಜಾನಪದ ಕಲೆಯನ್ನು ಜೀವಂತವಾಗಿಡಲು ಹಗಲು-ರಾತ್ರಿ ಶ್ರಮಿಸುತ್ತಿದ್ದಾರೆ.

**ಚಂದ್ರಶೇಖರ ಮಹಾದೇವಪ್ಪ ಹೊಸೂರಕರ್**
**ಸಾ : ಮಣ್ಣೂರು**
**ತಾ : ಅಫಜಲಪೂರ ಜಿ : ಗುಲ್ಬರ್ಗಾ**

# ಗಿರಿಜಾ ಕರ್ಪೂರ

ಸಂಪ್ರದಾಯ ಗೀತೆಗಳ ಸೊಗಸಾದ ಹಾಡುಗಾರರಾದ ಶ್ರೀಮತಿ ಗಿರಿಜಾ ಮ. ಕರ್ಪೂರವರು ಸೋಬಾನ, ಬಯಕೆ, ತೊಟ್ಟಿಲ ಹಾಡುಗಳು ಮತ್ತು ಮದುವೆ ಹಾಡುಗಳನ್ನು ತಮ್ಮ ಸುಮಧುರ ಕಂಠದಿಂದ ಹಾಡಿ ಮತ್ತೆ ಮತ್ತೆ ಕೇಳುವಂತೆ ಎಲ್ಲರ ಗಮನ ಸೆಳೆದ ಜಾನಪದ ಗಾಯಕಿ ಇವರು.

ಶ್ರೀಮತಿ ಗಿರಿಜಾ ಕರ್ಪೂರವರು ದಿನಾಂಕ ೨-೬-೧೯೫೨ ರಲ್ಲಿ ಧಾರವಾಡ ಜಿಲ್ಲೆಯ ಉಪ್ಪಿನ ಬೆಟಗೇರಿಯಲ್ಲಿ ಜನಿಸಿದರು. ತಂದೆ ಶ್ರೀ ಶಿವಪುತ್ರಪ್ಪ ಮತ್ತು ತಾಯಿ ಶ್ರೀಮತಿ ನೀಲಮ್ಮ. ಸಂಗೀತ ಪ್ರಿಯರ ಉದರದಲ್ಲಿ ಜನಿಸಿ ಖ್ಯಾತ ಜಾನಪದ ಕಲಾವಿದರಾದ ಹುಕ್ಕೇರಿ ಬಾಳಪ್ಪ ಮತ್ತು ಪ್ರಖ್ಯಾತ ರಂಗಭೂಮಿ ಕಲಾವಿದರಾದ ಶ್ರೀ ಏಣಗಿ ಬಾಳಪ್ಪನವರ ಮಾರ್ಗದರ್ಶನದಲ್ಲಿ ಬೆಳೆದವರು. ತಂದೆಗೆ ಹತ್ತನೇ ಮಗಳಾಗಿದ್ದುದರಿಂದ ಸಂಗೀತಾಭ್ಯಾಸ ಅಷ್ಟೊಂದು ದೊರೆಯಲಿಲ್ಲವಾದರೂ ರಕ್ತಗತವಾಗಿ ಬಂದ ನಾದ, ಲಯಬಿಡದೆ ಜಾನಪದ ಸಂಗೀತ ಲೋಕಕ್ಕೆ ಎಳೆದು ತಂದವು.

ಅಕ್ಕ ಕಸ್ತೂರಕ್ಕ, ಧಾರವಾಡ ಆಕಾಶವಾಣಿಯ ಸಂಪ್ರದಾಯ ಹಾಡುಗಳ ಗಾಯಕಿ. ಅಜ್ಜಿ ಜಾನಪದ ರಚನೆಗಾರ್ತಿ. ಅವರ ಹಾಡುಗಳನ್ನು ಕೇಳಿಸಿಕೊಂಡು ಅವರೊಡನೆ ದನಿಗೂಡಿಸಿ ಅವರೆಲ್ಲರೂ ಕುಟ್ಟುವಾಗ, ಬೀಸುವಾಗ ಹಾಡಿದ ಹಾಡುಗಳನ್ನೇ ಕಲಿತು ಇಂದು ಇಡೀ ನಾಡಿನ ತುಂಬಾ ಖ್ಯಾತರಾಗಿದ್ದಾರೆ.

೧೮-೫-೧೯೭೩ರಲ್ಲಿ ಮಲ್ಲಪ್ಪ ಮಾಣಿಕಪ್ಪ ಕರ್ಪೂರ ಇಂಜನೀಯರರು ಹಾಗೂ ಸಂಗೀತ ಪ್ರೇಮಿಯಾದ ಇವರನ್ನು ಮದುವೆಯಾಗಿ ಬೀದರಕ್ಕೆ ಬಂದರು. ಬೀದರ ಜಿಲ್ಲೆಯ ಪ್ರಸಿದ್ಧ ಹಾಡುಗಾರ್ತಿ ಶ್ರೀಮತಿ ಸುಮಿತ್ರಾ ಪುಣ್ಯಶೆಟ್ಟಿ, ಗುಲಬರ್ಗಾ

ಜಿಲ್ಲೆಯ ಪ್ರಸಿದ್ಧ ಸಂಪ್ರದಾಯ ಹಾಡುಗಾರ್ತಿ. ಶ್ರೀಮತಿ ಸುಶೀಲಮ್ಮ ಪಾಟೀಲ ಅವರಿಂದ ಹಾಡುಗಳನ್ನು ಕಲಿತು ಅವರದೇ ಧಾಟಿಯಲ್ಲಿ ಹಾಡಿ ಹೈದರಾಬಾದ ಕರ್ನಾಟಕದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡರು.

ಸರಳ ಸಹೃದಯಿಯಾದ ಇವರು ಕಲೆಯನ್ನು ಬೆಳೆಸುವ ನಿಟ್ಟಿನಲ್ಲಿ ಶ್ರಮಿಸಿದವರು. ತಮ್ಮೊಡನೆ ಸೊಲ್ಲು ಹಾಡುವವರನ್ನು ಪ್ರಧಾನ ಗಾಯಕಿಯರನ್ನಾಗಿಸಿ ಸಂಪ್ರದಾಯದ ಹಾಡುಗಾರರ ದೊಡ್ಡ ಸಮೂಹವನ್ನೇ ನಿರ್ಮಿಸಿದರು. ಬಯಕೆ, ಋತುಮತಿ, ತೊಟ್ಟಿಲು, ಮದುವೆಯ ಹಾಡುಗಳ ಹತ್ತು ಧ್ವನಿಸುರುಳಿಗಳನ್ನು ಹೊರ ತಂದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ಇವರು ಕುಟ್ಟುವ, ಬೀಸುವ ಹಾಡುಗಳನ್ನು ಪ್ರಾತ್ಯಕ್ಷಿಕವಾಗಿ ಹಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದಲೂ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ವತಿಯಿಂದ "ಜ್ಞಾನ ವಿಜ್ಞಾನ ಪ್ರಶಸ್ತಿ" ಯನ್ನು ಪಡೆದಿದ್ದಾರೆ.

೨೦೦೭ರ ವರೆಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದು, ಸಾಕಷ್ಟು ಕಾರ್ಯಕ್ರಮಗಳನ್ನು ನಿರ್ವಹಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಂದ ಬಿರುದು-ಸನ್ಮಾನಗಳನ್ನು ಪಡೆದ ಇವರಿಗೆ ಗುಲಬರ್ಗಾದ "ಗಾನ ಕೋಗಿಲೆ" ಎನ್ನುವ ಬಿರುದು.

ಗುಲಬರ್ಗಾದ ಶ್ರೀ ಶರಣಬಸವೇಶ್ವರ ಸಂಸ್ಥಾನ, ಗದ್ದುಗೆಮಠ, ಮಕ್ತಂಪುರ ಶ್ರೀಗಳಿಂದ ಸನ್ಮಾನ, ವಚನೋತ್ಸವ ಪರಿಷತ್ತು ಗುಲಬರ್ಗಾದ ಕಲಾಜ್ಯೋತಿ ಎಂಬ ಬಿರುದು ಹಾಗೂ ಮಹಾಂತ ಪ್ರತಿಷ್ಠಾನ "ಗಾನ ಸುರಭಿ" ಎಂಬ ಬಿರುದುಗಳನ್ನು ನೀಡಿ ಸನ್ಮಾನಿಸಿವೆ.

ಸಂಪ್ರದಾಯದ ಹಾಡುಗಳನ್ನು ಸಂಗೀತಕ್ಕೆ ಅಳವಡಿಸಿ ಮದುವೆ ಹಾಡುಗಳು ಎಂಬ ೫ ಧ್ವನಿಸುರುಳಿಗಳನ್ನು ಹೊರ ತಂದಿದ್ದಾರೆ. ಜಾನಪದ ಸಂಗೀತ ಅಭ್ಯಾಸ ಮಾಡಿದ ಇವರು ಈಗಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಎಲ್ಲ ಜಿಲ್ಲೆಗಳಲ್ಲಿ ಜಾನಪದ ಸಂಗೀತ ಕಾರ್ಯಕ್ರಮ ನೀಡುತ್ತಾರೆ. ಅಪಾರ ಸಂಗೀತ ಪ್ರೇಮಿಗಳನ್ನು, ಶಿಷ್ಯಂದಿರನ್ನೂ ಹೊಂದಿರುವ ಇವರದು ತೃಪ್ತಿ ಜೀವನ. ನೆಮ್ಮದಿಯ ಅಭಿಮಾನಿ ಬಳಗ ಹೊಂದಿದ ಇವರ ಜಾನಪದ ಕಲಾಸೇವೆ ಉನ್ನತವಾದುದು.

ಶ್ರೀಮತಿ ಗಿರಜಾ ಮ. ಕರ್ಪೂರ
ಮ. ನಂ. ೧-೮೬೭ (೫೪) ಇ, ಮಾಣಿಕ್ಯ ದೀಪ್ತಿ
ವೆಂಕಟೇಶ ನಗರ, ಗುಲ್ಬರ್ಗಾ

## ಅವ್ವ ಗೌರವ್ವ ಕಾಡಾದಿ

"ಅವ್ವ ಹಾಡಿದ ಹಾಡುಗಳು" ಎಂಬ ಹಾಡುಗಳ ಗ್ರಂಥ ೨೫-೫-೨೦೦೭ ರಂದು ವಿಜೃಂಭಣೆಯಿಂದ ಬಿಡುಗಡೆಯಾಯಿತು. ಎಂಬತ್ತೈದು ವಯಸ್ಸಿನಲ್ಲಿ ಒಂದು ಅಕ್ಷರ ತಪ್ಪದೆ ಒಂದು ದಾಟಿಯನ್ನು ಮರೆಯದೇ ೩೦೦ಕ್ಕೂ ಹೆಚ್ಚು ಹಾಡುಗಳನ್ನು ಬಾಯಿಪಾಠ ಹೇಳಿ ನಮ್ಮೆಲ್ಲರನ್ನೂ ಬೆರಗೊಳಿಸುವ ಈ ಹಿರಿಯು ಕಲಾವಿದೆಯ ಮೆದುಳಿನ ಕಂಪ್ಯೂಟರ್ ೨೧ನೇ ಶತಮಾನದ ಕಂಪ್ಯೂಟರ್‌ಗೆ ಏನೂ ಕಡಿಮೆ ಇಲ್ಲ. ಈಗ ಅವರ ಹುಟ್ಟುಹಬ್ಬ ದಿನದಂದು ಅವರ ಹಿರಿಯ ಮಗ ಕೆ.ಇ.ಬಿ. ನಿವೃತ್ತ ಅಭಿಯಂತರ ಶ್ರೀ ಮಲ್ಲಿಕಾರ್ಜುನ ಕಾಡಾದಿ ಅವರು ತಮ್ಮ ತಾಯಿಗೆ ಹಾಡಲು ಬರುವ ಎಲ್ಲ ಹಾಡುಗಳನ್ನು ಒಟ್ಟುಗೂಡಿಸಿ ಗ್ರಂಥ ರೂಪದಲ್ಲಿ ಸಂಪಾದಿಸಿ ೧೦ ಧ್ವನಿಸುರಳಿಗಳನ್ನೂ ಮುದ್ರಿಸಿ ಜಾನಪದ ಲೋಕಕ್ಕೆ ಒಳ್ಳೆಯ ಉಡುಗೊರಯನ್ನೇ ಕೊಟ್ಟಿದ್ದಾರೆ. ಜಾನಪದ ಸಾಹಿತ್ಯ, ಜಾನಪದ ಸಂಗೀತ ಉಳಿಸಿ, ಬೆಳೆಸುವಲ್ಲಿ ಮಹತ್ತರ ಸಾಧನೆಯನ್ನೇ ಮಾಡಿದ್ದಾರೆ. ೨-೩ ತಿಂಗಳುಗಳ ಹಿಂದೆ ತಾಯಿಯನ್ನು ಕೇಳಿ ಹಾಡಲು ಹೇಳಿದಾಗ ಎಂದೋ ಫೀಡ್ ಆದ ಜಾನಪದ ಹಾಡುಗಳು ಇಂದು ನಿರರ್ಗಳವಾಗಿ ಅವರ ಬಾಯಿಯಿಂದ ಚಾಚೂ ತಪ್ಪದೆ ಹೊರ ಬಂದವು. ಶ್ರೀ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಖ್ಯಾತ ಉಪನ್ಯಾಸಕರೂ ಆದ, ವಿದ್ವಾಂಸರೂ ಆದ ಡಾ. ನೀಲಾಂಬಿಕಾ ಪೋಲಿಸ್ ಪಾಟೀಲ ಅವರು ೨-೩ ತಿಂಗಳುಗಳಿಂದ ಸತತವಾಗಿ ದಿನಾಲೂ ಸಂಜೆ ೭ ರಿಂದ ರಾತ್ರಿ ೯ ಗಂಟೆಯವರೆಗೆ ಅವರೊಡನೆ ಕೂತು ಅವರು ಹೇಳಿದ ಎಲ್ಲಾ ಹಾಡುಗಳನ್ನು ಬರೆದು ಸಂಪಾದಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಿ ಜಾನಪದ ಸಾಹಿತ್ಯ ಉಳಿಯುವಲ್ಲಿ ಅಮೋಘ ಸೇವೆ ಸಲ್ಲಿಸಿದ್ದಾರೆ.

ಅಜ್ಜಿಯವರ ಮಕ್ಕಳು ದೊಡ್ಡ ಅಧಿಕಾರಿಗಳಾಗಿ, ಮೊಮ್ಮಕ್ಕಳು ವಿದೇಶಗಳಲ್ಲಿ ಹೆಸರು ಗಳಿಸಿ, ಮರಿಮೊಮ್ಮಕ್ಕಳು ಅಷ್ಟೇ ಪ್ರತಿಭಾವಂತರಾಗಿ ಬೆಳೆಯುತ್ತಿದ್ದಾರೆ. ಇಂತಹ

ಸೌಭಾಗ್ಯದ ಅಜ್ಜಿ ಬೀದರ ಜಿಲ್ಲೆ ಹುಲಸೂರು ಗ್ರಾಮದವರು. ಶರಣ ಶ್ರೀ ಮನ್ಮಥಪ್ಪ ಕಾಡಾದಿ ಅವರ ಧರ್ಮಪತ್ನಿ.

ಮನೆಯಲ್ಲಿ ೧೨ ಜನ ಸೊಸೆಯಂದಿರು, ೧೫ ಜನ ಹೆಣ್ಣುಮಕ್ಕಳು ಮತ್ತು ಮೊಮ್ಮಕ್ಕಳನ್ನು ಪಡೆದ ಇವರು ಎಲ್ಲರಿಗೂ ಹಾಡುಗಳನ್ನು ಕಲಿಸಿದ್ದಾರಲ್ಲದೆ ಅವರೆಲ್ಲರಿಗೂ ಆಕಾಶವಾಣಿ, ದೂರದರ್ಶನಗಳಲ್ಲಿ ಪ್ರಧಾನ ಹಾಡುಗಾರರಾಗಲು ಪ್ರೋತ್ಸಾಹಿಸಿದ್ದಾರೆ. ಊರಲ್ಲಿ ಮನೆಯ ಮುಂದೆ ಮಠ, ಗುಡಿಗಳಿದ್ದು ಮಠದ ಶ್ರೀಗಳ ಆಶೀರ್ವಾದದಿಂದ ಮಠದಲ್ಲಿ ಅಕ್ಕನ ಬಳಗ ಸ್ಥಾಪಿಸಿ ಊರಿನ-ಪರೂರಿನ ಅಕ್ಕಂದಿರು ಅಲ್ಲಿ ನೆರೆದು ಶರಣ ಸಾಹಿತ್ಯವನ್ನು ಜಾನಪದ ಹಾಡುಗಳನ್ನು ಹರಡಿ ಅಪಾರ ಶಿಷ್ಯಂದಿರನ್ನು ಪಡೆದ ಕೀರ್ತಿ ಇವರದು. ಶಿಷ್ಯಂದಿರು ಹಾಡುವಾಗ ಎರಡೂ ಕಣ್ಣುಗಳನ್ನು ಮುಚ್ಚಿ ತಲ್ಲೀನರಾಗಿ ಆನಂದಿಸುತ್ತಾರೆ ಈ ಹಿರಿಯಜ್ಜಿ.

**ಶ್ರೀಮತಿ ಸರಸ್ವತಿ ಮಲ್ಲಿಕಾರ್ಜುನ ಕಾಡಾದಿ**<br>
**ಗೋದುತಾಯಿ ನಗರ**<br>
**೬ನೇ ಮುಖ್ಯ ರಸ್ತೆ**<br>
**೮ನೇ ಕ್ರಾಸ್, ಶಿವನಿಲಯ**<br>
**ಗುಲಬರ್ಗಾ**

# ತುಕಾರಾಮ ನೀಲಪ್ಪ ಭಜಂತ್ರಿ

ಎಲೆ ಮರೆಯ ಕಾಯಿಯಂತೆ ತುಕಾರಾಮ ಅವರ ಸೇವೆ ಶ್ಲಾಘನೀಯ. ಕರಜಗಿಗೆ ಹೋಗಿ ಸಣ್ಣ ಮಕ್ಕಳನ್ನೂ ಕೇಳಿದರೆ ಇವರ ಮನೆಗೆ ಕರೆದೊಯ್ಯುತ್ತಾರೆ. ೧೭-೧೦-೧೯೨೮ರಲ್ಲಿ ತಂದೆ ತುಕಾರಾಮ ತಾಯಿ ಭಾಗಮ್ಮನವರ ಉದರದಲ್ಲಿ ಹೆಸರಾದ ಮಾಶಾಳದಲ್ಲಿ ಜನಿಸಿದರು. ೭೯ನೇ ವಯಸ್ಸಿನಲ್ಲಿಯೂ ಇವರ ಎಳೆ ಮುಖ, ಬಿಳಿ ಗಡ್ಡ, ಮೀಸೆ, ತಲೆಯಲ್ಲಿ ಬಿಳಿ ಕೇಶರಾಶಿ, ಸದಾ ಸಂತರ ನೆನಪು ತರುತ್ತದೆ. ಜಾನಪದ ಕಲೆಗಳಲ್ಲಿ ಅತೀ ವಿರಳವಾಗಿರುವ, ಅಪರೂಪದ ಅದ್ಭುತ ಶಹನಾಯಿ ಕಲಾವಿದರು.

ತಂದೆಯಿಂದ ಕಲಿತು ಮುಂದೆ ಬಸಪ್ಪ ಮಾಸ್ತರ ಸೊರಗಿಹಳ್ಳಿಯವರಲ್ಲಿ ಅನೇಕ ವರ್ಷಗಳ ಕಾಲ ಅಭ್ಯಾಸ ಮುಂದುವರೆಸಿ ೧೫ ವರ್ಷ ತಪಸ್ಸು ಮಾಡಿದ್ದಾರೆ. ಸುಮಾರು ೩೭ ವರ್ಷಗಳಿಂದ ಆಕಾಶವಾಣಿ ಕಲಾವಿದರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಗುರುತಿಸಿ ಮೈಸೂರು ದಸರಾ ಉತ್ಸವ, ಹಂಪಿಯ ಉತ್ಸವ, ಸಾಹಿತ್ಯೋತ್ಸವ, ಕಲಾಮೇಳ, ಜಾನಪದ ಮೇಳ, ಜಾನಪದ ಜಾತ್ರೆಗಳಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಹಾರಾಷ್ಟ್ರ, ಕನ್ನಡ ಗಡಿಭಾಗ, ಹೈದರಾಬಾದ ಕರ್ನಾಟಕಗಳಲ್ಲಿ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈ ಮುಪ್ಪಿನ ಕಾಲದಲ್ಲಿ ಇವರಿಗೆ ಇನ್ನೂ ಮಾಸಾಶನ ದೊರೆತಿಲ್ಲ ಅಲ್ಲದೆ ಸರಕಾರದ ಯಾವುದೇ ಪ್ರಶಸ್ತಿಗಳೂ ಬಂದಿಲ್ಲ. ಸಂಘ ಸಂಸ್ಥೆಗಳಿಂದ ಸಂದ ಸನ್ಮಾನ-ಬಿರುದುಗಳು ಅಪಾರ.

೧. ಮೈಸೂರು ದಸರಾ ಉತ್ಸವ - ೧೯೯೬
೨. ಗುಲಬರ್ಗಾ ಕಲಾ ಮೇಳ - ೧೯೯೩
೩. ಸಾಹಿತ್ಯೋತ್ಸವ ಅಫಜಲಪುರ - ೧೯೯೨

೪. ಯುವಜನ ಮೇಳ – ಅಫಜಲಪುರ – ೧೯೮೯
೫. ತಾಲೂಕ ಮಟ್ಟದ ಜಾನಪದ ಮೇಳ ಮಾಶಾಳ
೬. ಅಖಿಲ ಕರ್ನಾಟಕ ಜಾನಪದ ದಲಿತ ಕಲಾಮೇಳ – ೧೯೯೬
೭. ರಾಜ್ಯಮಟ್ಟದ ಜಾನಪದ ಕಲಾಮೇಳ – ೧೯೯೮
೮. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದ ಮೇಳ – ೨೦೦೧
೯. ಕನ್ನಡ ರಾಜ್ಯೋತ್ಸವ ಅಫಜಲಪೂರ – ೨೦೦೦
೧೦. ಕಲ್ಬುರ್ಗಿ ಜಾನಪದ ಮತ್ತು ಸಾಹಿತ್ಯ ಕಲಾಮೇಳ ಕಮಲಾಪೂರ–೨೦೦೩

**ತುಕಾರಾಮ ನಿ. ಭಜಂತ್ರಿ**
**ಅಂಚೆ : ಕರಜಗಿ**
**ತಾ : ಅಫಜಲಪೂರ, ಜಿ : ಗುಲಬರ್ಗಾ**

## ಧನಸಿಂಗ್ ಚವ್ಹಾಣ

೫೮ ವರ್ಷ ವಯಸ್ಸಿನ ಶ್ರೀ ನವಸಿಂಗ್ ಅವರು ರಾಜ್ಯಾದ್ಯಂತ ತಮ್ಮ ಹಾಡುಗಾರಿಕೆಗೆ ಹೆಸರಾಗಿದ್ದಾರೆ. ಚವ್ಹಾಣ ಅವರ ಮನೆತನದ ಹೆಸರು ಸೂಚಿಸುವಂತೆ ಲಂಬಾಣಿ ಮನೆತನದಲ್ಲಿ ಜನನ. (ಗುಲಬರ್ಗಾ ಜಿಲ್ಲೆಯ ಮೋಖ ತಾಂಡಾ ಸರಡಗಿ ಗ್ರಾಮದಲ್ಲಿ) ಶ್ರೀನಿವಾಸ ಸರಡಗಿ ಕಲೆಗಳ ತವರೂರು. ಅಂಥ ಪುಣ್ಯಕ್ಷೇತ್ರದಲ್ಲಿ ಜನಿಸಿದ ಇವರಿಗೆ ಹಾಡುಗಾರಿಕೆ ವರವೂ ಹೌದು, ವಂಶ ಪರಂಪರೆಯೂ ಹೌದು. ಹಲಗೆ ಇವರ ವಾದ್ಯ. ತಂದೆಯವರು ಹಾಡುವಾಗ ಹಲಗೆ ಬಾರಿಸುವುದು, ಹಾಡುವುದನ್ನು ಗಮನಿಸುತ್ತ ತಾನೇ ಕಲಿತು ಹಾಡಲು ಬಾರಿಸಲು ತೊಡಗಿದ.

ತಂದೆಯವರೂ ಕೂಡಾ ಸಂಘಟನಾಕಾರರು. ತಾಂಡಾದಲ್ಲಿ ಹಲಗೆ ಬಾರಿಸುವುದು, ಹಾಡುವುದು, ಹೆಣ್ಣು ಮಕ್ಕಳು ಕುಣಿಯುವುದು, ಲಂಬಾಣಿ ಜಾನಪದ ವೈಶಿಷ್ಟ್ಯ. ಹೆಣ್ಣು ಮಕ್ಕಳಿಗೆ ಲಯಬದ್ಧವಾಗಿ ನೃತ್ಯ ಮಾಡಲು ಪಾಠ ಹೇಳಿಕೊಡುವುದು, ಅವರನ್ನು ಪರಿಣಿತರನ್ನಾಗಿ ಮಾಡುವುದು, ಇಂದಿನ ಆಧುನಿಕ ಯುಗದಲ್ಲಿ ಇವರ ವೇಷ-ಭೂಷಣಗಳು ನಶಿಸಿ ಹೋಗದಂತೆ ಅವುಗಳ ಮೂಲವನ್ನು ಉಳಿಸುವಲ್ಲಿ ಶ್ರಮಿಸುತ್ತಿದ್ದಾರೆ. ತಂದೆಯವರಿಂದ ಬಂದ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಇವರ ಪ್ರಯತ್ನವೂ ಪ್ರಸಂಶನೀಯ.

ಗುಲಬರ್ಗಾ ಜಿಲ್ಲೆಯ ಅನೇಕ ತಾಂಡಾಗಳಿಗೆ ಹೋಗಿ ತಮ್ಮ ಸಂಸ್ಕೃತಿ, ಕಲೆಯನ್ನು ಪರಿಸಿ ಅವರೆಲ್ಲರಿಗೂ ಆಕಾಶವಾಣಿ, ದುರದರ್ಶನದಂತಹ ಮಾಧ್ಯಮಗಳಿಗೆ ಕರೆದೊಯ್ದು ಕಲೆಯನ್ನು ಬೆಳೆಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.

ಆಕಾಶವಾಣಿ, ದೂರದರ್ಶನ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಖ್ಯಾತ ಲಂಬಾಣಿ ಹಾಡುಗಾರರು, ಆಕಾಶವಾಣಿಯಲ್ಲಿ ಬಿ ಗ್ರೇಡ್ ಪಡೆದು ೩೦ ವರ್ಷಗಳಿಂದ ಸತತವಾಗಿ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ, ಬೆಂಗಳೂರು, ರಾಯಚೂರು, ಬಿಜಾಪುರ, ಜಿಲ್ಲಾ ಜಾನಪದ ಮೇಳ, ಜಾತ್ರೆ, ದಿಬ್ಬಣ, ಜಯಂತಿಗಳಂತಹ ದೊಡ್ಡ ದೊಡ್ಡ ಉತ್ಸವಗಳಲ್ಲಿ ಪಾಲ್ಗೊಂಡು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೨೦೦೦ನೇ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ಧನಸಿಂಗ ಚವ್ಹಾಣ**
**ಲಂಬಾಣಿ ಹಾಡುಗಾರರು**
**ಮೊಖ ತಾಂಡಾ**
**ಶ್ರೀನಿವಾಸ ಸರಡಗಿ, ಗುಲಬರ್ಗಾ**

## ಶಿವಲಿಂಗಯ್ಯ ರೇವಣಸಿದ್ಧಯ್ಯ ಸಾಲಿಮಠ

ಶ್ರೀಯುತರ ತಂದೆ ಶ್ರೀ ರೇವಣಸಿದ್ಧಯ್ಯನವರು ಆಗಿನ ಕಾಲದಲ್ಲಿ (೧೦೦ ವರ್ಷಗಳ ಹಿಂದೆ) ಸುಪ್ರಸಿದ್ಧ ಸಂಗೀತಗಾರರು, ನಾಟಕಕಾರರು. ತಾಯಿ ಭಾಗಿರಥಮ್ಮನವರು ಒಳ್ಳೆಯ ಸಂಪ್ರದಾಯಸ್ಥರು. ಅಂಥ ಕಲಾವಿದರ ಸುಸಂಸ್ಕೃತ ಮನೆತನದಲ್ಲಿ ೧೦-೫-೧೯೪೨ರಲ್ಲಿ ಜನ್ಮ ಪಡೆದು ಕಲೆಯನ್ನು ರಕ್ತದೊಡನೆ ಪಡೆದುಕೊಂಡು ಕಲಾವಿದನಾಗಿಯೇ ಬೆಳೆದವರು. ಇವರ ಕಲೆ ವಂಶ ಪರಂಪರೆಯಾಗಿದ್ದು ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡಾಟದ ಮುಖ್ಯ ಪಾತ್ರಗಳು ಇವರದಾಗಿದ್ದವು.

೬೫ ವಯಸ್ಸಿನ ಶಿವಲಿಂಗಯ್ಯನವರು ೨೫ರ ತರುಣನಂತೆ ಕ್ರಿಯಾಶೀಲರಾಗಿದ್ದಾರೆ. ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ಮಾಶಾಳದವರು. ಪ್ರಸಿದ್ಧ ದೊಡ್ಡಾಟದ ಕಲಾವಿದರು. ಕರ್ನಾಟಕದ ತುಂಬ ತಿರುಗಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ ಕೋಲಾರ, ಗುಲಬರ್ಗಾದಲ್ಲಿ ಕಾರ್ಯಕ್ರಮ ನೀಡಿ ಖ್ಯಾತಿ ಗಳಿಸಿದ್ದಾರೆ. ಇವರ ಪಾತ್ರಗಳೆಂದರೆ ಬಸವೇಶ್ವರ, ದೇವೇಂದ್ರ, ಕೃಷ್ಣನ ಪಾತ್ರಗಳು. ಇವಲ್ಲದೆ ಶ್ರೀ ಕೃಷ್ಣ ಪಾರಿಜಾತದಲ್ಲಿ ಪರಿಣಿತರು. ರಂಗ ಶಾಲೆಯ ವಿವಿಧ ಭಾಗಗಳಾದ ಹಾರ್ಮೋನಿಯಂ ನುಡಿಸುವುದು, ತಬಲಾ ಬಾರಿಸುವುದು, ಗೆಜ್ಜೆ ನುಡಿಸುವುದು ಎಲ್ಲ ವಾದ್ಯಗಳಲ್ಲೂ ಪರಿಣಿತರು. ಪ್ರತಿದಿನವೂ ದೊಡ್ಡಾಟದಲ್ಲಿಯ ಎಲ್ಲ ಕಲಾವಿದರಿಗೂ ಅಭ್ಯಾಸ ಮಾಡಿಸುವುದು ಇವರ ಕಾಯಕ. ೧೯೯೭ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ವತಿಯಿಂದ ಗುರು-ಶಿಷ್ಯ ಪರಂಪರೆಯ ದೊಡ್ಡಟ ಕಲಿಕೆಯ ತರಬೇತಿಯಲ್ಲಿ ಇಂದಿನವರೆಗೆ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾ ಬಂದಿದ್ದಾರೆ.

೧೯೮೭ ರಿಂದ ಆಕಾಶವಾಣಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿರುವ ಇವರು ಗುಲಬರ್ಗಾ, ಬೆಂಗಳೂರು ದೂರದರ್ಶನದ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದಾರೆ. ೧೯೮೮ರಲ್ಲಿ ಮಾಶಾಳದಲ್ಲಿ ದೊಡ್ಡಾಟ ಸಂಘ ಸ್ಥಾಪಿಸಿ ೪೦ ಜನರನ್ನೊಳಗೊಂಡ ಇವರ ಸಂಘ ಅದ್ದೂರಿಯಾಗಿ ಕಾರ್ಯಕ್ರಮಗಳನ್ನು ನೀಡುತ್ತಿದೆ. ೨೦೦೬ರಲ್ಲಿ ಜರುಗಿದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ವಿಚಾರ ಸಂಕಿರಣದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಕೆರೆಮನೆ ಶಂಭು ಹೆಗಡೆಯವರು ಸನ್ಮಾನಿಸಿ ಗೌರವಿಸಿದರು. ಹಿರಿಯ ಜಾನಪದ ಸಾಹಿತಿಗಳಾದ ಎ. ಕೆ. ರಾಮೇಶ್ವರರು ಸದಸ್ಯತ್ವದಲ್ಲಿ ದೊಡ್ಡಾಟದ ಚಿತ್ರಣವನ್ನೊಳಗೊಂಡ ವೇಷ, ರಂಗ ನೀತಿಗಳು, ಹಂತಿ ಹಾಡುಗಳು, ತಬಲಾ, ಹಾರ್ಮೋನಿಯಂ, ದಮ್ಮಡಿ, ಗೆಜ್ಜೆ ಕುಣಿತದ ಪ್ರಾಕಾರಗಳನ್ನು ಎಲ್ಲ ಮಾಶಾಳ ಕಲಾವಿದರ ವಿವರಗಳನ್ನೊಳಗೊಂಡ ಗ್ರಂಥ ಪ್ರಕಟಗೊಂಡಿವೆ. ಆ ಗ್ರಂಥದ ಸಂಪಾದಕರು ಮತ್ತು ಮಾಹಿತಿಗಾರರು ಶ್ರೀ ಶಿವಲಿಂಗಯ್ಯನವರು.

## ಅಮೃತೇಶ ಕಲಶೆಟ್ಟಿ

೭೩ರ ತರುಣ ಉತ್ಸಾಹಿ, "ಹಾಸ್ಯ ಚಕ್ರವರ್ತಿ", "ಆಶುಕವಿ" ಎಂಬ ಬಿರುದುಗಳನ್ನು ಪಡೆದ ಹಾಸ್ಯ ಜಾನಪದ ಕಲಾವಿದ. ಜನರನ್ನು ನಗಿಸಿ, ಅವರ ಆರೋಗ್ಯ ಹೆಚ್ಚಿಸುವಲ್ಲಿ ತಮ್ಮ ಹಾಸ್ಯ ಜಾನಪದ ಕಲಾಸೇವೆಯಲ್ಲಿ ಖ್ಯಾತಿ ಪಡೆದವರು. ನೀತಿ ಪದಗಳು, ಹಾಸ್ಯ ಪದಗಳು, ತತ್ವಪದಗಳು, ಹಂತಿ ಪದಗಳನ್ನು ಆಗಿಂದಾಗಲೇ ರಚಿಸಿ ಹಾಡಿ ಜನರನ್ನು ರಂಜಿಸುವುದು, ದುಶ್ಚಟಗಳ ಪರಿಣಾಮದ ಮೇಲೆ ಹಾಡುಗಳನ್ನು ಹಾಡಿ ಸರಕಾರದ ಹಲವಾರು ಯೋಜನೆಗಳನ್ನು ಪ್ರಚಾರಿಸುವಲ್ಲಿ ಯಶಸ್ವಿಯಾದವರು.

ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಇಲಾಖೆ, ಕೇಂದ್ರ ಸರಕಾರದ ಸಂಗೀತ ಮತ್ತು ನಾಟಕ ವಿಭಾಗ ವತಿಯಿಂದ ಸುಮಾರು ೩೩ ವರುಷಗಳ ಕಾಲ ಸತತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಪೇಠಶಿರೂರ ಎಂಬ ಗ್ರಾಮದಲ್ಲಿ ೧೯೩೭ರಲ್ಲಿ ಶ್ರೀ ರೇವಪ್ಪ ಮತ್ತು ಪಾರ್ವತಮ್ಮರ ಸಂಸ್ಥಾನಿಕ ಮನೆತನದಲ್ಲಿ ಚೊಚ್ಚಿಲ ಮಗನಾಗಿ ಜನಿಸಿದರು. ಶಿಕ್ಷದಲ್ಲಿ ಅಷ್ಟೊಂದು ಆಸಕ್ತಿ ಹೊಂದದ ಇವರು ಚಿಕ್ಕಂದಿನಲ್ಲೇ ಕೊಳಲು, ಡೋಲಕ, ಪೇಟಿ, (ಹಾರ್ಮೋನಿಯಂ) ಬುಲ್ ಬುಲ್ ತರಂಗ ಬಾರಿಸುವುದು ಹವ್ಯಾಸಗಳಿದ್ದವು. ಪೇಠಶಿರೂರಿನ ಶ್ರೀ ಸಿದ್ಧಲಿಂಗೇಶ್ವರ ಮಠದ ಶ್ರೀಮನ್‌ನಿರಂಜನ ಪ್ರಣವ ಸ್ವರೂಪಿ ಪಂಚಾಕ್ಷರಿ ಮಹಾಸ್ವಾಮಿಗಳ ಕೃಪಾಕಟಾಕ್ಷದಿಂದ ಸಾಹಿತ್ಯ ಹಾಗೂ ಜಾನಪದ ಸಂಗೀತ ಕ್ಷೇತ್ರದಲ್ಲಿ ಧುಮುಕಲು ಪ್ರೇರಣೆ ದೊರೆಯಿತು.

ಖ್ಯಾತ ಸಂಗೀತ ವಿದ್ವಾಂಸರಾದ ಅಮೀರಖಾನ್ ಮತ್ತು ಗುರುಬಸಪ್ಪ ಹೆಬ್ಬಾಳ ಪೇಠ ಶಿರೂರ ಇವರ ಆಶೀರ್ವಾದ ಹೊತ್ತು ಗುಲಬರ್ಗಾಕ್ಕೆ ಬಂದ ಮೇಲೆ ಪೂಜ್ಯ

ಶ್ರೀ ಶರಣಬಸವಪ್ಪ ಅಪ್ಪಾ ಶ್ರೀ ಶರಣಬಸವೇಶ್ವರ ಸಂಸ್ಥಾನ ಮತ್ತು ಗದ್ದುಗೆಮಠ ಮಕ್ತಂಪೂರ ಇವರ ಆಶೀರ್ವಾದ ದೊರೆತು ಕಲಾಸೇವೆ ಮುಂದುವರೆದು ಗದ್ದುಗೆ ಮಠದ ಶ್ರೀಗಳು ಇವರ ೫೦ ಜಾನಪದ ಗೀತೆಗಳ ಪುಸ್ತಕವನ್ನು ಪ್ರಕಟಿಸಿದರು. ಈ ಹಾಸ್ಯ ಕವಿ ಹಾಡಿದನೆಂದರೆ ಹೊಗೆ, ಧಗೆ ಇದ್ದವರು ಕೂಡಾ ನಕ್ಕು ಬಿಡುತ್ತಾರೆ.

ಇವರ ಕಾಯಕ ಒಂದು ಉತ್ತಮ ಸಂಪ್ರದಾಯದ್ದಾಗಿದೆ. ಅಲ್ಲದೆ ಅನುಪಮ, ಸ್ತುತ್ಯಾರ್ಹ ಸತ್ಕಾರ್ಯವಾಗಿದೆ. ಇವರ ಜಾನಪದ ಹಾಡುಗಳ ಪುಸ್ತಕ, ಧ್ವನಿಸುರಳಿಗಳ ಮೂಲಕ ಜನರಿಗೆ ಅತೀ ಪ್ರಿಯವಾಗಿವೆ.

ಆರೋಗ್ಯ ಇಲಾಖೆ, ಆಕಾಶವಾಣಿ, ದೂರದರ್ಶನಗಳಲ್ಲದೆ ಧಾರ್ಮಿಕ ಕ್ಷೇತ್ರದಲ್ಲೂ ಕೀರ್ತನೆ, ಪ್ರವಚನ ಹೇಳುವುದರಲ್ಲಿ ಎತ್ತಿದ ಕೈ. ಅಧ್ಯಯನವಿಲ್ಲದೆ ಬರೀ ಲೌಕಿಕ ಜೀವನಾನುಭವದಿಂದ ಕಂಡಂಥ ಅನುಭವಗಳನ್ನು ಪ್ರಾಸದೊಂದಿಗೆ, ತ್ರಾಸವಿಲ್ಲದೆ ಮಾತನಾಡುವ ನುಡಿಗಳನ್ನು ಆಡುಭಾಷೆಯಲ್ಲಿ ಒಂದೆಡೆ ಬರೆದು ಜನಪದ ಶೈಲಿಯಲ್ಲಿ ಜೀವನದ ವಿವಿಧ ಮುಖಗಳ ಬಗ್ಗೆ ಸಮಾಜದ ಸಮಗ್ರ ಚಿತ್ರಣವನ್ನು ತಮ್ಮ ಜನಪದಗಳಲ್ಲಿ ಚಿತ್ರಿಸಿದ್ದಾರೆ.

ಅಮೃತೇಶ ಕಲ್ಲಶೆಟ್ಟಿ
(ಜಾನಪದ ಸಂಗೀತ ಕಲಾವಿದರು)
ಸಂತ್ರಸವಾಡಿ, ಗುಲಬರ್ಗಾ

# ಶಾಂತಪ್ಪ ವೀರಭದ್ರಪ್ಪ ಉಡುಚಣ

ಶಾಂತಪ್ಪ ೭೪ರ ಉತ್ಸಾಹಿ. ಬಯಲಾಟ ಕಲಾವಿದರು. ಸತತ ೪೦ ವರ್ಷಗಳ ಕಾಲ ೨೦ ಜನರ ತಂಡದೊಂದಿಗೆ ಹೈದರಾಬಾದ ಕರ್ನಾಟಕದಲ್ಲಿ ಅದ್ದೂರಿಯಾಗಿ ಮೆರೆದವರು. ತಮ್ಮ ಕಲೆಯ ಸೇವೆಯಲ್ಲಿ ನಿರಂತರ ಸಾಗಿಬಂದವರು.

ಇವರ ಕಾಲ (ನಿಜಾಮ)ದಲ್ಲಿ ಕನ್ನಡ ಅಷ್ಟೊಂದು ಬಳಕೆಯಲ್ಲಿ ಇರಲಿಲ್ಲ. ಎಲ್ಲ ವ್ಯವಹಾರಗಳು ಮರಾಠಿ ಭಾಷೆಯನ್ನು ಹೋಲುವ ಮೋಡಿ ಭಾಷೆ ಮತ್ತು ಉರ್ದು ಭಾಷೆಗಳಲ್ಲಿದ್ದವು. ಎಲ್ಲ ಬಯಲಾಟಗಳ ಭಾಷೆಯೂ ಕೂಡಾ ಮೋಡಿಯಾಗಿದ್ದವು. ಇಂತಹ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರಿಸಿ ಕನ್ನಡ ಉಳಿಸುವಲ್ಲಿ, ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಬಯಲಾಟದ ವೇಷಭೂಷಣ, ಪಾತ್ರಧಾರಿ, ಸಂಗೀತ, ನೃತ್ಯ ಎಲ್ಲದರಲ್ಲೂ ಪರಿಣಿತರು. ಬಯಲಾಟದ ಯಾವ ಪಾತ್ರಧಾರಿ ಕೊರತೆಯಿದ್ದರೂ ಅದನ್ನು ನಿಭಾಯಿಸುವುದು ಇವರ ಜಾಯಮಾನ. ಮುಂಜಾನೆಯಿಂದ ಸಂಜೆಯವರೆಗೆ ಎಲ್ಲರನ್ನು ತರಬೇತುಗೊಳಿಸಿ ರಾತ್ರಿ ಪಾತ್ರ ಮಾಡುವುದು ಇವರಿಗೆ ಕರಗತ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ, ಆಕಾಶವಾಣಿ, ದೂರದರ್ಶನಗಳ ಮುಖಾಂತರ ರಾಜ್ಯದಾದ್ಯಂತ ಹೆಸರುವಾಸಿಯಾಗಿದ್ದಾರೆ.

ಗುಲಬರ್ಗಾದಲ್ಲಿ ಪ್ರತಿವರ್ಷ ಹೋಳಿ ಹುಣ್ಣಿಮೆಯಂದು ಪ್ರತಿಯೊಂದು ಬಡಾವಣೆಯಲ್ಲಿ ಒಂದೊಂದು ದಿನ ಬಯಲಾಟದ ಪ್ರದರ್ಶಿಸುತ್ತಿದ್ದರು. ಶ್ರೀ ಶರಣಬಸವೇಶ್ವರ ಸಂಸ್ಥಾನದ ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ ಅವರಿಂದ ಮೆಚ್ಚಿಗೆ ಪಡೆದು "ಬೆಳ್ಳಿ ಕಡಗ"ವನ್ನು ಪಡೆದಿದ್ದಾರೆ. ಕಲೆಯ ಸೇವೆ ನಿರಂತರವಾಗಿ ಸಾಗಿಕೊಂಡು ಬಂದಿದೆ. ಹಲವಾರು ಬಯಲಾಟ ಸಂಘಗಳಿಗೆ ನಿರ್ದೇಶನ ನೀಡಿ ಬಿರುದು ಸನ್ಮಾನಗಳನ್ನು

ಪಡೆದಿದ್ದಾರೆ. ಈಗಲೂ ಬಯಲಾಟ ನಿರ್ದೇಶನವನ್ನು ಮಾಡುತ್ತಾರೆ. ಇದಲ್ಲದೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವ ವಹಿಸಿ (ಮದುವೆ-ಮೃತ್ಯು) ಎಲ್ಲರಿಗೂ ಅಚ್ಚು-ಮೆಚ್ಚು ಆಗಿದ್ದಾರೆ.

ಈಗ ಊರಲ್ಲಿ ಗುಡಿ-ಗುಂಡಾರಗಳನ್ನು ಕಟ್ಟಿಸುವುದು, ಗುಡಿಗಳಲ್ಲಿ ಪುರಾಣ, ಕೀರ್ತನೆಗಳನ್ನು ನಡೆಸುವುದರ ಮೂಲಕ ಆಧ್ಯಾತ್ಮಿಕ ಸೇವೆ ಸಲ್ಲಿಸುತ್ತಿದ್ದಾರೆ. ಹಲವು ಸಂಘ-ಸಂಸ್ಥೆಗಳಲ್ಲಿ ಕಾರ್ಯದರ್ಶಿಗಳಾಗಿ ಸಾಹಿತ್ಯ, ಸಂಗೀತ, ಬಯಲಾಟಗಳಿಂದ ಯುವ ಕಲಾವಿದರಿಗೆ ಮಾರ್ಗದರ್ಶಿಗಳಾಗಿದ್ದಾರೆ.

**ಶಾಂತಪ್ಪ ವೀರಭದ್ರಪ್ಪ ಉಡಚಣ**
**ದೊಡ್ಡಾಟ ಕಲಾವಿದರು**
**ಬಸವೇಶ್ವರ ನಗರ, ಗುಲಬರ್ಗಾ**

# ಬಂಗಾರೆವ್ವ ಸಾಲಿ

ಈ ಭಾಗದ ಯಾರದೇ ಮನೆಯಲ್ಲಿ ಮದುವೆಗಳಿದ್ದರೆ ಒಂದು ತಿಂಗಳು ಮೊದಲೇ ಹೆಸರಾಂತ ಸಂಪ್ರದಾಯ ಹಾಡುಗಾರ್ತಿಯಾದ ಬಂಗಾರೆವ್ವನನ್ನು ನೆನೆದು ಅವರಿಗೆ ಹೇಳಿಬರುವ ಪರಿಪಾಠ.

ಬಂಗಾರೆವ್ವ ಸಾಲಿ ೭೦ ವಯಸ್ಸಿನಲ್ಲಿಯೂ ಹುಮ್ಮಸ್ಸಿನಿಂದ ಹಾಡುವರು. ಸಂಪ್ರದಾಯ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಇನ್ನೂ ಈ ಕಲೆಗೆ ಸೇವೆ ಸಲ್ಲಿಸುವ ಹಂಬಲ ಹೊತ್ತಿರುವ ಬಂಗಾರೆವ್ವ ಸಾಲಿ ಅವರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಸರಸಂಬಿಯಲ್ಲಿ ಚನ್ನಪ್ಪ ಮತ್ತು ಲಕ್ಷ್ಮಿಬಾಯಿ ದಂಪತಿಗಳ ಮಗಳಾಗಿ ಜನಿಸಿದವರು.

ಸದಾ ಹಾಡಿನ ಗುಂಗಿನಲ್ಲಿ ಇರುತ್ತಿದ್ದ ಬಂಗಾರೆವ್ವ ಊರಲ್ಲಿ ಯಾರದೇ ಮನೆಯಲ್ಲಿ ಸಂಪ್ರದಾಯ ಕಾರ್ಯಕ್ರಮಗಳಿದ್ದಾಗ ಹೋಗಿ ಹಾಡುವವರ ಬಳಿಯೇ ಕುಳಿತು ಆಲಿಸಿ ಅವರೊಡನೆ ಹಾಡಲು ಪ್ರಯತ್ನಿಸುತ್ತಿದ್ದಳು. ರಂಗಮ್ಮ ಎಂಬ ಪ್ರಸಿದ್ಧ ಗಾಯಕಿಯ (ಸಂಪ್ರದಾಯ ಹಾಡುಗಾರ್ತಿ) ಪ್ರೇರಣೆಯಿಂದ ಹಾಡಲು ಕಲಿತರು.

ಮುಂದೆ ಅವರ ಬಯಕೆ ಈಡೇರವಂತೆ ಪ್ರಸಿದ್ಧ ಬಯಲಾಟ ಕಲಾವಿದರಾದ ಶ್ರೀ ಶಿವಲಿಂಗಪ್ಪ ಸಾಲಿ ಅವರನ್ನು ವಿವಾಹವಾಗಿ ಗುಲಬರ್ಗಾಕ್ಕೆ ಬಂದರು. ಕಲಾವಂತರನ್ನು ಕೈ ಹಿಡಿದು ತಮ್ಮ ಕಲಾ ಸೇವೆಯನ್ನು ಮುಂದುವರೆಸಲು ಸನ್ನದ್ಧರಾದರು.

ಕುಟ್ಟುವ ಹಾಡು, ಬೀಸುವ ಹಾಡು, ಸೋಬಾನ ಪದಗಳಲ್ಲದೆ ಭಜನೆಯಲ್ಲೂ ಎತ್ತಿದ ಕೈ. ಗುಲಬರ್ಗಾದ ಮಕ್ತಂಪೂರ ಬಡಾವಣೆಯಲ್ಲಿ ಅಕ್ಕನ ಬಳಗ ಸ್ಥಾಪಿಸಿ

ಎಲ್ಲ ಹೆಣ್ಣು ಮಕ್ಕಳಿಗೆ ಅಕ್ಕನಾಗಿ ತಮ್ಮ ಕಲಾ ಸೇವೆಯಿಂದ ಅಕ್ಕನ ಗುಡಿಯನ್ನೇ ಕಟ್ಟಿಸಿ ಅಕ್ಕನ ಮೂರ್ತಿಯನ್ನು ಸ್ಥಾಪಿಸಿ ಪ್ರತಿದಿನವೂ ಅಲ್ಲಿ ಭಜನೆಗಳಿಂದ ಶರಣ ಸಾಹಿತ್ಯವನ್ನು ಬಿತ್ತರಿಸುತ್ತಿದ್ದಾರೆ. ಆಕಾಶವಾಣಿಯಲ್ಲಿ ಮತ್ತು ದೂರದರ್ಶನಗಳಲ್ಲಿ ಸೇವೆ ಸಲ್ಲಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರತಿ ವರ್ಷ ಕಾರ್ಯಕ್ರಮ ಕೊಡುತ್ತ ಹೆಸರು ವಾಸಿಯಾಗಿದ್ದಾರೆ.

ಗುಲಬರ್ಗಾ ನಗರದಲ್ಲಿ ಬಸವಣ್ಣನವರ ತತ್ವಗಳಿಗೆ ಉತ್ತಮವಾಗಿ ಸ್ಪಂದಿಸುತ್ತಿರುವ ಬಸವ ಸಮಿತಿಯ ಕಾರ್‍ಕ್ರಮದಲ್ಲಿ ಭಜನೆಗಳನ್ನು ಹಾಡಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ. ಇವರಿಗೆ ಶ್ರೀ ಶರಣಬಸವೇಶ್ವರ ಸಂಸ್ಥಾನ ಮತ್ತು ಮಕ್ತಂಪುರದ ಗದ್ದುಗೆಮಠ ಶ್ರೀಗಳಿಂದ ಹಾಗೂ ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನ, ಬಿರುದುಗಳು ಲಭಿಸಿವೆ.

**ಶ್ರೀಮತಿ ಬಂಗಾರೆವ್ವ ಸಾಲಿ**
**ಸಿದ್ದೇಶ್ವರ ಕಾಲೋನಿ**
**ಗಾಜಿಪುರ, ಗುಲಬರ್ಗಾ**

## ಬಾಬುರಾವ ಕೋಬಾಳ

ಕಲಬುರ್ಗಿ ಜಿಲ್ಲೆಯಲ್ಲಿ ಯಾವುದೇ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿರಲಿ, ಸಭೆ-ಸಮಾರಂಭಗಳಿರಲಿ ಅಲ್ಲಿ ಜಾನಪದ ಹಾಡಿನ ಜಾದುಗಾರ ರಾಜ್ಯ ಪ್ರಶಸ್ತಿ ವಿಜೇತ ಬಾಬುರಾವ ಕೋಬಾಳರಿಗೆ ಆಮಂತ್ರಣ ಇದ್ದೇ ಇರುತ್ತದೆ. ಅವರು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳದೆ ತಮ್ಮ ಕಂಠಶ್ರೀಯಿಂದ ಸಭಿಕರನ್ನು ರಂಜಿಸುತ್ತಾರೆ.

ಜನಪದ ಹಾಡುಗಾರಿಕೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯುನ್ನು ಮೈಗೂಡಿಸಿಕೊಂಡಿರುವ ಬಾಬುರಾವ ಕೋಬಾಳರವರು ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಕೋಬಾಳ ಗ್ರಾಮದವರು. ತಂದೆ ಮರಿಯಪ್ಪ ತಾಯಿ ಸಿದ್ದಮ್ಮನವರ ಮಗನಾಗಿ ಜನಿಸಿದ ಶ್ರೀಯುತರು ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲೇ ಪೂರೈಸಿದರು.

ಹೆಚ್ಚಿನ ಓದಿಗಾಗಿ ಕಲಬುರ್ಗಿಗೆ ಬಂದರು. ಬಾಲ್ಯದಲ್ಲಿಯೇ ಭಜನೆಗಳಲ್ಲಿ ಭಾಗವಹಿಸುತ್ತ ಸಂಗೀತದೆಡೆಗೆ ಒಲವು ಬೆಳೆಸಿಕೊಂಡಿದ್ದ ಬಾಬುರಾವ ಅವರು ತಮ್ಮ ಸಹೋದರ ಶಿವಶರಣಪ್ಪ ದಳಪತಿ ಅವರಲ್ಲಿ ಹಾರ್ಮೋನಿಯಂ ನುಡಿಸಲು ಕಲಿತರು. ಜಾನಪದ ಹಾಡುಗಳಿಗೆ ರಾಗ ಸಂಯೋಜಿಸುತ್ತ, ವಿಶೇಷ ಆಸಕ್ತಿಯಿಂದ ಸಾಧನೆ ಮಾಡುತ್ತ, ಹಾಡುವ ಮೂಲಕ ಜನಮನಗಳಲ್ಲಿ ಉಳಿದರು.

ಶ್ರೀಯುತರ ಮನೆತನದಿಂದಲೇ ಬಂದಿರುವ ಜಾನಪದ ಸಂಗೀತ ಕಲೆಯೇ ಅವರನ್ನು ಬೆಳೆಸಿತೆಂದು ಹೇಳಬಹುದು. ತಮ್ಮ ಸುಮಧುರ ಕಂಠದಿಂದ ಆಕಾಶವಾಣಿ ಮತ್ತು ದೂರದರ್ಶನಗಳಲ್ಲೂ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈಗ ಅವರು 'ಬಿ' ಗ್ರೇಡ್ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ.

ಇವರು ಕೇವಲ ಕಲಬುರ್ಗಿ ಜಿಲ್ಲೆಯಲ್ಲಿ ಮಾತ್ರವಲ್ಲ ಹೊರ ಜಿಲ್ಲೆಗಳ ಹಲವಾರು ಗ್ರಾಮಗಳಲ್ಲೂ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಸಂಭಾವನೆಗೆ ಆಸೆ ಪಡದೆ ಕರೆದಲ್ಲಿಗೆ ಹೋಗಿ ತಮ್ಮ ಹಾಡುಗಾರಿಕೆಯಿಂದ ಜನರನ್ನು ತೃಪ್ತಿ ಪಡಿಸಿ, ಅವರ ಮೆಚ್ಚುಗೆ, ಆಶೀರ್ವಾದವೇ ನನ್ನ ಸಂಭಾವನೆಯೆಂದು ಭಾವಿಸುತ್ತೇನೆಂದು ಹೇಳುವ ಬಾಬುರಾವ ಕೋಬಾಳರು ಸಂಗೀತವೇ ತಮ್ಮ ಉಸಿರಾಗಿಸಿಕೊಂಡು ೨೫ ವರ್ಷಗಳ ಮೇಲ್ಪಟ್ಟು ಹಾಡುಗಾರಿಕೆಯನ್ನು ನಡೆಸಿಕೊಂಡು ಬಂದಿದ್ದಾರೆ.

ನಾಡಿನ ಅನೇಕ ಸಂಘ-ಸಂಸ್ಥೆಗಳು, ಮಠಗಳು ಬಾಬುರಾವ ಕೋಬಾಳರನ್ನು ಸನ್ಮಾನ ಮಾಡಿವೆ, ತಮ್ಮ ಹಾರ್ಮೋನಿಯಂ ಕಲೆಯಿಂದ ಹತ್ತಾರು ನಾಟಕಗಳಿಗೆ ಸಂಗೀತ ನೀಡಿ, ಅವುಗಳ ಯಶಸ್ಸಿಗೆ ಕಾರಣರಾಗಿ ನಾಟ್ಯ ಸಂಘಗಳಿಂದ ಸನ್ಮಾನಿತರಾಗಿದ್ದಾರೆ. ಸಂಗೀತದ ಸೇವೆಯೊಂದಿಗೆ ಪತ್ರಿಕಾ ರಂಗದಲ್ಲೂ ಹಲವಾರು ವರ್ಷಗಳ ಕಾಲ ದುಡಿದವರಾಗಿದ್ದಾರೆ.

ಶ್ರೀಯುತರ ಸಂಗೀತದ ಸಾಧನೆಗೆ ಜಿಲ್ಲಾ ಮಟ್ಟ ಪ್ರಶಸ್ತಿಯನ್ನು ಹಾಗೂ ೨೦೦೩ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದು ಕಲಬುರ್ಗಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ತಾವೊಬ್ಬರೆ ಬೆಳೆದರೆ ಸಾಲದು ತಮ್ಮಂತೆ ಇತರರು ಬೆಳೆಯಬೇಕೆಂಬ ವಿಶಾಲ ಹೃದಯುದ ಬಾಬುರಾವ ಕೋಬಾಳ ಅನೇಕ ಉದಯೋನ್ಮುಖರಿಗೆ ಮಾರ್ಗದರ್ಶನ ಮಾಡಿದ್ದಾರೆ. "ಸರ್ವಜ್ಞ ಗ್ರಾಮೀಣ ಜನಪದ ಕಲಾ ವೃಂದ" ಕಲಬುರ್ಗಿ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಯಾಗಿಯೂ ಹಾಗೂ ಗಾನಯೋಗಿ ಪಂಚಾಕ್ಷರ ಜಾನಪದ ಕಲಾ ವೃಂದದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಮಹಾಯೋಗಿನಿ ಮಾತಾ ಮಾಣಿಕೇಶ್ವರಿ ವಿವಿದೊದ್ಧೇಶ ಸೇವಾ ಸಂಸ್ಥೆಯ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಾಬುರಾವ ಕೋಬಾಳರವರ ಧರ್ಮ ಪತ್ನಿ ಶ್ರೀಮತಿ ನಾಗಮ್ಮ ಅವರ ಸಹಕಾರವಿದೆ. ಜಾನಪದ ಹಾಡುಗಳನ್ನು, ವಚನಗಳನ್ನು ಕರತಾಮಲಕ ಮಾಡಿಕೊಂಡಿರುವ ಕೋಬಾಳವರಿಂದ ಜಾನಪದ ಕ್ಷೇತ್ರ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸುತ್ತದೆ. ಶ್ರೀಯುತರು ಹೆಚ್ಚಿನ ಸಾಧನೆ ಮಾಡುತ್ತ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಬೆಳೆಯಲೆಂದು ಹಾರೈಸೋಣ.

ಬಾಬುರಾವ ಕೋಬಾಳ, ರಾಜ್ಯ ಪ್ರಶಸ್ತಿ ವಿಜೇತರು
C/o ಶಾಸನ ಕನ್ನಡ ದಿನಪತ್ರಿಕೆ, ಜನತಾ ಗೃಹ ನಿರ್ಮಾಣ
ಗುಲಬರ್ಗಾ

## ಪುಂಡಲೀಕ ಪೂಜಾರಿ

ಶ್ರೀಯುತರು ಸರಳ ಸಾತ್ವಿಕ ಸ್ವಭಾವದವರಾಗಿದ್ದು ಕಲೆಗಾಗಿ ಶ್ರಮಿಸಿದವರು. ಹೆಸರೇ ಸೂಚಿಸುವಂತೆ ಪೂಜಾರಿಯವರು ತಮ್ಮ ಡೊಳ್ಳಿನ ಕಲೆಯ ಪೂಜೆಯೊಂದಿಗೆ ಗುಲಬರ್ಗಾ ನಗರದ ಅಳಂದ ನಾಕಾದ ಹತ್ತಿರ ಶ್ರೀ ಬೀರಲಿಂಗೇಶ್ವರ ಹಾಗೂ ಮಾಳಿಂಗರಾಯರ ಗುಡಿ ಕಟ್ಟಿಸಿ ಭಕ್ತಾದಿಗಳ ಭಕ್ತಿಯನ್ನು ದೇವರಿಗೆ ಮುಟ್ಟಿಸುವ ಪುಣ್ಯ ಇವರಿಗೆ ಸಲ್ಲುತ್ತದೆ.

ಶ್ರೀ ಪುಂಡಲೀಕ ಪೂಜಾರಿಯವರ ವಂಶ ಪರಂಪರೆ ಅಂದರೆ ಅಪ್ಪ, ಅಜ್ಜರೊಂದಿಗೆ ಕಾರ್ಯಕ್ರಮ ನೀಡುತ್ತಾ ಬಂದವರು. ತಂದೆ ಶ್ರೀ ಶರಣಪ್ಪ ತಾಯಿ ಸಂಗಮ್ಮನವರ ಉದರದಲ್ಲಿ ೧೯೪೯ರಲ್ಲಿ ಬೀದರ ಜಿಲ್ಲೆ ಕಮಲಾಪೂರ ತಾಲೂಕಿನ ಭೀಮನಳ್ಳಿ ಗ್ರಾಮದಲ್ಲಿ ಜನಿಸಿದ ಇವರು ಚಿಕ್ಕಂದಿನಲ್ಲೇ ತಾತನೊಂದಿಗೆ ಗುಲಬರ್ಗಾಕ್ಕೆ ಬಂದು ಇಡೀ ಜೀವನವನ್ನೇ ಕಲೆಗಾಗಿ ಮುಡುಪಾಗಿಟ್ಟವರು. ಇವರ ಸಂಘಟನಾ ಶಕ್ತಿ ಅಗಾಧವಾದುದು.

ಇಪ್ಪತ್ತು ಜನರ ಡೊಳ್ಳು ಕುಣಿತದ ತಂಡ ಇವರದು. ಇವರಲ್ಲಿ ೧೫ ವರ್ಷದಿಂದ ೭೦ ವರ್ಷದ ವಯದವರೆಗೂ ಇದ್ದಾರೆ. ಇವರಿಗೆ ಸ್ವಂತ ಗಂಡು ಮಕ್ಕಳಿಲ್ಲದಿದ್ದರೂ ತಂಡದಲ್ಲಿಯ ಎಲ್ಲರನ್ನೂ ಮಕ್ಕಳಂತೆ ಕಾಣುತ್ತಾರೆ. ೩ ಜನ ಹೆಣ್ಣುಮಕ್ಕಳನ್ನು ಪಡೆದ ಇವರು ಮೊಮ್ಮಕ್ಕಳು ಮತ್ತು ಅಳಿಯಂದಿರನ್ನೂ ತಮ್ಮ ಶಿಷ್ಯರನ್ನಾಗಿಸಿಕೊಂಡಿದ್ದಾರೆ. ತಂಡದ ಸದಸ್ಯರು ಡೊಳ್ಳಿನ ಪ್ರದರ್ಶನದಲ್ಲಿ ಲಾಗಾ ಹಾಕುವುದು, ಪಿರಕಿ ಹೊಡೆಯುವದು ಮತ್ತು ಹಗ್ಗ ಹೆಣೆಯುವದು ಹಾಗೆಯೇ ಬಿಡಿಸುವುದು ಪ್ರಮುಖ ಆಕರ್ಷಣೆಗಳು. ಕಸರತ್ತುಗಳೊಂದಿಗೆ ತಮ್ಮ ಕಲಾ ಪ್ರತಿಭೆಯನ್ನು ನಿರಂತರವಾಗಿ ೩–೪ ತಾಸುಗಳವರೆಗೆ ಪ್ರದರ್ಶಿಸುತ್ತಾರೆ. ಸತತ ೪೦ ವರ್ಷಗಳಿಂದ ಈ ಸೇವೆ ನಡೆದಿದೆ. ಡೊಳ್ಳಿನ ಕಲೆಯೊಂದಿಗೆ

ಗುಲಬರ್ಗಾ ನಗರದ ಶ್ರೀ ಶರಣಬಸವೇಶ್ವರರ ರಥದ ಅಲಂಕಾರ ಮಾಡುವುದೂ ಇವರ ಪಾಲಿಗೆ ತಾತನ ಕಾಲದಿಂದಲೂ ಬಂದ ಕಲಾ ಸೇವೆಯನ್ನು ಇಂದಿನವರೆಗೂ ನಡೆಸಿಕೊಂಡು ಬಂದಿದ್ದಾರೆ. ಶ್ರೀ ಶರಣಬಸವೇಶ್ವರ ಸಂಸ್ಥಾನದಿಂದ ಬಿರುದು-ಸನ್ಮಾನ ಗೌರವಗಳು ಸಂದಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಜಾನಪದ ಜಾತ್ರೆಗಳ ಅಂಗವಾಗಿ ಬೀದರ, ಮಳಖೇಡ, ಭಾಲ್ಕಿ, ಮುಚಳಂಬಿ, ಬೆಂಗಳೂರು, ಅಂಬೇಡ್ಕರ್ ಜಯಂತಿ ಸುವರ್ಣ ಕರ್ನಾಟಕ ದಿಬ್ಬಣ ಹೀಗೆ ಹಲವಾರು ಕಡೆ ಹೋಗಿ ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಈ ಸಾಲಿನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಕೂಡ ಲಭಿಸಿದೆ.

ಪುಂಡಲೀಕ ಪೂಜಾರಿ
ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಸಂಘ
ಫಿಲ್ಟರ್ ಬೆಡ್ ರೋಡ
ಚೆನ್ನವೀರ ನಗರ, ಗುಲಬರ್ಗಾ

# ಮೋನಪ್ಪ ಗೋಲಪ್ಪ ಪೋದ್ದಾರ

ಪರಿಸರಕ್ಕೆ ಸ್ಪಂದಿಸುವುದು ಮತ್ತು ಪ್ರತಿಕ್ರಯಿಸುವುದು ಎಲ್ಲ ಜೀವರಾಶಿಗಳ ಸಹಜ ಪ್ರವೃತ್ತಿ. ಮನುಷ್ಯ ಇದಕ್ಕೆ ಹೊರತಾಗಿಲ್ಲ. ಆದರೆ ಮನುಷ್ಯನಲ್ಲಿ ಇನ್ನೊಂದು ಶಕ್ತಿಯೂ ಇರುತ್ತದೆ. ಅದು ಮತ್ತೊಂದನ್ನು ನಿರ್ಮಿಸುವ ಶಕ್ತಿ. ಈ ನಿರ್ಮಾಣ ಶಕ್ತಿಯಿಂದಲೇ ಮನುಷ್ಯ ಕಲೆ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ. ಇವೆಲ್ಲವೂ ಸಂಸ್ಕೃತಿಯ ಅಂಗವೇ ಸರಿ. ಮನುಷ್ಯನಿಗೆ ಮೂರ್ತ ವಸ್ತುಗಳಿಂದ ಹೇಗೆ ಪ್ರೇರಣೆ ಸಿಗುತ್ತದೆಯೋ ಹಾಗೆಯೇ ಅ ಮೂರ್ತ ವಿಚಾರ ಮತ್ತು ಕಲ್ಪನೆಗಳಿಂದಲೂ ಪ್ರೇರಣೆ ಸಿಗುತ್ತದೆ. ಆನಂದವನ್ನು ಅನುಭವಿಸುವುದು ಮತ್ತು ಅಭಿವ್ಯಕ್ತಿಗೊಳಿಸುವುದು ಮನುಷ್ಯನ ಸ್ವಭಾವ. ಈ ಅಭಿವ್ಯಕ್ತಿಗೊಳಿಸುವ ಗುಣ ವ್ಯಕ್ತಿಗಳ ಒಲವಿನಂತೆ ಪ್ರಕಟವಾಗುತ್ತದೆ. ಸಾಹಿತಿ, ಕವಿ ಅಕ್ಷರ ಮಾಧ್ಯಮದಿಂದ, ನರ್ತಕಿ, ನರ್ತನ ಮಾಧ್ಯಮದಿಂದ, ಕಲಾವಿದ ರೇಖೆಗಳು ಮತ್ತು ಬಣ್ಣದ ಮಾಧ್ಯಮದಿಂದ, ನಟ ತನ್ನ ನಟನಾ ಸಾಮರ್ಥ್ಯದಿಂದ ಸಂಗೀತಗಾರ ತನ್ನ ಸ್ವರಗಳ ಆರೋಹ ಅವರೋಹಗಳಿಂದ ತನ್ನ ಆನಂದವನ್ನು ಅಭಿವ್ಯಕ್ತಿಗೊಳಿಸುತ್ತಾನೆ.

ಇಂಥ ಆನಂದವನ್ನು ಹಂಚುವ "ಗಾನ ಕೋಗಿಲೆ"ಯೊಂದು ಸೇಡಂನ ಖಾನಾವಳಿಯೊಂದರಲ್ಲಿದೆ ಎಂದರೆ ನಿಜಕ್ಕೂ ಅಚ್ಚರಿಪಡಬೇಕಾದ ಸಂಗತಿಯಾಗಿದೆ. ಶ್ರೀ ಮೋನಪ್ಪ ಗೋಲಪ್ಪ ಪೋದ್ದಾರ (ವಿಶ್ವಕರ್ಮ) ಅವರೇ ಈ ಗಾನ ಕೋಗಿಲೆ. ಅದ್ಭುತವಾದ ಲಯಗಾರಿಕೆ ತಾಳದ ಗತ್ತನ್ನು ಪ್ರಕೃತಿದತ್ತವಾಗಿಯೇ ಪಡೆದು ಸುಶ್ರಾವ್ಯವಾಗಿ ಹಾಡಬಲ್ಲ ಚಾಕಚಕ್ಯತೆಯನ್ನು ಪಡೆದುಕೊಂಡಿರುವ ಶ್ರೀ ಮೋನಪ್ಪ ಅವರು ತಮ್ಮ ಜೀವನೋಪಾಯಕ್ಕಾಗಿ ಸೇಡಂನಲ್ಲಿ ಖಾನಾವಳಿಯೊಂದನ್ನು ನಡೆಸುತ್ತಿದ್ದಾರೆ.

ಮೂಲತಃ ಅಫಜಲಪುರ ತಾಲೂಕಿನ ಬೈರಾಮಡಗಿಯವರಾದ ಶ್ರೀ ಮೋನಪ್ಪ ಅವರು ಬಾಲ್ಯದಿಂದಲೂ ಹಾಡಿಗೆ ಮರುಳಾದವರು. ಯಾವುದೇ ಗುರುವಿನ ಬಳಿ

ಶಾಸ್ತ್ರೀಯವಾಗಿ ಅಭ್ಯಾಸಮಾಡದೆ ತನಗೆ ತಾನೇ ಗುರು ಎಂಬಂತೆ ಸ್ವಯಂಸ್ಫೂರ್ತಿಯಿಂದ ಹಾಡುಗಾರಿಕೆಯನ್ನು ಕಲಿತು ತಮ್ಮ ಪಾಡಿಗೆ ತಾವು ಹಾಡಿಕೊಳ್ಳುತ್ತಲ್ಲೇ ಇರುವಾಗ ಗಮನಿಸಿದ ಅನೇಕರು ಅಲ್ಲಲ್ಲಿ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಅವರ ಆಶೆ, ಅನಿಸಿಕೆ ಹುಸಿಯಾಗದಂತೆ ಅದ್ಭುತ ಕಾರ್ಯಕ್ರಮ ನೀಡಿ ರಸಿಕರ ಮನಸೂರೆಗೈದು ಸೈ ಎನಿಸಿಕೊಂಡರು.

೧. ೧೯೮೧ರಲ್ಲಿ ಮಹಾಂತ ಪ್ರತಿಷ್ಠಾನದಿಂದ ಗಾನಕೋಗಿಲೆ ಎಂಬ ಬಿರುದು-ಸನ್ಮಾನ.

೨. ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಬೆಳೆದುದು.

೩. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುಲಬರ್ಗಾ ಇವರ ೧೫-೧೧-೧೯೯೬ರಲ್ಲಿ ಸಾಂಸ್ಕೃತಿಕ ಸೌರಭ ಕಾರ್ಯಕ್ರಮ.

೪. ನೃಪತುಂಗ ಅಧ್ಯಯನ ಸಂಸ್ಥೆ ಸೇಡಂ ವತಿಯಿಂದ ಹಲವಾರು ತತ್ವಪದಗಳ ಕಾರ್ಯಕ್ರಮ.

೫. ಕರ್ನಾಟಕ ನಾಟಕ ಅಕಾಡೆಮಿ ಆಯೋಜಿಸಿದ ನಾಟಕೋತ್ಸವ ೨೦೦೩ರಲ್ಲಿ ಜಾನಪದ ಸಂಗೀತ.

೬. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ ವತಿಯಿಂದ ಸಂಗೀತೋತ್ಸವ-೨೦೦೫ರಲ್ಲಿ.

ಸೇಡಂನ ಶ್ರೀ ಕೊತ್ತಲಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದಲ್ಲಿ, ವಿಶೇಷ ಹಬ್ಬ ಹರಿದಿನಗಳಲ್ಲಿ ಸದಾ ಸೇವೆ.

ಚಿಕ್ಕಂದಿನಲ್ಲಿ ಪ್ರಾರಂಭವಾದ ಇವರ ಹಾಡುಗಾರಿಕೆಗೆ ಈಗ ೪೦ ವರ್ಷಗಳ ಅನುಭವ. ಎಲ್ಲರಿಗೂ ಬೇಕಾದವರು ಇಂಥ ಒಬ್ಬ ಪ್ರತಿಭಾನ್ವಿತ ಈಗ ಕ್ಯಾನ್ಸರಿನಿಂದ ನರಳುತ್ತಿದ್ದಾನೆ. ಇಂದಿನ ಆಧುನಿಕ ಯುಗದಲ್ಲಿ ಒಳ್ಳೆಯ ಚಿಕಿತ್ಸೆ ಪಡೆದು ಗುಣಮುಖರಾಗಿ ತಮ್ಮ ಸೇವೆಯನ್ನು ಇನ್ನಷ್ಟು ಕಾಲ ಜನರಿಗೆ ಒದಗಿಸಲೆಂದು ಪ್ರಾರ್ಥಿಸೋಣ.

**ಮೋನಪ್ಪ ಗೋಲಪ್ಪ ಪೊದ್ದಾರ (ವಿಶ್ವಕರ್ಮ)**
**ಚೈತನ್ಯ ಭವನ, ಹಳೇಗಂಜ ರಸ್ತೆ**
**ಸೇಡಂ, ಜಿಲ್ಲಾ : ಗುಲ್ಬರ್ಗಾ**

# ಮಹಾದೇವಿ ಸಿದ್ದಣ್ಣ ಸರಸಂಬಿ

೫೦ರ ಹರೆಯದ ಶ್ರೀಮತಿ ಮಹಾದೇವಿಯವರು ಕಲೆಯ ಆಗರದಲ್ಲಿ ಹುಟ್ಟಿ ಬೆಳೆದವರು. ತಂದೆ ಶ್ರೀ ಶಿವಲಿಂಗಪ್ಪ ದೊಡ್ಡಾಟದ ಪ್ರಸಿದ್ಧ ಕಲಾವಿದರು. ತಾಯಿ ಬಂಗಾರೆವ್ವ ಸಂಪ್ರದಾಯ ಹಾಡುಗಾರರು. ಅಣ್ಣ ಶ್ರೀ ಬಸವರಾಜ ಸಾಲಿ ಗುಲಬರ್ಗಾದಲ್ಲಿ ಸುಗಮ ಸಂಗೀತದಲ್ಲಿ ಹೆಸರು ಮಾಡಿದವರು. ತಾಯಿ ಸಂಪ್ರದಾಯದ ಹಾಡುಗಳಲ್ಲದೆ ಭಜನೆ ಹಾಡುಗಳಲ್ಲಿಯೂ ಪರಿಣಿತರು. ಮಹಾದೇವಿ ಚಿಕ್ಕಂದಿನಿಂದಲೂ ತಾಯಿ ಜೊತೆ ಭಜನೆ ಮಾಡುತ್ತ ಮುಂದೆ ಭಜನೆಯೇ ಸರ್ವಸ್ವವಾಯಿತು. ಅಕ್ಕನ ಬಳಗದಲ್ಲಿ ಭಜನೆ ಮಾಡಿಸುವಲ್ಲಿ ಮುಂದಾಳತ್ವ ವಹಿಸಿದರು. ನೂರಾರು ಹೆಣ್ಣು ಮಕ್ಕಳಿಗೆ ಯಾವುದೇ ಫಲಾಪೇಕ್ಷೆಯಿಲ್ಲದೆ ಭಜನೆ ಪದಗಳನ್ನು ಕಲಿಸಿರುವ ಇವರು ತಾಯಿ ಬಂಗಾರೆವ್ವನ ಜೊತೆ ಆಕಾಶವಾಣಿಯಲ್ಲಿ ಸಂಪ್ರದಾಯದ ಹಾಡುಗಳಿಗೆ ಧ್ವನಿಗೂಡಿಸಿದರು. ಆಕಾಶವಾಣಿ ದೂರದರ್ಶನಗಳಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾನಪದ ಜಾತ್ರೆ, ಜಾನಪದ ಮೇಳ, ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ, ಶರಣರ ಜಯಂತಿಗಳಲ್ಲಿ ಭಜನೆ ಸೇವೆ ಸಲ್ಲಿಸಿ ಜನರ ಮನ ಗೆದ್ದಿದ್ದಾರೆ. ಭಜನೆ ಕಲಿಸುವುದರಲ್ಲಿ ಸಹ ಗಾಯಕರಿಗೆ ಪ್ರಧಾನ ಗಾಯಕರನ್ನಾಗಿಸುವಲ್ಲಿ ಮತ್ತು ಕಲೆಯನ್ನು ಬೆಳೆಸುವುದರಲ್ಲಿ ಶ್ರಮಪಡುತ್ತಿದ್ದಾರೆ. ಗುಲಬರ್ಗಾದ ಶ್ರೀ ಶರಣಬಸವೇಶ್ವರ ಮಹಾಸಂಸ್ಥಾನ, ಬಸವ ಸಮಿತಿಗಳ ಸನ್ಮಾನ ಪಡೆದಿದ್ದಾರೆ. ಹೈದರಾಬಾದ ಕರ್ನಾಟಕದ ಪ್ರತಿ ಹಳ್ಳಿಯಲ್ಲಿ ಇವರು ಭಜನೆ ಹಾಡುಗಳಿಂದ ಹೆಸರು ವಾಸಿಯಾಗಿದ್ದಾರೆ.

ನಾಡಿನ ಅನೇಕ ಭಜನೆ ಸ್ಪರ್ಧೆಗಳಲ್ಲಿ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಯಶಸ್ಸು ಪಡೆದ ಇವರು ಗೌರವಾನ್ವಿತ ಆಧ್ಯಾತ್ಮಿಕ ಕಲಾವಿದೆ.

ಶ್ರೀಮತಿ ಮಹಾದೇವಿ ಸಿದ್ದಣ್ಣ ಸರಸಂಬಿ
"ಸಿದ್ದೇಶ್ವರ್ ನಿಲಯ" ಶಹಾಬಜಾರ, ಕಬಗರ್‌ಪೂರ, ಗುಲಬರ್ಗಾ

# ಸಿದ್ಧಾರೂಢ ಮಲ್ಲಪ್ಪ ಗಡೇದ

ದೊಡ್ಡಾಟದಲ್ಲಿ ಸಾರಥಿಯಾಗಿ ಇದುವರೆಗೂ ಮುಂದುವರೆಸಿಕೊಂಡು ಬಂದಿರುವ ಸಿದ್ಧಾರೂಢ ಮಲ್ಲಪ್ಪ ೭೦ರ ವಯಸ್ಸಿನಲ್ಲಿಯೂ ಕಂಚಿನ ಕಂಠ ಹೊಂದಿದವರು. ಬಯಲಾಟದಲ್ಲಿ ಇವರ ಅಭಿನಯ ಅಪ್ರತಿಮವಾದುದು. ದೊಡ್ಡಾಟ ಶುರುವಾಗುತ್ತಲೇ "ಬಂದವರು ದಾರು ಸ್ವಾಮಿ ಹೋಹೋ" ಎಂದು ವಿಚಾರಿಸುವ ಇವರು ಕೊನೆಯವರೆಗೂ ಸಾರಥಿ ಪಾತ್ರದಲ್ಲಿ ಕಾಣಿಸುತ್ತಲೇ ಇರುತ್ತಾರೆ. ಇವರಿಗೆ "ಸುಂದರ ಸಾರಥಿ" ಎಂಬ ಬಿರುದು ಬಂದಿದೆ.

ಇವರ ತಂದೆ ಮಲಕಪ್ಪನವರೂ ಕೂಡಾ ದೊಡ್ಡಾಟದ ಪ್ರಖ್ಯಾತ ಕಲಾವಿದರು. ವಂಶ ಪರಂಪರೆಯಾಗಿ ಬಂದ ಈ ಕಲಾ ಕೌಶಲ್ಯವನ್ನು ಶ್ರೀಯುತರು ತಂದೆಯವರಿಂದ ಕಲಿತು ಬಾಲ್ಯದಲ್ಲಿಯೇ ತಮ್ಮನ್ನು ಗುರುತಿಸಿಕೊಂಡರು. ಮಹಿಷಾಸುರ ಮರ್ದಿನಿ, ಚಿತ್ರಸೇನ, ಭೀಮ ವಿಲಾಸ ಇವರು ಆಡಿದ ದೊಡ್ಡಾಟಗಳು.

ಕರ್ನಾಟಕದ ಕಲಾಕ್ಷೇತ್ರವೆಂದೇ ಹೆಸರಾದ ಮಾಶ್ಯಾಳ ಇವರ ಹುಟ್ಟೂರು. ದೊಡ್ಡಾಟ ಸಂಘದ ಮುಖ್ಯ ಸದಸ್ಯರು. ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜರಗುವ ಹಂಪಿ ಉತ್ಸವ, ದಸರಾ ಉತ್ಸವ, ಸುವರ್ಣ ಕರ್ನಾಟಕ ಅಂಗವಾಗಿ ದಿಬ್ಬಣದಲ್ಲಿ ಇಡೀ ವರ್ಷ ಪೂರ್ತಿ ಅದ್ದೂರಿ ಕಾರ್ಯಕ್ರಮ ನೀಡಿದವರು. ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬಹಳ ಶ್ರಮ ಪಡುತ್ತಿದ್ದಾರೆ. ಬದುಕು ಬಡತನದಲ್ಲಿ ಸಾಗಿದರೂ ಕಲೆ ಶ್ರೀಮಂತಿಕೆ ಮತ್ತು ಗೌರವದಿಂದ ಸಾಗುತ್ತಿದೆ.

**ಸಿದ್ಧಾರೂಢ ಮಲ್ಲಪ್ಪ ಗಡೇದ, ದೊಡ್ಡಾಟ ಕಲಾವಿದರು**
**ಮುಕ್ಕಾ : ಮಾಶ್ಯಾಳ ತಾ : ಅಫಜಲಪೂರ ಜಿ : ಗುಲಬರ್ಗಾ**

## ಶ್ರೀಮತಿ ಚತುರಾಬಾಯಿ ಶಿವಸಿಂಪಿ

ಶ್ರೀಮತಿ ಚತುರಾಬಾಯಿ ಸದಾಶಿವಪ್ಪ ಶಿವಸಿಂಪಿಯವರು ೧೦-೪-೧೯೪೧ರಲ್ಲಿ ಗುಲಬರ್ಗಾದ ಕಾಶಿ ಎಂದೇ ಹೆಸರಾದ ಆಳಂದ ತಾಲೂಕಿನ ಲೇಂಗಟಿ ಗ್ರಾಮದಲ್ಲಿ ಪವಾಡ ಪುರಷರಾಗಿದ್ದಂತಹ ಶ್ರೀ ಕರಬಸಪ್ಪ ಶಿವಸಿಂಪಿಯವರ ಮಗಳಾದ ಶ್ರೀಮತಿ ಯಂಕವ್ವನ ಮಗಳು. ಲೇಂಗಟಿ ಗ್ರಾಮ ಕಾಶಿ ಎಂದು ಹೆಸರಾಗಲು ಅಲ್ಲಿರುವ ಮಹಾದೇವನ ಗುಡಿಯು ೩೫ ಲಿಂಗದೇವರು, ೨೫ ಬಸವಣ್ಣ (ನಂದಿ) ಹೊಂದಿದ್ದು ಐತಿಹಾಸಿಕ ಪ್ರಸಿದ್ಧ ಸ್ಥಳವಾಗಿದೆ. ಬಹುಶಃ ಲಿಂಗದಟ್ಟಿ ಬದಲಾಗಿ ಲೇಂಗಟಿಯಾಗಿ ಕರೆಯಲ್ಪಡುತ್ತಿದೆ.

ತಾಯಿ ಯಂಕವ್ವ ಒಳ್ಳೆಯ ಹಾಡುಗಾರ್ತಿ. ಅವಳೊಂದಿಗೆ ದನಿಗೂಡಿಸಿ ಹಾಡುತ್ತ ಹಾಡುತ್ತ ಸ್ವತಂತ್ರವಾಗಿ ಹಾಡಹತ್ತಿದಳು. ಮುಂದೆ ಸದಾಶಿವಪ್ಪನನ್ನು ಮದುವೆಯಾಗಿ ಗುಲಬರ್ಗಾಕ್ಕೆ ಬಂದು ಹಳೇ ಜೇವರ್ಗಿ ಕಾಲನಿಯಲ್ಲಿ ಅಕ್ಕನ ಬಳಗ ಸ್ಥಾಪಿಸಿ ಬಳಗದ ಅಕ್ಕಂದಿರನ್ನು ದಿನಾಲೂ ಒಟ್ಟುಗೂಡಿಸುತ್ತಾ ಅವರಿಗೆ ಹಾಡುಗಳನ್ನು ಹೇಳಿಕೊಡುತ್ತಾ ಭಜನೆ ಮಾಡಿಸುವುದು ಇವರ ಹವ್ಯಾಸ.

ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ಇವರು ಸಂಪ್ರದಾಯ ಹಾಡುಗಳು, ಸೋಬಾನ ಪದಗಳು, ಬೀಸುಕಲ್ಲು ಪದಗಳು, ಕುಟ್ಟುವ ಪದಗಳು, ತತ್ವಪದ, ಗರತಿಯ ಹಾಡುಗಳು ಹಾಗೂ ನೀತಿ ಪದಗಳನ್ನು ಹಾಡುತ್ತಾರೆ. ಚತುರಾಬಾಯಿ ದೊಡ್ಡಾಟದ ಕಲಾವಿದೆಯೂ ಹೌದು. ಮಾಶಾಳದ ಸಂಘದ ಸದಸ್ಯೆಯೂ ಆಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಹಾರಾಷ್ಟ್ರ ಮತ್ತು ಕನ್ನಡ ಗಡಿ ಭಾಗಗಳಲ್ಲಿ ತಮ್ಮ ಬಯಲಾಟದ ಕಲೆಯನ್ನು

ಪ್ರದರ್ಶಿಸಿದ್ದಾರೆ. ಉತ್ಸವಗಳಲ್ಲಿ, ಜಾನಪದ ಮೇಳಗಳಲ್ಲಿ ಜಾನಪದ ಜಾತ್ರೆಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾಳೆ.

"ಮಹಿಷಾಸುರ ಮರ್ದಿನಿ" ದೊಡ್ಡಾಟದಲ್ಲಿ ಮಹಿಷಿ ಪಾತ್ರ, ಕನಕಾಂಗಿಯಲ್ಲಿ ಶುಭೆ ಪಾತ್ರ, ದೇವಿಪಾತ್ರ, ಕೃಷ್ಣ ಪಾರಿಜಾತದಲ್ಲಿ ರುಕ್ಮಿಣಿ ಪಾತ್ರ ಹೀಗೆ ತಮ್ಮ ಅಮೋಘ ದೊಡ್ಡಾಟದ ಕಲೆಯನ್ನು ನೀಡಿ ಎಲ್ಲರಿಗೂ ಪರಿಚಿತರಾಗಿದ್ದಾರೆ. ಆಕಾಶವಾಣಿಯ ಕಲಾವಿದೆಯಾಗಿ ಕಾರ್ಯಕ್ರಮ ನೀಡಿದ್ದಾರೆ.

ಶ್ರೀಮತಿ ಚತುರಾಬಾಯಿ ಸದಾಶಿವಪ್ಪ ಶಿವಸಿಂಪಿ
ಸಂಪ್ರದಾಯ ಹಾಡುಗಾರ್ತಿ
ಕ್ರಿಸ್ ಕಾನ್ವೆಂಟ್ ಹತ್ತಿರ, ಹಳೇ ಜೇವರಗಿ ರಸ್ತೆ,ಗುಲಬರ್ಗಾ

# ವೀರಣ್ಣ ಗುರುಪಾದಪ್ಪ ಶೀಲವಂತ

ಪುರವಂತಿಕೆ ಕಲೆಯನ್ನು ವೀರಣ್ಣ ಶೀಲವಂತ ತಂದೆಯಿಂದ ಕಲಿತದ್ದು. ಆಧ್ಯಾತ್ಮಿಕ ಹಾಗೂ ಜಾನಪದ ಕಲೆ. ಪುರಾತನ ಕಾಲದಿಂದಲೂ ಬಂದ ಕಲೆಯಿದು. ತಾಯಿ ಲಲಿತಾಬಾಯಿಯವರ ಉದರದಲ್ಲಿ ೬-೬-೬೬ರಂದು ಜನಿಸಿದ ಇವರು ತಂದೆಯವರೊಡನೆ ಬಾಲ್ಯದಲ್ಲಿಯೇ ಪುರವಂತಿಕೆಯಲ್ಲಿ ಭಾಗವಹಿಸಿ ಜನರ ಮೆಚ್ಚುಗೆ ಪಡೆದವರು. ಇವರ ವೇಷ-ಭೂಷಣಗಳು ಸಾಕ್ಷಾತ್ ಶಿವನನ್ನೇ ಹೋಲುತ್ತವೆ. ಇವರ ನರ್ತನವಂತೂ ಶಿವನು ನಾಟ್ಯಮಾಡುವಂತೆ; ಜನರನ್ನು ಆಧ್ಯಾತ್ಮಿಕ ಮತ್ತು ದೈವಿಕ ಲೋಕಕ್ಕೆ ಕೊಂಡೊಯ್ಯುತ್ತವೆ.

ಜರಿಬಣ್ಣದ ಮುಂಡಾಸು, ಬಣ್ಣದ ಜರಿ ಶಾಲು, ಎದೆಯ ಮೇಲೆ ಮಣಿ ಮಾಲೆಗಳು, ಕೊರಳಿಗೆ ರುದ್ರಾಕ್ಷಿ ಹಾರ, ಕಿವಿಗಳಿಗೆ ಕರ್ಣ ಕುಂಡಲ ಜರಿ ಸೀರೆ ಕಾಲಿಗೆ ಗೆಜ್ಜೆ, ಕೈಗೆ ರುದ್ರಾಕ್ಷಿ ಸರಗಳನ್ನೊಳಗೊಂಡ ಹೊಳೆಯುವ ಆಭರಣಗಳು, ತ್ರಿಶೂಲ, ಖಡ್ಗ ಶಸ್ತ್ರಗಳು ಸಾಕ್ಷಾತ್ ಪರಶಿವನನ್ನೇ ಕಾಣುವಂತಿರುತ್ತವೆ. ಪುರವಂತಿಕೆ ಗದ್ದರಿಸಲು ಇವರಿಗೆ ಶಹನಾಯಿ, ಸಾಂಬಳವಾದ, ಪಕ್ಕವಾದ್ಯಗಳು ಬೇಕು, ಪುರವಂತಿಕೆಯನ್ನು ಇಬ್ಬರು, ಮೂವರು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಒಬ್ಬರಿಗೊಬ್ಬರು ಸ್ಪರ್ಧಾತ್ಮಕವಾಗಿ ನರ್ತನ ಮಾಡುತ್ತಾರೆ. ವೀರಣ್ಣ ಗುರುಪಾದಪ್ಪ ಶೀಲವಂತ ಅವರ ಪುರವಂತಿಕೆ ಕಲೆಗೆ ೨೦೦೬ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕಾರ ನೀಡಿದೆ.

ಶ್ರೀ ಶಿವಲಿಂಗಪ್ಪ ಡಿಗ್ಗಿಯವರ ನಾದ ಗುಂಗಿನಲ್ಲಿ ಮುಗಿಲು ಮುಟ್ಟುವಂತಿರುತ್ತದೆ. ವಚನ ಪಠಣ, ಶರಣ ಚರಿತ್ರೆಗಳನ್ನೊಳಗೊಂಡ ಪದಗಳು ಹಾಡುವುದು ಇವರ ಕಲೆಯಾಗಿದೆ. ಕಾಯಕ ಜೀವಿಗಳು, ಶ್ರಮಜೀವಿಗಳು ವೃತ್ತಿಯಿಂದ ಅಕ್ಕಸಾಲಿಗರು. ಪ್ರವೃತ್ತಿ ಪುರವಂತಿಕೆ.

ಖಡ್ಗದ ಕುಣಿತ, ಲಿಂಗದಾರರ ಕುಣಿತ, ಕಾಸೆ ಕುಣಿತ ಈ ಎಲ್ಲ ಕುಣಿತಗಳಲ್ಲಿ ಪರಿಣಿತರು. ಶಸ್ತ್ರ ಚುಚ್ಚಿಕೊಳ್ಳುವುದು ಒಂದು ಅದ್ಭುತವಾದ ದೃಶ್ಯ. ಶಸ್ತ್ರಗಳು ಎರಡೂ ಕಡೆ ಚೂಪಾದ ೩ ಅಂಗುಲ ಮತ್ತು ೧೦ ಅಡಿ ಉದ್ದದ ಶಸ್ತ್ರವನ್ನು ತಮ್ಮ ಕಪಾಳದ ಎರಡೂ ಬದಿಗೂ ಸೇರಿ ಇವರ ಜೊತೆ ಮನೋಹರ ಎಂಬ ಇನ್ನೊಬ್ಬ ಖ್ಯಾತ ಪುರಂತಕ ಕಪಾಳಕ್ಕೆ ಸೇರಿಸಿ ಇಬ್ಬರ ನಡುವೆ ಒಂದು ಸೇತುವೆಯನ್ನೇ ನಿರ್ಮಿಸಿದಂತೆ. ಅರ್ಧ ಗಂಟೆ ಕಾಲ ಜನರನ್ನು ದಂಗು ಬಡಿಸುತ್ತಾರೆ. ಇವರಿಬ್ಬರ ಕಪಾಳಗಳು ದೊಡ್ಡ ದೊಡ್ಡ ತೂತುಗಳಾಗಿಬಿಟ್ಟಿವೆ.

ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ಇವರು ಆರೋಗ್ಯ ಇಲಾಖೆಯಿಂದ ಚಿಂಚೋಳಿ, ಚಿತ್ತಾಪುರ, ಸರಡಗಿ, ಮಳಖೇಡ, ಸೇಡಂ, ಮನ್ನಾ ಎಖೆಳ್ಳಿ, ಹುಲಸೂರ, ಬಸವಕಲ್ಯಾಣ, ಹುಮನಾಬಾದ, ಶಹಾಪೂರ, ಸುರಪೂರ ತಿಂಥಣಿ ಕಡೆಗಳಲ್ಲಿ ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾನಪದ ಜಾತ್ರೆ, ಜಾನಪದ ಮೇಳ, ದಿಬ್ಬಣ, ಕಲಾಮೇಳಗಳಲ್ಲಿ ಭಾಗವಹಿಸಿ, ಶ್ರೀ ಶರಣಬಸವೇಶ್ವರ ಸಂಸ್ಥಾನ, ಗದ್ದುಗೆ ಮಠ, ಮಕ್ತಂಪೂರ ಶ್ರೀಗಳಿಂದ ಮೆಚ್ಚುಗೆ ಪಡೆದಿದ್ದಾರೆ ಅಲ್ಲದೆ ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಕಲೆಯನ್ನು ಉ ಳಿಸಿ ಬೆಳೆಸುವಲ್ಲಿ ಬಹಳ ಶ್ರಮ ಪಡುತ್ತಿದ್ದಾರೆ.

ವೀರಣ್ಣ ಗುರುಪಾದಪ್ಪ ಶೀಲವಂತ, ಪುರವಂತಿಕೆ
ಸಂಜಯನಗರ, ದೊಭೆ ಕಾಲೋನಿ
ಗುಲಬರ್ಗಾ

## ಸಾಯಬಣ್ಣ

ಹಲಗೆ ವಾದನದಲ್ಲಿ ಹೆಸರಾದ ೬೦ರ ಹರೆಯದ ಶ್ರೀ ಸಾಯಬಣ್ಣ ಅವರ ಹಲಗೆ ಬಾರಿಸುವ ಭಂಗಿ ಯುವ ಕಲಾವಿದರನ್ನು ನಾಚಿಸುವಂತಿರುತ್ತದೆ.

ಸುಮಾರು ನಲವತ್ತು ವರ್ಷಗಳಿಂದ ಹಲಗೆ ವಾದ್ಯ ಕಲಾವಿದರಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಶ್ರೀ ಸಾಯಬಣ್ಣನವರು ಗುಲಬರ್ಗಾ ತಾಲೂಕಿನ ಕಪನೂರು ಗ್ರಾಮದವರು. ಇವರ ಹಲಗೆ ತಂಡದಲ್ಲಿ ೧೦ ಜನ ಸದಸ್ಯರ ತಂಡವಿದ್ದು ಅವರಿಗೆಲ್ಲ ಕಲಿಸಿದ ಗುರುಗಳೂ ಇವರೆ "ಹಲಗೆಯನ್ನು ನುಡಿಸುವುದು ನನ್ನ ಉಸಿರು" ಎಂದು ಹೇಳುತ್ತಾರೆ.

ಹೋಳಿ ಹುಣ್ಣಿಮೆಯಂದು ಹುಲಿ ವೇಷದೊಂದಿಗೆ ಅಲ್ಲದೆ ಮೋಹರಂ ಹಾಡುವಾಗ ವೈವಿಧ್ಯಮಯವಾಗಿ ಬಾರಿಸುವುದು ಇವರ ವೈಶಿಷ್ಟ್ಯ. ಹಲಗೆ ಉತ್ತರ ಕರ್ನಾಟಕದ ಚರ್ಮ ವಾದ್ಯ. ಅದರಲ್ಲೂ ವೈವಿಧ್ಯತೆಗಳಿವೆ. ಹೆಚ್ಚಾಗಿ ಶಿವಾಧೀನರಾದಾಗ ದುಃಖ ದುಮ್ಮಾನಗಳಂತಹ ಸಮಯದಲ್ಲಿ ಬಾರಿಸುತ್ತಿದ್ದರು.

ಆದರೆ ಸರಕಾರದ ಪ್ರೋತ್ಸಾಹದಿಂದ ವೇದಿಕೆಯ ಮೇಲೆ ಬಂದು ಸಾಯಬಣ್ಣನವರು ಈ ಕಲೆಯನ್ನು ಬೆಳೆಸಿಕೊಂಡರು. ಸುಗ್ಗಿ ಹಾಡುಗಳೊಂದಿಗೆ ಬಾರಿಸುತ್ತಾರೆ. ಹಲಗೆ ಬಾರಿಸುವಾಗ ತಲ್ಲೀನರಾಗಿ ಲಯದೊಂದಿಗೆ ಮೈ ಕುಣಿಸುತ್ತ ಬಾರಿಸುವಾಗ ಎಲ್ಲರ ಗಮನ ಸೆಳೆಯುತ್ತ ತಲ್ಲಿನರಾಗಿಬಿಡುತ್ತಾರೆ. ೪೦ ವರ್ಷಗಳ ಸತತ ಕಲಾ ಸೇವೆಯಿಂದ ಆ ಕ್ಷೇತ್ರದಲ್ಲಿ ಬಹಳಷ್ಟು ಸಾಧಿಸಿದ್ದಾರೆ.

ಆಕಾಶವಾಣಿ, ದೂರದರ್ಶನ ಕಲಾವಿದರೂ ಹೌದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸರಡಗಿಯ ಕಲಾಮೇಳದಲ್ಲಿ, ಸಾಂಸ್ಕೃತಿಕ

ದಿಬ್ಬಣಗಳಲ್ಲಿ, ಜಾನಪದ ಜಾತ್ರೆ, ಜಾನಪದ ಮೇಳಗಳಲ್ಲಿ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಹೈದರಾಬಾದ ಕರ್ನಾಟಕದಲ್ಲಿ ಹೆಸರಾಂತ ಹಲಗೆ ವಾದಕರು, ಬೀದರ ಜಿಲ್ಲೆ ಗುಲಬರ್ಗಾ, ರಾಯಚೂರು, ಬಿಜಾಪೂರ, ಬಳ್ಳಾರಿ ಜಿಲ್ಲೆಗಳ ಹಳ್ಳಿಗಳಲ್ಲಿ ಕಾರ್ಯಕ್ರಮ ನೀಡಿದ ಇವರು ಮಕ್ಕಳು ಮೊಮ್ಮಕ್ಕಳಿಗೆ ಈ ಕಲೆಯನ್ನು ಕಲಿಸಿಕೊಡುತ್ತಿದ್ದಾರೆ.

ಸಾಯಬಣ್ಣ
ಶ್ರೀ ಹಲಗೆ ತಂಡದ ಸಂಘ
ಮು : ಕಪನೂರ ಜಿ : ಗುಲಬರ್ಗಾ

# ಶ್ರೀಮತಿ ದಾನಮ್ಮ ಕಿಣಗಿ

ಸುಮಾರು ಐದಾರು ತಾಸುಗಳವರೆಗೆ ಹಾಡಬಲ್ಲ ಸಿರಿಕಂಠದ ಶ್ರೀಮತಿ ದಾನಮ್ಮ ಕಿಣಗಿಯವರು ಗುಲಬರ್ಗಾ ನಿವಾಸಿಗಳು. ಈಗ ೮೪ ವರ್ಷ ವಯಸ್ಸು. ಹಾಡುವ ಗೀಳು ಇನ್ನೂ ಬಿಟ್ಟಿಲ್ಲ. ಈಗಲೂ ಕಂಠ ಸಿರಿ ಹಾಗೆಯೇ ಇದೆ.

ತಂದೆ ಶ್ರೀ ಶರಣಪ್ಪ ಗುಡಿ ಪೂಜಾರಿ. ತಾಯಿ ಗುರುಲಿಂಗಮ್ಮ ಸಂಪ್ರದಾಯಸ್ಥ ಗೃಹಿಣಿ. ಇವರ ಉದರದಲ್ಲಿ ಜನಿಸಿದ ಇವರು ಮೂಲತಃ ಮಹಾರಾಷ್ಟ್ರದ ದುಧನಿ, ಸೊಲಾಪುರದಲ್ಲಿ ನೇಯ್ಗೆ ಕೆಲಸದಲ್ಲಿ ಬಣ್ಣ ಮಾಡುವುದು ಇವರ ವೃತ್ತಿ. ದಾನಮ್ಮನವರಿಗೆ ಬಾಲ್ಯದಿಂದಲೇ ಜಾನಪದ ಗೀತೆಗಳ ಗಾಯನದ ಗೀಳು. ಬಣ್ಣದ ಕೆಲಸ ಮಾಡುವಾಗ ತಾಯಿ–ಅಕ್ಕಂದಿರು ಹಾಡುವಾಗ ಜೊತೆ ಸೇರಿಕೊಂಡು ಹಾಡುವುದೆಂದರೆ ಅವರಿಗೆ ಎಲ್ಲಿಲ್ಲದ ಆನಂದ. ಮುಂದೆ ೮ನೇ ವಯಸ್ಸಿನಲ್ಲಿಯೇ ರೋಗಿ ಬಯಸಿದ್ದು ಹಾಲು–ಅನ್ನ, ವೈದ್ಯ ಹೇಳಿದ್ದು ಹಾಲು–ಅನ್ನ ಎನ್ನುವಂತೆ ಕಲೆಗಳ ತವರೂರು ಎಂದು ಹೆಸರಾದ ಗುಲಬರ್ಗಾದ ದೊಡ್ಡಾಟದ ಕಲಾವಿದರಾದ ಶಿವಶರಣಪ್ಪ ಕಿಣಗಿ ಅವರನ್ನು ವಿವಾಹವಾಗಿ ಗುಲಬರ್ಗಾಕ್ಕೆ ಬಂದರು. ಇವರು ಕೂಡಾ ವೃತ್ತಿಯಿಂದ ಪೂಜಾರಿಕೆ ಮಾಡುತ್ತಿದ್ದು, ಪ್ರವೃತ್ತಿಯಿಂದ ಬಯಲಾಟದ ಪಾತ್ರ ಮಾಡುವುದು ಮತ್ತು ದೊಡ್ಡಾಟದ ಎಲ್ಲ ವಸ್ತ್ರಗಳನ್ನು ತಯಾರಿಸುವುದು ಇವರ ಕಾಯಕ.

ದಾನಮ್ಮನವರು ಹಾಡುಗಾರಿಕೆಗೆ ಪ್ರಸಿದ್ಧವಾದ ಸೋಬಾನ ಪದಗಳ ಗಾಯಕಿ ಬಂಗಾರೆವ್ವನನ್ನು ಹುಡುಕಿಕೊಂಡು ಅಕ್ಕನ ಬಳಗವನ್ನು ಸೇರಿಕೊಂಡರು. ಅಲ್ಲಿ ಮುಖ್ಯ ಸದಸ್ಯೆಯಾಗಿ ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದಲೂ ಪ್ರತಿ ಹಳ್ಳಿಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಶರಣರ ಹಾಡುಗಳು, ಭಜನೆ, ಮದುವೆ, ಸೋಬಾನ ಹಾಡುಗಳಿಂದ ತಮ್ಮದೇ ಆದ ವ್ಯಕ್ತಿತ್ವ ಬೆಳೆಸಿಕೊಂಡು ಅನೇಕರಿಗೆ ಹಾಡುಗಳನ್ನು ಕಲಿಸುತ್ತ ದೊಡ್ಡ ಕಲಾವಿದರ ಸಮೂಹವನ್ನೇ ಹೊಂದಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಶ್ರೀ ಶರಣಬಸವೇಶ್ವರ ಸಂಸ್ಥಾನ, ಬಸವ ಸಮಿತಿಯಂಥ ದೊಡ್ಡ ಸಂಸ್ಥೆಗಳಿಂದ ಸೈ ಎನಿಸಿಕೊಂಡಿದ್ದಾರೆ.

ಶ್ರೀಮತಿ ದಾನಮ್ಮ ಕಿಣಗಿ
ಶಿವಶರಣಪ್ಪ ಕಿಣಗಿ
ಗಾಜಿಪುರ, ಗುಲಬರ್ಗಾ

# ಪಂಪಯ್ಯ ಸ್ವಾಮಿ

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ೪೧ರ ಹರೆಯದ ಶ್ರೀ ಪಂಪಯ್ಯಸ್ವಾಮಿ ಅವರಿಗೆ ಕಲೆಯ ಅನುಭವ ಸಾಕಷ್ಟು. ಬಯಲಾಟದ ಕಲಾವಿದರು. ವಂಶ ಪರಂಪರೆಯಾದ ಈ ಕಲೆಯನ್ನು ಬಾಲ್ಯದಿಂದಲೇ ಬೆಳೆಸಿಕೊಂಡು ದೀರ್ಘ ಸೇವೆ ಸಲ್ಲಿಸಿದ್ದಾರೆ.

ಮಹಾತ್ಮ ಪೀಠ ಅಳ್ಳೊಳ್ಳಿ ಶ್ರೀ ಮಠಾಧೀಶ್ವರರಿಂದ ಸನ್ಮಾನ, ಬಿರುದುಗಳು ಬಂದಿವೆ. ಸೇಡಂ ತಾಲೂಕು ಕಲೆಗಳ ತವರೂರ. ೮-೫-೧೯೬೬ರಲ್ಲಿ ಮಲ್ಕಯ್ಯಸ್ವಾಮಿ ಬನ್ನಮ್ಮನವರ ಉದರದಲ್ಲಿ ಸೇಡಂ ತಾಲೂಕಿನ ನಾಚವಾರ ಗ್ರಾಮದಲ್ಲಿ ಜನಿಸಿದ ಇವರು ತಂದೆಯವರಲ್ಲಿ ಪಳಗಿ ಕಲೆಯನ್ನು ಬೆಳೆಸಿ-ಉಳಿಸಿಕೊಂಡು ಬಂದಿದ್ದಾರೆ.

ತಂದೆಯವರು ೬೦ ವರ್ಷಗಳಿಂದ ನಡೆಸಿಕೊಂಡು ಬಂದ ಈ ಬಯಲಾಟದ ಕಲೆಯನ್ನು ಈಗ ಅದ್ದೂರಿಯಾಗಿ ಮುಂದುವರೆಸಿ ಬೆಳೆಸುತ್ತಿದ್ದಾರೆ. ಬಯಲಾಟಕ್ಕೆ ಬೇಕಾಗುವ ಎಲ್ಲ ಅನುಕೂಲತೆಗಳನ್ನು ಮಾಡಿ ಎಲ್ಲರಿಗೂ ಬಣ್ಣ ಬಳಿಯುವ (ಮೇಕಪ್) ಮತ್ತು ತರಬೇತಿ ನೀಡುವ ಇವರ ಕಲಿಕೆ ಸೇವೆ ಅನನ್ಯ. ಅಲ್ಲದೆ ಬಯಲಾಟದಲ್ಲಿ ಸಾರಥಿ ಪಾತ್ರದಿಂದ ಜನಮಮನ ಸೆಳೆದಿದ್ದಾರೆ.

ಬಯಲಾಟ ನಿರ್ದೇಶನಕ್ಕೆ ಹೋದ ಪ್ರಮುಖ ಹಳ್ಳಿಗಳೆಂದರೆ..... ದೇವರಳ್ಳಿ, ರಾಜೊಳ್ಳಿ, ಮದನಾ, ಕೋನಕಾಪೂರ, ಕೋಲಕುಂದಾ, ದುಗನೂರ, ದೇವನೂರ, ಬಲಕಲ್, ಗುಂಡಳ್ಳಿ, ಕೋಡ್ಲಾ, ಹಂದರಕಿ, ಹುಳಗೋಳ, ಗೌನಳ್ಳಿ, ಕಲ್ಲಂಭ, ಊಡಗಿ, ಅಲ್ಲೂರ, ಡೋಣಗಾಂವ, ಗಾಜರಕೋಟ, ಚಪೆಟ್ಲಾ, ಇಮಡಾಪೂರ, ಗುರುಮಠಕಲ್ಲ, ಕಾಕಲವಾರ, ಚಂಡ್ರಕಿ, ಮುಧೋಳ, ಆಡಕಿ, ಕುರಕುಂಟಾ.

ಆಕಾಶವಾಣಿ ಮತ್ತು ದೂರದರ್ಶನ ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಪ್ರಮುಖ ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಸೇಡಂ, ಚಿತಾಪುರ, ಯಾದಗಿರಿ ಮತ್ತು ಚಿಂಚೋಳಿ ತಾಲೂಕಿನಲ್ಲಿ ಬಯಲಾಟ, ನಾಟಕಗಳ ನಿರ್ದೇಶನ ನೀಡಿದ್ದಾರೆ. ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬಹಳ ಶ್ರಮ ಪಡುತ್ತಿದ್ದಾರೆ.

ಪಂಪಯ್ಯಾಸ್ವಾಮಿ ನಾಚವಾರ
ಬಯಲಾಟ ಕಲಾವಿದ
ಮು : ಸೇಡಂ, ತಾ : ಸೇಡಂ
ಗುಲಬರ್ಗಾ

## ಶಿವಲಿಂಗಪ್ಪ ಡಿಗ್ಗಿ

ಖ್ಯಾತ ಶಹನಾಯಿ ವಾದಕರಾದ ಶ್ರೀ ಶಿವಲಿಂಗಪ್ಪ ಡಿಗ್ಗಿ ಅವರ ಕಾರ್ಯಕ್ರಮ ಕೇಳಿದರೆ ಸನಾದಿ ಅಪ್ಪಣ್ಣ, ನೆನಪು ಬಾರದೇ ಇರದು. ತಂದೆ ಪ್ರಸಿದ್ಧ ಶಹನಾಯಿ ಕಲಾವಿದರು ಹಾಗೂ ವಿದ್ವಾಂಸರು. ಶ್ರೀ ಶಿವಲಿಂಗಪ್ಪನವರು ತಂದೆಯವರ ಕಲೆಯನ್ನು ರಕ್ತದಲ್ಲಿಯೇ ಹರಿಸಿಕೊಂಡು ಬಂದವರು. ಇವರಿಗೆ ಚಿಕ್ಕಂದಿನಲ್ಲಿಯೇ ಶಹನಾಯಿ ಬಾರಿಸುವ ಹಂಬಲ. ಆಗಿನ ಕಾಲದಲ್ಲಿ (ಗಿರಣಿ ಇರದ ಕಾಲದಲ್ಲಿ) ತಾಯಿ ಬೆಳಗಿನ ಜಾವ ಜೋಳ ಬೀಸುವ ಸಮಯದಲ್ಲಿ ಎದ್ದು ಅಭ್ಯಾಸ ಮಾಡುತ್ತಿದ್ದರಂತೆ. ಇವರ ಕಲಿಯುವ ಹಂಬಲ ನೋಡಿ ತಂದೆ ನೀನು ಗುರುಗಳ ಕಡೆಗೆ ಹೋಗು ಎಂದಾಗ ಇಲ್ಲ ನೀನೆ ಕಲಿಸು ಎಂದು ಹೇಳಿ ದುಂಬಾಲು ಬಿದ್ದು ಕಲಿತೆ ಎಂದು ಅವರು ಅಭಿಮಾನದಿಂದ ಹೇಳುತ್ತಾರೆ.

ಶ್ರೀ ಶಿವಲಿಂಗಪ್ಪ ಡಿಗ್ಗಿಯವರು ಶಹನಾಯಿ ಉತ್ತಮ ಕಲಾವಿದ. ಶ್ರೀ ಶಂಕರ ಡಿಗ್ಗಿ ಮತ್ತು ಶ್ರೀಮತಿ ನಿಂಬೆಮ್ಮ ಇವರ ಉದರದಲ್ಲಿ ೧೯೩೯ರಲ್ಲಿ ಜನಿಸಿದರು. ತಂದೆಯವರಲ್ಲಿ ಅಭ್ಯಾಸ ಮಾಡಿ ತಮ್ಮ ಇಡೀ ಜೀವನವನ್ನೇ ಕಲೆಯಲ್ಲಿ, ಕಲಾಸೇವೆಯಲ್ಲಿ ಕಲಾಬಳಗದಲ್ಲಿ ಕಳೆದವರು. ಈಗ ೬೮ ವರ್ಷ ವಯಸ್ಸಾದರೂ ಅವರ ಹುಮ್ಮಸ್ಸು, ಚೈತನ್ಯ ಕಾರ್ಯಕ್ರಮ ನೀಡುವ ವೈಖರಿ ಅತೀ ವೇಗದಲ್ಲಿದೆ.

ಇವರ ಪಕ್ಕವಾದ್ಯಗಳಾದ ಸಾಂಬಾಳ, ಚಿಟ್ಟಲಗಿ, ದಿಮ್ಮು, ಶೃತಿಪಟ್ಟಿಗೆ ಇವೆಲ್ಲವುಗಳಲ್ಲೂ ಇವರು ಪರಿಣಿತರು. ಇವೆಲ್ಲವುಗಳ ಪಾಠ ಹೇಳಿ ತಮ್ಮ ಸ್ವಂತ ಮಕ್ಕಳನ್ನೊಳಗೊಂಡು ನೂರಾರು ಶಿಷ್ಯಂದಿರನ್ನು ಈ ಕಲೆಯ ಕ್ಷೇತ್ರಕ್ಕೆ ಪರಿಚಯಿಸಿ ದೊಡ್ಡ ಕೊಡುಗೆಯನ್ನೇ ನೀಡುತ್ತಿದ್ದಾರೆ. ಒಬ್ಬ ಮಗ ಶೃತಿ ಇನ್ನೊಬ್ಬ ಮಗ ಸಾಂಬಾಳ ಪಕ್ಕವಾದ್ಯಗಾರರು. ಪ್ರತಿಯೊಂದು ಹಳ್ಳಿಗಳಲ್ಲಿ ಜಾತ್ರೆ ನಡೆಯುವಾಗ ೫೦-೬೦ ಜನ

ಪುರವಂತರ ಕಲೆ (ಕುಣಿತ)ಯೊಂದಿಗೆ ತಮ್ಮ ಶಹನಾಯಿ ನುಡಿಸಿ ಜನರನ್ನು ಮಗ್ನರಾಗಿಸಿ ಅವರನ್ನು ಭಾವಪರವಶರನ್ನಾಗಿಸುತ್ತಾರೆ.

ಆಕಾಶವಾಣಿ ಕಲಾವಿದರಾದ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉತ್ಸವಗಳಾದ ಹಂಪಿ ಉತ್ಸವ, ದಸರಾ ಉತ್ಸವ, ಸುವರ್ಣ ಕರ್ನಾಟಕ ಅಂಗವಾಗಿ ದಿಬ್ಬಣದಲ್ಲಿ ಇಡೀ ವರ್ಷ ಪೂರ್ತಿ ಅದ್ದೂರಿ ಕಾರ್ಯಕ್ರಮ ನೀಡಿದವರು. ಜಾನಪದ ಜಾತ್ರೆಗಳ ಅಂಗವಾಗಿ ಬೀದರ, ಗುಲಬರ್ಗಾ, ಕೋಲಾರ ಜಿಲ್ಲೆಗಳಿಗೆ ಹೋಗಿ ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಅಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ೨೦೦೬ರ ಸಾಲಿನ ಪ್ರಶಸ್ತಿಯನ್ನು ಪಡೆದಿದ್ದಾರೆ. ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬಹಳ ಶ್ರಮ ಪಡುತ್ತಿದ್ದಾರೆ.

**ಶಿವಲಿಂಗಪ್ಪ ಡಿಗ್ಗಿ**<br>
**ಶಹನಾಯಿ ಕಲಾವಿದ**<br>
**ವಿಜಯನಗರ, ಎಂ. ಎಸ್. ಕೆ. ಮಿಲ್ ರಸ್ತೆ**<br>
**ಗುಲಬರ್ಗಾ**

# ಭೀಮಶ್ಯಾ ಶರಣಪ್ಪ ಭಕರೆ

ಕರುನಾಡಿಗೆ ಮುಕುಟದಂತಿರುವ ಗುಲಬರ್ಗಾ ಜಿಲ್ಲೆ ತನ್ನದೇ ಆದ ಕಲಾ ಸಂಪತ್ತನ್ನು ಕನ್ನಡ ನಾಡಿಗೆ ಮರೆಯದ ಕೊಡುಗೆಯನ್ನು ನೀಡಿದೆ. ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದ ಶ್ರೀ ಭೀಮಶ್ಯಾ ಶರಣಪ್ಪ ಭಕರೆಯವರು ಶ್ರೀ ಶರಣಪ್ಪ ಮತ್ತು ನಿಂಬೆವ್ವ ಅವರ ಉದರದಲ್ಲಿ ೧೪-೪-೧೯೪೧ರಂದು ಜನಿಸಿದರು. ಬಾಲಕನಾಗಿರುವಾಗ ಸದಾಕಾಲ ಭಜನೆ, ಸಂಗೀತ, ನಾಟಕ, ದೊಡ್ಡಾಟ, ಸಣ್ಣಾಟ, ಗೀ ಗೀ ಪದ, ಡೊಳ್ಳಿನ ಪದ, ಇವುಗಳಲ್ಲಿ ಆಸಕ್ತಿ ಹೊಂದಿದವರು. ಇವರು ಮುಂದೆ ಖ್ಯಾತ ದೊಡ್ಡಾಟ ಕಲಾವಿದರಾಗಿ ಬೆಳೆದರು. ದೊಡ್ಡಾಟ, ಸಣ್ಣಾಟಗಳಲ್ಲಿ ಹಲವಾರು ಪಾತ್ರಗಳನ್ನು ಮಾಡಿದ ಕೀರ್ತಿ ಇವರದು. ಮುಂದೆ ತತ್ವಪದ, ಭಜನೆಯತ್ತ ಗಮನ ಹರಿಸಿ ಸುಮಧುರ ಕಂಠಸಿರಿಯಲ್ಲಿ ತತ್ವಪದ, ಭಕ್ತಿಗೀತೆಗಳು ಹಾಗೂ ಶಿವಶರಣರ ವಚನಗಳನ್ನು ಮನದುಂಬಿ ಹಾಡಿ ಜನಸಮೂಹವನ್ನು ಭಕ್ತಿ ಲೋಕಕ್ಕೆ ಕರೆದೊಯ್ಯುತೊಡಗಿದರು. ಶ್ರಾವಣಮಾಸ, ಹುಣ್ಣಿಮೆ, ಅಮವಾಸ್ಯೆ ದಿನದಂದು ರಾತ್ರಿಯಿಡಿ ಹಾಡಿದರೂ ದಣಿವರಿಯದ ಇವರು ಯುವ ಕಲಾವಿದರಿಗೆ ಮಾರ್ಗದರ್ಶಿಯಾಗಿದ್ದಾರೆ. ಇವರ ಜಾನಪದ ಗಾಯನದ ಗುರುಗಳು ಹಿರಿಯ ಖ್ಯಾತ ಸಂಗೀತ ವಿದ್ವಾಂಸರಾದ ಶ್ರೀ ಚೆನ್ನವೀರ ಗವಾಯಿಗಳು ಗೊಬ್ಬೂರ. ದೊಡ್ಡಾಟದ ಮುಮ್ಮೇಳ ಗುರುಗಳಾದ ಶ್ರೀ ಮಲ್ಲಿನಾಥ, ಚಂದ್ರಾಮಪ್ಪಾ ಓನಾಮ ಶೆಟ್ಟಿಯವರಿಗೆ ಇಂಥ ಶಿಷ್ಯರನ್ನು ಪಡೆದುದಕ್ಕೆ ಹರ್ಷ. ಇವರ ಗರಡಿಯಲ್ಲಿ ಕರ್ನಾಟಕ, ಮಹಾರಾಷ್ಟ್ರದಲ್ಲಿ ದೊಡ್ಡಾಟ, ಸಣ್ಣಾಟ, ಸಂಘಗಳು ಉದ್ಭವಿಸಿ ಕೀರ್ತಿ ಪಡೆದಿವೆ.

ಅನೇಕ ಸಂಘ-ಸಂಸ್ಥೆಗಳಿಂದ ಸಂದ ಸನ್ಮಾನ ಬಿರುದುಗಳು ಅಪಾರ. ಅಲ್ಲದೆ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ೨೦೦೨ರ ಸಾಲಿನ ಜ್ಞಾನ-ವಿಜ್ಞಾನ ನೀಡಿ ಗೌರವಿಸಿದೆ.

ಭೀಮಶ್ಯಾ ಶರಣಪ್ಪ ಭಕರೆ, ಅಕಾಡೆಮಿ ಪ್ರಶಸ್ತಿ ವಿಜೇತರು
ಮು : ಮಾದನ ಹಿಪ್ಪರಗಾ ತಾ : ಆಳಂದ, ಜಿ : ಗುಲಬರ್ಗಾ

# ಗಿರಿಜಾಬಾಯಿ ರಾಠೋಡ

ಗಿರಿಜಾಬಾಯಿ ಉತ್ತರ ಕರ್ನಾಟಕದ ಹೆಸರಾಂತ ಗೀ ಗೀ ಪದಗಳ ಹಾಡುಗಾರ್ತಿ. ಉತ್ತರ ಕರ್ನಾಟಕದ ಗೀ ಗೀ ಪದಗಳಿಗೆ ಜೀವ ತುಂಬಿ ಹಾಡುವ ಕಲಾವಿದೆಯರು ಬಹಳ ಕಡಿಮೆ. ಅಂಥವರಲ್ಲಿ ಲಂಬಾಣಿ ಜನಾಂಗದ ಶ್ರೀಮತಿ ಗಿರಿಜಾಬಾಯಿ ರಾಠೋಡ ಅಗ್ರಗಣ್ಯರು.

ತಮ್ಮ ಮನೆಯಲ್ಲಿ ಅಣ್ಣ ದೇವಲಾನಾಯಕ್ ತಾಂಡಾದ ನಾಯಕರು ಹಾಗೂ ಖ್ಯಾತ ಹಾಡುಗಾರರು. ಅವರ ಗೀ ಗೀ ಪದಗಳನ್ನು ಹಾಡಲು ಕುಳಿತರೆ ಒಂದು ದಿನ ಒಂದು ರಾತ್ರಿ ಸಾಲುತ್ತಿರಲಿಲ್ಲ. ಗಿರಿಜಾಬಾಯಿಯವರು ಅಣ್ಣನ ಜೊತೆ ಗೀ ಗೀ ಪದಗಳನ್ನು ಹಾಡಲು ಹೋಗುತ್ತಿದ್ದರು. ಅಣ್ಣ ತಂಗಿಯರ ಗೀ ಗೀ ಪದಗಳ ಮೇಳ ಕೇಳುಗರ ಮೈ–ಮನ ಪುಳಕಿತಗೊಳಿಸುತ್ತಿದ್ದವು. ಹಾಗೆಯೇ ಜನರಲ್ಲಿ ಚೈತನ್ಯ, ಹುಮ್ಮಸ್ಸು ಹುಟ್ಟಿಸುತ್ತಿದ್ದವು.

ಹೀಗೆ ಚಿಕ್ಕಂದಿನಿಂದಲೇ ಗೀ ಗೀ ಪದಗಳ ಹವ್ಯಾಸಿಯಾಗಿ ಮುಂದೆ ಖ್ಯಾತ ಕಲಾವಿದೆಯಾಗಿ ವಂಶ ಪಾರಂಪರೆ ಬೆಳೆಸಿಕೊಂಡು ಬಂದರು. ೧೮ನೇ ವಯಸ್ಸಿನಲ್ಲೇ ತಮ್ಮ ಶಿಷ್ಯಂದಿರನ್ನು ಬೆಳೆಸಿ ತಮ್ಮದೇ ಆದ ತಂಡವನ್ನು ಕಟ್ಟಿ ತಮ್ಮ ಗಾಂಭೀರ್ಯದಿಂದ ಕಾರ್ಯಕ್ರಮ ನೀಡುತ್ತ ಸತತ ೬೦ ವರ್ಷಗಳ ಕಾಲ ಸೇವೆ ಸಲ್ಲಿಸಿದ ಕೀರ್ತಿ ಇವರದು. ಆಕಾಶವಾಣಿ ಬಿ. ಗ್ರೇಡ್ ಕಲಾವಿದೆಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ ಹಾಗೂ ಬೆಂಗಳೂರು ರಾಜ್ಯದ ಬಹುಪಾಲು ಜಿಲ್ಲೆಗಳಿಗೂ ಕಾರ್ಯಕ್ರಮ ನೀಡಿ ರಾಜ್ಯಕ್ಕೆ ಪರಿಚಿತರಾಗಿದ್ದಾರೆ.

ಸಂಘ ಸಂಸ್ಥೆಗಳಿಂದ ಸಂದ ಸನ್ಮಾನ–ಬಿರುದುಗಳು ಅಪಾರ. ಶ್ರೀ ಶರಣಬಸವೇಶ್ವರ ಸಂಸ್ಥಾನದಿಂದ "ಜಾನಪದ ಸಾಹಿತ್ಯ ದಾಸೋಹಿ" ಎಂಬ ಪ್ರಶಸ್ತಿ

ಪಡೆದಿದ್ದಾರೆ. ಬೆಂಗಳೂರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು ೨೦೦೫ರ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

ಮಗಳು ಶಕುಂತಲಾ ದೇವಲಾ ನಾಯಕ ಈಗಿನ ಗೀ ಗೀ ಪದಗಳ ಖ್ಯಾತ ಗಾಯಕಿಯಾಗಿದ್ದಾರೆ. ಮೊಮ್ಮಗಳು ಸಂಗೀತಾ ಕೂಡಾ ಹಾಡುಗಾರ್ತಿ.


ಶ್ರೀಮತಿ ಗಿರಿಜಾಬಾಯಿ ರಾಠೋಡ<br>
C/o ಶೀಮತಿ ಶಕುಂತಲಾ ದೇವಲ್ ನಾಯಕ<br>
1st Cross, LIG 3<br>
ಆದರ್ಶ ನಗರ, ಗುಲಬರ್ಗಾ

## ಸಂಬಣ್ಣ ಮಹಾದೇವಪ್ಪ ಸಿಂಪಿ

ಉತ್ತರ ಕರ್ನಾಟಕದಲ್ಲಿ ಹೆಚ್ಚಿಗೆ ಪ್ರಚಲಿತವಿರುವ ಪುರವಂತಿಕೆ ಶೈವ ಪರಂಪರೆಗೆ ಸೇರಿದ ವಿಶಿಷ್ಟವಾದ ಧಾರ್ಮಿಕ ಕುಣಿತ, ವೀರಭದ್ರದೇವರ ವೀರಾವೇಶದ ಮಹತ್ವವನ್ನು ವೈಭವೀಕರಿಸುವ ಧಾರ್ಮಿಕ ಆಚರಣೆ. ಪುರವಂತಿಕೆಯ ಕುಣಿತದವರನ್ನು ಪುರ ವಂತರೆಂದು ಕರೆಯುತ್ತಾರೆ.

ಶನಾಯಿ ಸಮಾಳಿಗಳ ವಿವಿಧ ಗತ್ತುಗಳಲ್ಲಿ ಪುರವಂತರು ವೀರಾವೇಶದಿಂದ ಕುಣಿಯುತ್ತ ಮಧ್ಯ ಮಧ್ಯ ವೀರಭದ್ರ ದೇವರ ಪರಾಕ್ರಮ, ಶೌರ್ಯದ ಬಗ್ಗೆ ಒಡಪು ಹೇಳುತ್ತ ಸಾಗಿದಾಗ ಉಳಿದವರೆಲ್ಲ ಖಡೆ ಖಡೆ ಎಂದು ಕುಣಿಯುವವರಿಗೆ ಸ್ಫೂರ್ತಿ ನೀಡುತ್ತಾರೆ.

ಇಂಥ ಪುರವಂತರ ಮನೆತನದ ಶ್ರೀ ಸಂಬಣ್ಣ ಸಿಂಪಿ ಗುಲಬರ್ಗಾ ಜಿಲ್ಲೆಯ ಪ್ರಸಿದ್ಧ ಕಲಾವಿದರು. ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ನೆಲೋಗಿ ಗ್ರಾಮದ ಸಿಂಪಿ ಮನೆತನ ಪುರವಂತಿಕೆಗೆ ಹೆಸರುವಾಸಿಯಾದ ಮನೆತನ. ಶ್ರೀ ಸಂಬಣ್ಣ ಸಿಂಪಿ ನಾಡಿನ ಉದ್ದಗಲಕ್ಕೂ ಸಂಚರಿಸಿ ಕಾರ್ಯಕ್ರಮ ನೀಡಿ ಜನಮನ ಆಕರ್ಷಿಸಿದವರು. ಸಿಂಪಿ ಎನ್ನುವ ಹೆಸರಿಗಿಂತ ಪುರವಂತರು ಎನ್ನುವ ಹೆಸರಿನಿಂದಲೇ ಪ್ರಸಿದ್ಧಿಹೊಂದಿದ ಮನೆತನ ಇವರದು.

ಸಂಬಣ್ಣ ಸಿಂಪಿಯವರಿಗೆ ಈ ಕಲೆ ರಕ್ತಗತವಾಗಿ ಬಂದಿದೆ. ತಂದೆ, ಅಜ್ಜ, ಮುತ್ತಜ್ಜನ ಕಾಲದಿಂದಲೂ ಬಂದಂತಹ ಕಲೆ ಇದು. ಹಿಂದಿನ ಕಾಲದಲ್ಲಿ ೩೭೪ ಹಳ್ಳಿಗಳ ಪಟ್ಟದ ಪುರವಂತಿಕೆ ಈ ಮನೆತನದ್ದೆಂದು ಸಂಬಣ್ಣನವರ ಚಿ. ಶ್ರೀ ವೀರಭದ್ರ ಸಿಂಪಿ ಹೇಳುತ್ತಾರೆ.

ಶ್ರೀ ಸಂಬಣ್ಣ ಖಡ್ಗ ಝಳಪಿಸಿ ಒಡಪು ಹೇಳುತ್ತ ಕುಣಿಯಲು ಆರಂಭಿಸಿದರೆ ಆ ಕುಣಿತದಲ್ಲಿ ವೀರಾವೇಶವಿರುತ್ತದೆ. ವೀರಭದ್ರ ದೇವರ ಆರಾಧನೆ ಇರುತ್ತದೆ. ದೈವೀ ಭಕ್ತಿ ಇರುತ್ತದೆ. ರೌದ್ರತೆ ಇರುತ್ತದೆ. ಆವೇಶದಲ್ಲಿ ಶಸ್ತ್ರ ಹಾಕಿಕೊಳ್ಳುವುದು ರೋಮಾಂಚಕ. ನೋಡುವವರ ಮೈನವಿರೇಳುತ್ತದೆ. ಸಂಬಣ್ಣ ಭಕ್ತಿಯಲ್ಲಿ, ಆವೇಶದಲ್ಲಿ ಆರಾಧನೆಯಲ್ಲಿ ಮೈಮರೆತರೆ ನೋಡುವ ಭಕ್ತ ಸಮೂಹಕ್ಕೆ ಅದ್ಭುತವೆನಿಸಿ ನೋಡುಗರು ಕೂಡ ಭಕ್ತಿಯಲಿ ಮೈ ಮರೆಯುತ್ತಾರೆ.

ಸಂಬಣ್ಣ ಸಿಂಪಿಯವರ ಇನ್ನೊಂದು ವಿಶಿಷ್ಟತೆಯೆಂದರೆ ಶರಣರ ವಚನಗಳನ್ನು ಒಡಪುಗಳಿಗಳವಡಿಸಿಕೊಂಡು ಹೇಳುವದು. ಅಂಬಿಗರ ಚೌಡಯ್ಯ, ಚೆನ್ನಬಸವಣ್ಣ, ಷಣ್ಮುಖ ಶಿವಯೋಗಿಗಳ ವಚನ ಇವರಿಂದ ಒಡಪಿನ ರೂಪದಲ್ಲಿ ಬರುತ್ತವೆ.

ಪುರವಂತಿಕೆಯಷ್ಟೆ ತತ್ವ ಪದಗಾರರಾಗಿ ಶ್ರೀ ಸಂಬಣ್ಣ ಜನ-ಮನ ಸೆಳೆದಿದ್ದಾರೆ. ಕಡಕೋಳ ಮಡಿವಾಳಪ್ಪ, ರಾಂಪುರ ಬಕ್ಕಪ್ಪ, ಕೈವಾರ ಕೃಷ್ಣಪ್ಪನವರ ತತ್ವ ಪದಗಳನ್ನು ಹಾಡಿ ಆಕರ್ಷಿಸಿದ್ದಾರೆ. ಅವರು ಹಾಡುವ ಹಾಡುಗಳು ಬದುಕಿನ ನಶ್ವರತೆಯನ್ನು ಜೀವನದ ಸಾರ್ಥಕತೆಯನ್ನು, ಮಾನವೀಯ ಮೌಲ್ಯಗಳನ್ನು ತಿಳಿಸುತ್ತ ಬದುಕಿಗೆ ಮಾರ್ಗದರ್ಶನವಾಗಿವೆ. ದಾರಿ ದೀಪವಾಗಿವೆ. ಅಂಥ ತಾತ್ವಿಕ ಹಿನ್ನಲೆಯ ಹಾಡುಗಳನ್ನು ಸಂಬಣ್ಣನಂಥ ಕಲಾವಿದರ ಬಾಯಿಯಿಂದ ಕೇಳುವುದೇ ಒಂದು ಭಾಗ್ಯ.

ಸಂಬಣ್ಣನ ಬದುಕಿನ ಒಂದು ಭಾಗ ಪುರವಂತಿಕೆಯಾದರೆ ಇನ್ನೊಂದು ಭಾಗ ತತ್ವಪದ ಹಾಡುಗಾರಿಕೆ. ಹೀಗೆ ಬದುಕು ಜಾನಪದ ಕಲೆಗೆ ಪರಿಪೂರ್ಣವಾಗಿದೆ. ಕಳೆದ ಐದು ದಶಕಗಳಿಂದ ಜಾನಪದ ಕಲೆಯಲ್ಲಿ ನಿರತರವಾಗಿ ೭೫ರ ಗಡಿಯಲ್ಲಿರುವ ಇವರ ಈ ಕಲೆ ಈಗಲೂ ಸಾಗಿಬಂದಿದೆ. ಸಂಬಣ್ಣ ಕಲೆಗಾಗಿಯೇ ಇಡೀ ಬದುಕನ್ನು ಅರ್ಪಿಸಿ ಕೊಂಡು ಬಂದ ಈ ನಾಡು ಕಂಡ ಅಪರೂಪದ ಕಲಾವಿದರು.

ಈ ಕಲಾವಿದ ಜನ್ಮತಾಳಿದ್ದು ಜೇವರಗಿ ತಾಲೂಕಿನ ನೆಲೋಗಿ ಗ್ರಾಮದ ಪುರವಂತರ ಮನೆತನದ ಶ್ರೀ ಮಹಾದೇವಪ್ಪ ಶ್ರೀಮತಿ ಬಸಮ್ಮ ಆದರ್ಶ ದಂಪತಿಗಳ ಉದರದಿಂದ. ಸುಮಾರು ೧೯೩೫-೩೬ರಲ್ಲಿ. ಓದಿದ್ದು ಪ್ರಾಥಮಿಕ, ಮಾಜಿ ಮುಖ್ಯ ಮಂತ್ರಿ ಶ್ರೀ ಧರ್ಮಸಿಂಗ ಅವರೊಂದಿಗೆ ಜೊತೆಯಾಗಿ ಸ್ಕೂಲಿಗೆ ಹೋಗಿದ್ದು ಆಗಾಗ ಜ್ಞಾಪಿಸಿಕೊಳ್ಳುತ್ತಾರೆ. ನಾಲ್ಕು ಗೋಡೆಗಳ ಮಧ್ಯದಲ್ಲಿ ಕಲಿತಿದ್ದಕ್ಕಿಂತ ಹೊರಗಿನ ಶಿಕ್ಷಣವೇ ಹೆಚ್ಚು ಇವರದು. ಜೀವನಾನುಭವ ಕಲಿಸಿದ ಅನೇಕ ಪಾಠಗಳಿಗಿಂತ ಮಿಗಿಲಾದ ಶಿಕ್ಷಣವಿಲ್ಲ.

ಬೀದರ, ಗುಲಬರ್ಗಾ, ರಾಯಚೂರು, ವಿಜಾಪುರ ಜಿಲ್ಲೆಗಳಲ್ಲಿ ಸಾಕಷ್ಟು ಕಾರ್ಯಕ್ರಮ ನೀಡಿದ ಸಂಬಣ್ಣನವರನ್ನು ನಾಡಿನ ಅನೇಕ ಸಂಘ ಸಂಸ್ಥೆಗಳು, ಮಠ ಮಂದಿರಗಳು ಸನ್ಮಾನಿಸಿ ಗೌರವಿಸಿವೆ. ೨೦೦೧ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಪುರವಂತಿಕೆ ಚಿಕ್ಕಂದಿನಿಂದಲೇ ತಂದೆಯ ಜೊತೆ ಕಲಿತದ್ದು, ಈಗ ಮಗ ಶ್ರೀ ವೀರಭದ್ರ ಸಿಂಪಿ, ಮೊಮ್ಮಗ ಶರಣಬಸವನವರೆಗೂ ನಿರಂತರ ಸಾಗಿಬಂದಿದೆ. ಮಗ ಶ್ರೀ ವೀರಭದ್ರ ಸಿಂಪಿ ಸಾಹಿತ್ಯಾಸಕ್ತಿ ಹೊಂದಿ "ಬರಹಗಾರರ ಬಳಗ" ಸ್ಥಾಪಿಸಿ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತ ಎರಡು ಅವಧಿವರೆಗೂ ಗುಲಬರ್ಗಾ ಜಿಲ್ಲಾ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವುದು ವಿಶೇಷ.

ಸಂಬಣ್ಣನವರ ಬದುಕು ಅನೇಕ ಏರಿಳಿತ ಕಂಡಿದೆ. ಕಷ್ಟನೋವು ಬದುಕಿನುದ್ದಕ್ಕೂ ಬಂದಿವೆ. ಒಮ್ಮೆ ೧೯೬೪ರಲ್ಲಿ ಎತ್ತುಗಳನ್ನು ಮೈ ತೊಳೆಯಲು ಭೀಮಾನದಿಗೆ ಇಳಿದಾಗ ಮೊಸಳೆ ಬಾಯಿಗೆ ಸಿಕ್ಕು ಎತ್ತಿನ ಬಾಲ ಹಿಡಿದುಕೊಂಡು ಹೋರಾಡಿ ಹೊರಬಂದದ್ದು ಪುನರ್ಜನ್ಮ ಪಡೆದು ಬಂದಂತೆ. ಜೀವನದ ಅನೇಕ ಏರಿಳಿತಗಳಲ್ಲಿ ಪುರವಂತಿಕೆಯನ್ನು; ಹಾಡುಗಾರಿಕೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿರುವುದು ಗಮನಾರ್ಹ, ಶ್ರೀಮಂತಿಕೆಗಿಂತ ಶ್ರೀಮಂತ ಕಲೆ, ಶ್ರೀಮಂತ ಗುಣಗಳು ಬದುಕಿನಲ್ಲಿ ಹೆಚ್ಚು ತೃಪ್ತಿ ತಂದುಕೊಟ್ಟಿವೆ. ಕರುಣೆತುಂಬಿಕೊಂಡಿರುವ ಇವರ ಕಾರಂಜಿಯಿಂದ ಸುತ್ತಲೂ ಬರುವವರಿಗೆ ಅದು ಆನಂದವನ್ನು ಪಸರಿಸುತ್ತಿದೆ. ಸಂಬಣ್ಣನವರಿಗೆ ಹೊಂದಿಕೊಂಡು ಬಂದ ಪತ್ನಿ ಶ್ರೀಮತಿ ಸಂಗಮ್ಮ ಎಂಥ ಸಂದರ್ಭದ'ಲ್ಲಿಯೂ ಪತಿಯ ಕಲೆಯ ಬದುಕಿಗೆ ಪೂರಕವಾಗಿ, ಸ್ಪಂದಿಸುತ್ತ ಅವರ ನೆರಳಾಗಿ ಬಂದಿದ್ದಾರೆ. ಸಂಬಣ್ಣ ನಾಡು ಕಂಡ ಅಪರೂಪದ ಕಲಾವಿದ.

**ಸಂಬಣ್ಣ ಮಹಾದೇವಪ್ಪ ಸಿಂಪಿ**
**ಅಕಾಡೆಮಿ ಪ್ರಶಸ್ತಿ ಪುರಸ್ಕೃತರು**
C/o. ಶ್ರೀ ವೀರಭದ್ರ ಸಿಂಪಿ
**ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ (ಜಿಲ್ಲಾ), ಗುಲಬರ್ಗಾ**

# ಬಸವಣ್ಣೆಪ್ಪ ನಾವದಗಿ

ಖ್ಯಾತ ಏಕತಾರಿ ಕಲಾವಿದರಾದ ಶ್ರೀಯುತರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದವರು. ೬೬ ವಯಸ್ಸಿನ ಬಸವಣ್ಣೆಪ್ಪನವರ ತಂದೆ ಶ್ರೀ ಬಮ್ಮಣಪ್ಪ ನಾವದಗಿ ಹಾಗೂ ತಾಯಿ ಶ್ರೀಮತಿ ಸಿದ್ದಮ್ಮಾ ನಾವದಗಿ.

೧೫-೩-೧೯೪೧ರಲ್ಲಿ ಜನಿಸಿ ತಂದೆಯವರಿಂದ ಹಾಡುಗಾರಿಕೆಯನ್ನು ಕಲಿತು ಏಕತಾರಿ ಶೃತಿಯೊಂದಿಗೆ ಚಿಕ್ಕಂದಿನಲ್ಲಿ ಹಾಡತೊಡಗಿದರು. ಮುಂದೆ ಪ್ರಸಿದ್ಧ ಯತಿಗಳಾದ ಶ್ರೀ ಸಿದ್ಧಲಿಂಗ ಮಧುರಕಂಡಿ ತಾ. ಜಮಖಂಡಿ ಅವರ ಆಶೀರ್ವಾದದೊಂದಿಗೆ ಹಾಗೂ ಇನ್ನೊಬ್ಬ ಗುರುಗಳಾದ ಶ್ರೀ ಸೋಮಣ್ಣಪ್ಪ ಚಿಕ್ಕಳ್ಳಿಯವರಲ್ಲಿ ಅಭ್ಯಾಸ ಮಾಡಿ ನಲವತ್ತು ವರುಷಗಳಿಂದ ಸತತ ಕಲಾ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಆಕಾಶವಾಣಿ ಕಲಾವಿದರಾದ ಇವರು ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಭಾಗದುದ್ದಕ್ಕೂ ಸಂಚರಿಸಿ ನಿರರ್ಗಳವಾಗಿ ತತ್ವಪದಗಳ ಗಾಯನ, ಮತ್ತು ಜಾನಪದ ಗಾಯನ ಮಾಡುತ್ತ ಬಂದಿದ್ದಾರೆ. ಇವರ ಹಾಡಿನ ಮೋಡಿಗೆ ಒಳಗಾದವರೇ ಇಲ್ಲವೆನ್ನಬಹುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳಿಂದ ಹೈದರಾಬಾದ ಕರ್ನಾಟಕದಲ್ಲಿ ಹೆಸರಾದವರು. ಭಕ್ತಿ ರಸದ ಹೊನಲನ್ನು ಹರಿಸುವ ಇವರ ಗಾಯನವು ಕೇಳುಗರ ಮನಸ್ಸನ್ನು ನೀತಿ-ತತ್ವ-ಆಧ್ಯಾತ್ಮದೆಡೆಗೆ ಕೊಂಡೊಯ್ಯುತ್ತದೆ. ಜಾನಪದ ಸಂಗೀತ ಸಮ್ಮೇಳನಗಳಲ್ಲಿ ಮಂಡಲ ಪಂಚಾಯಿತಿಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ವತಿಯಿಂದಲೂ ಕಾರ್ಯಕ್ರಮಗಳನ್ನು ನೀಡಿ ಗುಲಬರ್ಗಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಏಕತಾರಿ ಗುರು-ಶಿಷ್ಯ ಪರಂಪರೆಯ ಬೋಧಕರಾಗಿ ೬ ತಿಂಗಳವರೆಗೆ ನಡೆಸಿ ಅದನ್ನು ಹಾಗೆಯೇ ಮುಂದುವರೆಸಿಕೊಂಡು ಬಂದಿದ್ದಾರೆ. ಅನೇಕ ಸಂಘ, ಸಂಸ್ಥೆಗಳಿಂದ ಸನ್ಮಾನ ಬಿರುದುಗಳನ್ನು ಪಡೆದಿದ್ದಾರೆ.

ಬಸವಣ್ಣೆಪ್ಪ ಬಿ. ನಾವದಗಿ ಏಕತಾರಿ ಕಲಾವಿದ
ಮುಕ್ಕಾ : ಹಿರೋಳ್ಳಿ ತಾ : ಆಳಂದ, ಜಿ : ಗುಲಬರ್ಗಾ

# ಬಸವಣ್ಣೆಪ್ಪ ಕರಿಬಸಪ್ಪ ಮುಂದೋಡಗಿ

ಹೆಸರಾಂತ ಜಾನಪದ ಸಂಗೀತ ಗಾಯಕರಾದ ಶ್ರೀ ಬಸವಣ್ಣನವರು ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದವರು. ಕರಿಬಸಪ್ಪ ದೋಂಡೀಬಾಯಿಯವರ ಸಂಪ್ರದಾಯಸ್ಥ ಮನೆತನದಲ್ಲಿ ೨೦-೬-೧೯೬೩ರಲ್ಲಿ ಜನಿಸಿ ನಾಲ್ಕು ವರ್ಷದವರಿದ್ದಾಗ ಕಾಮಾಲೆ ರೋಗದಿಂದ ನರಳುತ್ತಿರುವಾಗ ಕಣ್ಣಲ್ಲಿ ಯಾವುದೋ ತಪ್ಪಲು ಹಿಂಡಿ ಹಾಕಿದ ಕಾರಣ ಲೋಕದ ಸುಂದರತೆಯನ್ನು ನೋಡುವ ಕಣ್ಣುಗಳು ಮುಚ್ಚಿದವು. ಮುಂದೆ ಇವರ ಸಂಗೀತದ ಕಣ್ಣು ತೆರೆದು ಅದರಿಂದಲೇ ಲೋಕವನ್ನು ಸುಂದರವಾಗಿಸಿದರು. ೧೮ ವರ್ಷದವರಿರುವಾಗ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲಿಕರಾದ ಮಲ್ಲಿಕಾರ್ಜುನಪ್ಪ ಮಡೆಯವರು ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮಕ್ಕೆ ಸಂಗೀತ ಅಭ್ಯಾಸಕ್ಕೆಂದು ಕಳಿಸಿದರು. ಸತತ ಹತ್ತು ವರ್ಷಗಳ ಕಾಲ ಅಭ್ಯಾಸ ಮಾಡಿ ಡಾ. ಪುಟ್ಟರಾಜ ಗವಾಯಿಗಳ ಆಶೀರ್ವಾದದೊಂದಿಗೆ ಮಾದನ ಹಿಪ್ಪರಗಿಗೆ ಬಂದು ಜಾನಪದ ಸಂಗೀತ ಶಿಷ್ಯರನ್ನು ಸ್ವೀಕರಿಸಿ ತಮ್ಮ ಸೇವೆಯನ್ನು ಮುಂದುವರೆಸಿದ್ದಾರೆ. ಬದುಕು ಕಲೆಯ ಶ್ರೀಮಂತಿಕೆಯಿಂದ ಕೂಡಿದೆ.

ಶ್ರೀಯುತರು ಆಕಾಶವಾಣಿ ಮತ್ತು ದೂರದರ್ಶನದ ಕಲಾವಿದರಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದಲೂ ಜಾನಪದ ಮೇಳ, ಜಯಂತಿ, ಉತ್ಸವಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಶಿಷ್ಯರಾದ ಇವರು ಗುಲಬರ್ಗಾ ಜಿಲ್ಲೆಯ ಮಾದನಹಿಪ್ಪರಗಾ ಗ್ರಾಮದ ಗವಾಯಿಗಳೆಂದೇ ಹೆಸರು ವಾಸಿಯಾಗಿದ್ದಾರೆ. ಸಂಘ ಸಂಸ್ಥೆಗಳಿಂದ, ಮಠ-ಮಂದಿರಗಳಿಂದ ಇವರನ್ನು ಗೌರವಿಸಲಾಗಿದೆ.

ಬಸವಣ್ಣೆಪ್ಪ ಕರಬಸಪ್ಪ ಮುಂಡೋಡಗಿ
ಸಾ : ಮಾದನ ಹಿಪ್ಪರಗಿ ವಸಾಹತಗಲ್ಲಿ ತಾ : ಆಳಂದ, ಜಿ : ಗುಲಬರ್ಗಾ

# ಸಿದ್ದಪ್ಪ ಮೇಟಿ

ಜನಪದ ಉತ್ತಮ ಹಾಡುಗಾರರಾದ ಶಹಾಪೂರ ತಾಲೂಕಿನ ಸೈದಾಪುರದ ಸಿದ್ದಪ್ಪ ಮೇಟಿ ಇಂದಿಗೂ ಇವರಂತಹ ಹಾಲುಮತ ಪುರಾಣ ಮಹಾಕಾವ್ಯದ ಹಾಡುಗಾರರು ದೊರೆಯುವುದು ದುಸ್ತರ.

"ಸ್ವಾಮಿ ನಮ್ಮಯ್ಯ ದ್ಯಾವರು ಬಂದ್ಹಾಂಗ ಬನ್ನಿರೇ" ಎಂದು ಕಣ್ಣು ಮುಚ್ಚಿ ಏಕಾಗ್ರತೆಯಿಂದ ಹಾಡಲು ಪ್ರಾರಂಭಿಸಿದರೆ ಒಂದು ಗತ್ತು ಮುರಿಯಲು ಕನಿಷ್ಟ ಒಂದು ತಾಸಾದರೂ ಬೇಕಾಗುತ್ತಿತ್ತು. ಮೂವತ್ತು ವರ್ಷಗಳ ಹಿಂದೆಯೇ ಖ್ಯಾತ ಜಾನಪದ ವಿದ್ವಾಂಸರೂ ಜಾನಪದ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಡಾ. ವೀರಣ್ಣ ದಂಡೆ ಇವರು ಕಂಡು ಅಚ್ಚರಿ ಪಟ್ಟ ವಿಷಯ. ಈಗ ಮೂವತ್ತು ವರ್ಷಗಳ ನಂತರವೂ ಅಷ್ಟೇ ನಿರರ್ಗಳವಾಗಿ ಹಾಡುವ ನೈಪುಣ್ಯತೆಯನ್ನು ಉಳಿಸಿಕೊಂಡಿದ್ದಾರೆ. ಅವರ ಕಂಠ ಹಾಗೆಯೇ ಉಳಿದಿದೆ. ವಯಸ್ಸಿನಿಂದಾಗಿ ದಮ್ಮು ಬಂದಂತಾದಾಗ ಸಾಥಿಯಾಗಿ ಮಗ "ಶಿವಗೇನಪ್ಪ" ದನಿಗೂಡಿಸುತ್ತಾನೆ.

ಕನ್ನಡ ಕಾವ್ಯದ ಓಘ, ಮಾಂತ್ರಿಕ ಶಕ್ತಿ ಎಲ್ಲವೂ ಎಂತಹ ವಿದ್ವಾಂಸರನ್ನೂ ತಲೆದೂಗಿಸುವಂತೆ ಮಾಡುತ್ತವೆ. ೨೫ರ ಹರೆಯದಲ್ಲಿ ಹಾಡುಗಾರಿಕೆ ಪ್ರಾರಂಭಿಸಿದ ಶ್ರೀ ಸಿದ್ದಣ್ಣನವರಿಗೆ ೫೦ ವರ್ಷಗಳ ಅನುಭವ. ಹಗಲು ಇರುಳು ನಿರಂತರ ಹಾಡಬಲ್ಲ ಹಾಡಿನ ಹಗೆಯೇ ಅವರಲ್ಲಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮತ್ತು ರಾಜ್ಯ ಪ್ರಶಸ್ತಿ ಇವರಿಗೆ ಲಭಿಸಿವೆ.

ಆಗಿನ ಕಾಲದ ಮಹಾರಾಷ್ಟ್ರದ ಹುಲಜಂತಿಯ ಹಾಲುಮತ ಪುರಾಣದ ಶ್ರೇಷ್ಠ ಗಾಯಕರಾದ ಅಡಿವೆಪ್ಪನವರ ಸ್ಪರ್ಧೆಯಲ್ಲಿ ಭೇಷ್ ಎನ್ನಿಸಿಕೊಂಡು ಅವರಿಂದ ಹಾಡಿ ಹೊಗಳಿಸಿಕೊಂಡವರು. ಸಿದ್ದಪ್ಪ ತತ್ವಜ್ಞಾನಿ-ಕವಿ ಅನಂತಯುಗದ ಅಖಂಡೇಶ್ವರನಿಂದ

ಪ್ರಾರಂಭಿಸಿದ ಕಾವ್ಯವನ್ನು ಮುದ್ದವ್ವ ಮುದಗೊಂಡು ಅವರ ಮಕ್ಕಳು ಪಮ್ಮಗೊಂಡ ; ಕಾಳಿನಾರಾಯಣ–ಸುರಮಾದೇವಿ, ಭಾಳ ಬರಮದೇವರು ಬೀರಪ್ಪ ಮಾಲಿಂಗರಾಯ ಹೀಗೆ ಇವರೆಲ್ಲರ ಕಥೆ ಮುಗಿಯುವವರೆಗೆ ನಿರಂತರ ಹಾಡುತ್ತಾರೆ.

ಸಿದ್ದಪ್ಪ ಮೇಟಿ
ಅಕಾಡೆಮಿ ಪ್ರಶಸ್ತಿ ವಿಜೇತರು
ಮುಕ್ಕಾ : ದೊಡ್ಡಸಗರ
ತಾ : ಶಹಾಪೂರ, ಜಿ : ಗುಲಬರ್ಗಾ

## ಮಲ್ಲಿಕಾರ್ಜುನ ಸಂಗಾವಿ

ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಮಲ್ಲಿಕಾರ್ಜುನ ತಂದೆ ರಾಜೇಂದ್ರಪ್ಪ ಸಂಗಾವಿ. ತನ್ನಲ್ಲಿ ಸುಪ್ತವಾಗಿರುವ ಜಾನಪದ ಸಂಗೀತ ಕಲೆಯ ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ಭವಿಷ್ಯದ ಆಶಾಕಿರಣವಾಗಿ ಬೆಳೆಯುತ್ತಿರುವ ಸಂಗಾವಿಯವರು ತಮ್ಮ ಸುಮಧುರ ಕಂಠಶ್ರೀಯಿಂದ ಜಾನಪದ ಸಂಗೀತ ಸರಸ್ವತಿಯ ಆರಾಧಕರಾಗಿ ಹೆಸರು ಮಾಡಿದ್ದಾರೆ.

ಜಾನಪದ ಸಂಗೀತವೇ ತನ್ನ ಬದುಕಿನ ಭಾಗವಾಗಿಸಿಕೊಂಡು ತನ್ನ ಹಾಡುಗಾರಿಕೆಯಿಂದ ಜನರ ಮನ ತಣಿಸುವುದೇ ತನ್ನ ಸೇವೆಯೆಂದು ಅರಿತು ನಾಡಿನಾದ್ಯಂತ ಹೆಸರು ಮಾಡಿದ್ದಾರೆ. ಕೀರ್ತಿ ಸಂಪಾದಿಸಿದ್ದಾರೆ.

ಜಾನಪದ ಕಲಾವಿದರು, ಸಂಗೀತಗಾರರು, ಸಾಹಿತಿಗಳು ಆದ ಮಲ್ಲಿಕಾರ್ಜುನ ಸಂಗಾವಿಯವರು ಕಡುಬಡತನದ ಕುಟುಂಬದಲ್ಲಿಯೇ ಜನಿಸಿದರು. ತಂದೆ ರಾಜೇಂದ್ರಪ್ಪ ತಾಯಿ ಚಂದಮ್ಮ ೧-೪-೧೯೫೨ರಂದು ಜನಿಸಿದ ಇವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ತಂದೆಯನ್ನು ಕಳೆದುಕೊಂಡರು. ಉತ್ತಿ-ಬಿತ್ತಿ ಬೆಳೆಯುತ್ತೇನೆಂದರೆ ಭೂಮಿ ಇರಲಿಲ್ಲ. ದುಡಿದು ತಂದು ಇದ್ದುದರಲ್ಲಿಯೇ ಸಂಸಾರ ತೂಗಿಸಿಕೊಂಡು ಹೋಗುತ್ತಿದ್ದ ತಂದೆಯೇ ತೀರಿಕೊಂಡ ಮೇಲೆ ಆಸರೆಯಿಲ್ಲದ ಬಳ್ಳಿಯಾಯಿತು ಇವಗ ಜೀವನ. ಮಲ್ಲಿಕಾರ್ಜುನನೇ ಮನೆಗೆ ಹಿರಿಯನಾದುದರಿಂದ ಓದುವ ಉತ್ಸಾಹವಿದ್ದರೂ ಬಡತನ ಕಡಿವಾಣ ಹಾಕಿತು. ತಾಯಿ-ತಮ್ಮಂದಿರನ್ನು ಸಲಹುವ ಜವಾಬ್ದಾರಿ ಚಿಕ್ಕವಯಸ್ಸಿನಲ್ಲಿಯೇ ಬಿತ್ತು. ದುಡಿಮೆ ಹುಡುಕಿಕೊಂಡು ಸೇಡಂ ಪಟ್ಟಣಕ್ಕೆ ಬಂದು ಕಿರಾಣಿ ಅಂಗಡಿಯೊಂದರಲ್ಲಿ ತಿಂಗಳಿಗೆ ೧೦ ರೂ. ಸಂಬಳದ ಮೇಲೆ ಕೆಲಸಕ್ಕೆ ನಿಂತು ಸಂಸಾರ ತೂಗಿಸಿಕೊಂಡು ಹೋದರು.

ಮಲ್ಲಿಕಾರ್ಜುನರವರ ತಂದೆ ಹಾಡುಗಾರಿಕೆಯಲ್ಲಿ ಸುತ್ತ-ಮುತ್ತ ಹಳ್ಳಿಗಳಲ್ಲಿ ಪ್ರಸಿದ್ಧ ಪಡೆದವರಾಗಿದ್ದರು. ತಾನು ತನ್ನ ತಂದೆಯಂತೆ ಹಾಡಬೇಕೆಂದು ಭಜನೆಗಳು ನಡೆಯುವಲ್ಲಿ ಹೋಗಿ ಹಾಡುಗಾರರ ಜೊತೆ ಹಾಡತೊಡಗಿದರು. ಸುತ್ತ ಮುತ್ತ ಸಂಗೀತ ಸಭೆ ಎಲ್ಲೇ ನಡೆಯುವಲಿ ಅಲ್ಲಿ ಮಲ್ಲಿಕಾರ್ಜುನ ಕಂಡೇ ಕಾಣುತ್ತಿದ್ದರು. ಕೆಲವಂ ಬಲ್ಲವರಿಂದ ಕಲಿತು ಎನ್ನುವಂತೆ ಬಲ್ಲವರಿಂದ ರಾಗ ದಾಟಿ ಹೇಳಿಸಿಕೊಂಡರು, ಕೆಲವರ ಹಾಡುವುದನ್ನು ಲಕ್ಷಗೊಟ್ಟು ಕೇಳಿ ಕಲಿತುಕೊಂಡರು. ಹಾಡುಗಾರಿಕೆ ಕಲೆಯಲ್ಲಿ ಸಾಧನೆ ಮಾಡುತ್ತ ಸುಮಾರು ೪೦ ವರ್ಷಗಳಿಂದ ಸಂಗೀತವನ್ನೇ ನೆಚ್ಚಿಕೊಂಡು ಜನಪದ ಗೀತೆ, ತತ್ವ ಪದಗಳನ್ನು ಹಾಡುತ್ತ ಹಾರ್ಮೋನಿಯಂ ನುಡಿಸಲು ಕಲಿತು ಮುಂದೆ ಹಾರ್ಮೋನಿಯಂ ಮಾಸ್ತರರೆಂದು ಕರೆಸಿಕೊಳ್ಳುತ್ತ ಹೋದರು.

ಜಾನಪದ ಸಂಗೀತವೇ ಉಸಿರಾಗಿಸಿಕೊಂಡ ಮಲ್ಲಿಕಾರ್ಜುನ ಸಂಗಾವಿಯವರು ಪ್ರತಿವರ್ಷ ಸ್ವಗ್ರಾಮ ಸಂಗಾವಿ ಮನೆಯಲ್ಲಿ ನವರಾತ್ರಿಯಂದು ಜಾನಪದ ಸಂಗೀತ ರಸಮಂಜರಿ ಕಾರ್ಯಕ್ರಮವನ್ನು ೨೫ ವರ್ಷ ಪರ್ಯಂತ ನಡೆಸಿಕೊಂಡು ಬಂದಿದ್ದಾರೆ. ೨೫ನೇ ವರ್ಷದ ರಜತ ಮಹೋತ್ಸವಕ್ಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಚಿಲುಮೆ ಕಾರ್ಯಕ್ರಮಕ್ಕೆ ನಾಡಿನ ಮಠಾಧೀಶರು, ನ್ಯಾಯಾಧೀಶರು ಸಭೆಗೆ ಆಗಮಿಸಿ ಜಾನಪದ ಸಂಗೀತ ಸುಧೆಯನ್ನು ಸವಿದದ್ದನ್ನು ಸಂಗಾವಿಯವರು ಇಂದಿಗೂ ನೆನೆಸಿಕೊಳ್ಳುತ್ತಾರೆ.

ಕೇವಲ ಜಾನಪದ ಸಂಗೀತದಲ್ಲಿ ಅಲ್ಲ ಸಾಹಿತ್ಯದಲ್ಲೂ ಆಸಕ್ತಿ ಹೊಂದಿರುವ ಶ್ರೀಯುತರು ದಿ. ಸಿದ್ರಾಮಪ್ಪಾ ತಳ್ಳಿ ಸೇಡಂರವರು ಪ್ರಕಟಿಸಿರುವ ಶರಣ ಸಿಂಚನದಲ್ಲಿ, ದಿ. ವೆಂಕಯ್ಯಾ ಗುತ್ತೇದಾರ ಜೀವನ ಚರಿತ್ರೆ ಮುಡಬಿಗುಂಡೇರಾವರವರ ಜಾನಪದ ಸಂಗೀತ ಸಂಪಾದನೆಯಲ್ಲಿ ಶ್ರೀಯುತರ ಪರಿಚಯ ಲೇಖನವಿದೆ.

ಮಲ್ಲಿಕಾರ್ಜುನ ಸಂಗಾವಿಯವರು ನಾಡಿನ ಮಠಾಧೀಶರಿಂದ, ಸಂಘ-ಸಂಸ್ಥೆಗಳಿಂದ ಪಡೆದ ಸನ್ಮಾನಗಳಿಗೆ ಲೆಕ್ಕವೇ ಇಲ್ಲ. ೧೯೯೫ರಲ್ಲಿ "ಸಾಕ್ಷರತಾ ಕಿರಣ" ಸಮಿತಿಯಿಂದ ಅಭಿನಂದನ ಪತ್ರ, ೧೯೯೮ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಶಸ್ತಿ, ೨೦೦೨ರಲ್ಲಿ ಶ್ರೀ ಗಾನಯೋಗಿ ಪಂಚಾಕ್ಷರಿ ಸಂಗೀತ ಪ್ರಶಸ್ತಿ, ೨೦೦೩ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಪ್ರಮಾಣ ಪತ್ರ, ೨೦೦೪ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಅರ್ಹತಾ ಪತ್ರ, ೨೦೦೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸೇಡಂ, ಕೆರಳ್ಳಿ ಗುರುನಾಥರಡ್ಡಿ ಪ್ರತಿಷ್ಠಾನ ಪ್ರಮಾಣ ಪತ್ರ.

ಕಳೆದ ಆರು ವರ್ಷಗಳಿಂದ ಜಿಲ್ಲಾ ಸರ್ವಜ್ಞ ಜಾನಪದ ಕಲಾವೃಂದದ ಸಂಘ ಜಿಲ್ಲಾ ಕಾರ್ಯದರ್ಶಿಯಾಗಿ, ಜಿಲ್ಲೆಯಲ್ಲಿ ಕಲಾವಿದರನ್ನು ಸಂಘಟಿಸಿರುವರು. ಗಾನ ಯೋಗಿ

ಪಂಚಾಕ್ಷರಿ ಜಾನಪದ ಕಲಾವೃಂದದ ಜಿಲ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೭ನೇ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಕಲೆಗಳಲ್ಲೊಂದಾದ ಬಯಲಾಟ ಪ್ರದರ್ಶನ ಮಾಡಿದ್ದಾರೆ. ೨೦೦೪ರಲ್ಲಿ ಜಿಲ್ಲೆಯ ಎಲ್ಲಾ ಜಾನಪದ ಕಲಾವಿದರನ್ನು ಒಂದೆಡೆ ಸಮಾವೇಶ (ಯಲ್ಲಾಲಿಂಗೇಶ್ವರ ಮಠ) ಕೊಟನೂರು (ಡಿ) ಯಲ್ಲಿ ಅವರ ಕಲೆಗಳನ್ನು ಪ್ರದರ್ಶಿಸಲು ಅನುವು ಮಾಡಿಕೊಟ್ಟ ಶ್ರೇಯಸ್ಸು ಸಂಗಾವಿಯವರದಾಗಿದೆ. ಇಷ್ಟೆಲ್ಲ ಸಾಧನೆಯನ್ನು ಮಾಡಿದ ಮಲ್ಲಿಕಾರ್ಜುನ ಸಂಗಾವಿಯವರಿಗೆ ಸರ್ಕಾರ ಮತ್ತು ಸಂಸ್ಥೆಗಳು ಪ್ರೋತ್ಸಾಹಿಸಿ ಜಾನಪದ ಸಂಗೀತ ಸೇವೆ ಮಾಡಲು ಶಕ್ತಿ ನೀಡುವಂತಾಗಲಿ.

**ಮಲ್ಲಿಕಾರ್ಜುನ ಆರ್. ಸಂಗಾವಿ**
**C/o ಭವಾನಿ ಮೆಡಿಕಲ್ ಸ್ಟೋರ್**
**ಸಿನೆಮಾ ರಸ್ತೆ, ಸೇಡಂ, ಜಿ : ಗುಲಬರ್ಗಾ**

## ಶಿವಶರಣಪ್ಪ ಕೋಬಾಳ್

ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಕೋಬಾಳ್ ಗ್ರಾಮದ ಶಿವಶರಣಪ್ಪ ತಂದೆ ಮರೆಪ್ಪ ಕೋಬಾಳ್ ಅವರು ಎಲೆ ಮರೆಯ ಕಾಯಿಯಂತಿರುವ ಹಿರಿಯ ಸಂಗೀತ ಪ್ರತಿಭೆ, ಸಂಗೀತ ಕಲೆಯಲ್ಲಿ ಅದಮ್ಯ ಚೇತನವಾಗಿರುವ ಕೋಬಾಳ್ ಅವರು ಅತ್ಯಂತ ಹಿಂದುಳಿದ ಸಮಾಜದಲ್ಲಿ ಜನಿಸಿದರೂ ಕಳೆದ ೫೮ ವರ್ಷಗಳ ಅವರ ಜೀವನವು ಸಂಗೀತ ಕಲೆಯಲ್ಲಿ ಅವರನ್ನು ಜನಮನದ ಕಲಾವಿದನೆಂಬ ಹೆಗ್ಗಳಿಕೆಯನ್ನು ನೀಡಿದೆ.

ಎಸ್.ಎಸ್.ಎಲ್.ಸಿಯವರೆಗೆ ಓದಿರುವ ಕಲಾವಿದ ಶಿವಶರಣಪ್ಪ ಕೋಬಾಳ್ ಅವರು ರಾಜಕೀಯವನ್ನು ತಮ್ಮ ವೃತ್ತಿಯನ್ನಾಗಿಸಿದ್ದರಿಂದ, ಸಂಗೀತ ಕಲೆಯ ಪ್ರವೃತ್ತಿಗೆ ಹಿನ್ನಡೆಯಾಯಿತು. ರಾಜಕೀಯದಲ್ಲಿ ಸಕ್ರೀಯರಾದರೂ ಸಂಗೀತ ಕಲೆಯ ಕೋಬಾಳ್ ಅವರಲ್ಲಿ ರಕ್ತಗತವಾಗಿದೆ.

ಗ್ರಾಮೀಣ ಪ್ರತಿಭೆಯಾಗಿರುವ ಕೋಬಾಳ್ ಅವರು ಕೋಬಾಳ್ ಗ್ರಾಮದಲ್ಲಿಯೇ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಹಾಗೂ ಗುಲಬರ್ಗಾ ತಾಲೂಕಿನ ಹಾಗರಗುಂಡಗಿಯಲ್ಲಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಮತ್ತು ಫರಹತಾಬಾದ ಗ್ರಾಮದ ಪ್ರಭುದೇವ್ ಟಿಡಿಬಿ ಪ್ರೌಢಶಾಲೆಯಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು ಪೂರೈಸಿದ್ದಾರೆ. ಅಪ್ಪಟ ಗ್ರಾಮೀಣ ಕಲಾ ಪ್ರತಿಭೆಯನ್ನು ಹೊಂದಿರುವ ಕೋಬಾಳ್ ಅವರು ಬಾಲ ಸಂಗೀತ ಕಲಾವಿದರೂ ಹೌದು. ಇದಕ್ಕೆ ಅವರ ಹಿರಿಯರ ಪ್ರೇರಣೆಯೇ ಮುಖ್ಯ ಕಾರಣ, ಪೂರ್ವಜರಿಂದ ಬಂದ ಸಂಗೀತ ಬಳುವಳಿಯಾಗಿದೆ. ಕೋಬಾಳ್ ಅವರ ತಾತ ಬಾಬುರಾವ್ ಅವರು ಗ್ರಾಮೀಣ ಭಾಗದಲ್ಲಿ ಡಪ್ಪಿನ ಆಟ ಕಲಿಸುವ ಶಿಕ್ಷಕ. ಶಾಲೆ ಬಿಟ್ಟ ನಂತರ ಹಳ್ಳಿಯಲ್ಲಿ ಸಾಮಾಜಿಕ ನಾಟಕ ಕಲಿತು ಅಭಿನಯದಲ್ಲಿ ಸೈ ಎನ್ನಿಸಿಕೊಂಡ ಹಿರಿಮೆ. ತದನಂತರದಲ್ಲಿ ಸಂಗೀತ ಅಭ್ಯಾಸ. ಅನೇಕ ಹಳ್ಳಿಗಳಲ್ಲಿ ಹಾಡುಗಾರಿಕೆಯಲ್ಲಿ ಹೆಸರು ಗಳಿಸಿದ್ದಾರೆ.

೧೯೭೦ರ ದಶದಗಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ಆರೋಗ್ಯ ಇಲಾಖೆಯಲ್ಲಿ ಜಾನಪದ ಹಾಡುಗಾರನೆಂದು ನೇಮಕಗೊಂಡು, ಜನಸಂಖ್ಯಾ ಸ್ಫೋಟದ ದುಷ್ಪರಿಣಾಮ ಕುರಿತು ಜನಜಾಗೃತಿ ಜಾನಪದ ಹಾಡುಗಾರಿಕೆಯಿಂದ ಜನರ ಮನರಂಜಿಸುತ್ತ ಸರ್ಕಾರದ ಉದ್ದೇಶ ಸಾಧನೆಗಾಗಿ ಇಡೀ ಜಿಲ್ಲೆಯಾದ್ಯಂತ ಕಾರ್ಯಕ್ರಮ ನೀಡಿ ಸರ್ಕಾರದಿಂದ, ಜನತೆಯಿಂದ ಹಾಗೂ ಅಭಿಮಾನಿಗಳಿಂದ ಮಾನ, ಸನ್ಮಾನ ಪಡೆದಿದ್ದಾರೆ.

ಭಜನೆ, ಕೀರ್ತನೆ, ಸಂಗೀತ ಕಛೇರಿ, ಜಾನಪದ ಹಾಡುಗಾರಿಕೆ, ಯುವ ಕಲಾವಿದರಿಗೆ ಪ್ರೋತ್ಸಾಹ ಹಾಗೂ ಎಡೆಬಿಡದ ಸಂಗೀತದ ಗುಂಗು ಸಾಹಿತ್ಯ ಹಾಗೂ ಸಂಗೀತದಲ್ಲಿ ನಿರಂತರವಾಗಿ ಪಾಲ್ಗೊಳ್ಳುವ ಇವರು ತಮ್ಮ ಜೀವನದಲ್ಲಿ ಇವುಗಳನ್ನು ಹವ್ಯಾಸವನ್ನಾಗಿ ಇರಿಸಿಕೊಂಡಿದ್ದಾರೆ.

ಕಲಾವಿದ ಶಿವಶರಣಪ್ಪ ಕೋಬಾಳ ಅವರೆಂದೂ ಸರ್ಕಾರದ ಪ್ರಶಸ್ತಿ ಪುರಸ್ಕಾರವನ್ನು ಬಯಸುಸಿಲಿಲ್ಲ. ಸಂಗೀತ ಕಲೆಯನ್ನು ಮಾತ್ರ ಪ್ರವೃತ್ತಿಯಾಗಿಸಿಕೊಂಡಿದ್ದಾರೆ. ರಾಜಕೀಯ ಮತ್ತು ಸಂಗೀತ ಕಲೆಯ ಶಿವಶರಣಪ್ಪ ಕೋಬಾಳ್ ಅವರಿಗೆ ಒಂದೇ ನಾಣ್ಯದ ಎರಡು ಮುಖಗಳಂತೆ. ಒಂದೇ ಮುಖದ ಎರಡು ಕಣ್ಣುಗಳಿದ್ದಂತೆ. ಕಲೆ ಹಾಗೂ ರಾಜಕೀಯ ಕೋಬಾಳ್ ಅವರ ರಕ್ತದ ಕಣಕಣಗಲ್ಲಿ ಹರಿಯುತ್ತಿದೆ. ಆಸ್ತಿ, ಅಂತಸ್ತು, ಅಧಿಕಾರಕ್ಕಿಂತಲೂ ಪ್ರೀತಿ, ವಿಶ್ವಾಸ, ನಂಬಿಕೆ ಮುಖ್ಯ ಎಂಬುದು ಅವರ ಬಾಳಿನ ತಿರುಳು.

**ಶಿವಶರಣಪ್ಪ ಕೋಬಾಳ್**
**ಮು : ಕೋಬಾಳ್**
**ತಾ : ಜೇವರ್ಗಿ, ಜಿ : ಗುಲಬರ್ಗಾ**

# ರುಕ್ಮಣ್ಣ ಗರಡಕರ್

ಗೊಂದಲಿಗರ ಹಾಡಿನ ಮೂಲಕ ಚಿಂಚೋಳಿ ತಾಲೂಕನಲ್ಲಿ ಹೆಸರು ಮಾಡಿರುವ ಶ್ರೀ ರುಕ್ಮಣ್ಣ ಗರಡಕರ್ ಮೂಲತಃ ಚಿಂಚೋಳಿಯವರೆ. ತಂದೆ ಜಟಿಂಗರಾವ್ ಅವರೂ ಗೊಂದಲಿಗ ಕಲಾವಿದರು. ತಂದೆಗೆ ಅಜ್ಜನಿಂದ ಹೀಗೆ ನಡೆದು ಬಂದ ಈ ಕಲೆ ವಂಶ ಪರಂಪೆಯದು. ರುಕ್ಮಣ್ಣ ಅವರು ೧೦-೩-೧೯೩೯ರಲ್ಲಿ ಜನಿಸಿದರು. ೬೭ರ ಉತ್ಸಾಹಿ, ಹುಮ್ಮಸ್ಸಿನ ಕಲಾವಿದರು. ಕಲೆಯ ಗಾಂಭೀರ್ಯ ಅವರ ಬದುಕನ್ನು ಉನ್ನತ ಮಟ್ಟಕ್ಕೊಯ್ದಿದೆ.

ಗಜಮುಖ ಗಣಪತಿ ಮಾಡುವೆ ನಿನ್ನ ಸ್ತುತಿ ಎಂದು ಪ್ರಾರಂಭಿಸಿ ಆರಾಧ್ಯ ದೇವತೆಯಾದ ಜಗದಂಬಾ ಅಂಬಾದೇವಿಯನ್ನು ಆದಿಶಕ್ತಿ ಜಗದಂಪಾ ಬಾಯಿ ಬಾ ಲಗೂ ಲಗೂ ಬಾ ತುಳಜಾಪುರಕ ಹೋಗೂನ ಎನ್ನುವ ಹಾಡು ಬಹಳ ಆಕರ್ಷಕ. ದೇವಿಯ ಹಾಡುಗಳನ್ನು ಹಾಡುತ್ತಾರೆ. ಇವರ ಹಾಡುಗಳೆಲ್ಲವೂ ಮರಾಠಿ, ಪ್ರಭಾವದ್ದಾಗಿರುತ್ತವೆ. ಮನೆಗಳಲ್ಲಿ ಮದುವೆಗೆ ಗೊಂದಲ ಹಾಕಲು ಒಂದು ತಿಂಗಳು ಮುಂಚೆ ಇವರ ಒಪ್ಪಿಗೆಯನ್ನು ಕಾಯಬೇಕಾಗುತ್ತದೆ. ಇವರು ಹೇಳಿದ ದಿನವೇ ದೇವರ ಕಾರ್ಯ ಮುಗಿಸಬೇಕು.

ಸಾಂಬಾಳ, ಚಲ್ಲಂ, ತುಂತುಣಿ, ದಿವಟಿಗೆ ಇವರ ವಾದ್ಯಗಳು. ಗೊಂದಲ ಕಾರ್ಯಕ್ರಮ ಪ್ರಾರಂಭಿಸುವ ಮೊದಲು ವಾದ್ಯಗಳನ್ನು ದಿವಟಿಗೆಳನ್ನು ಪೂಜೆ ಮಾಡಿ ಮುತ್ತೈದೆಯರಿಂದ ಆರತಿ ಬೆಳಗಿಸಿ ನಂತರ ಅಂಬಾ ಭವಾನಿಯನ್ನು ಸ್ಥಾಪಿಸಿ ನಂತರ ಹಾಡುಗಾರಿಕೆಯುನ್ನು ಪ್ರಾರಂಭಿಸುತ್ತಾರೆ. ದಿವಟಿಗೆ ಸಾವಕಾಶವಾಗಿ ಎಣ್ಣೆ ಹಾಕುತ್ತಾ ಮುಂಜಾನೆಯವರೆಗೆ ಉರಿಸುವುದು ರಾತ್ರಿ ಇಡೀ ಹಾಡುವುದು.

ಪುರಾಣ ಪುರುಷ, ಐತಿಹಾಸಿಕ ವೀರರು, ಸ್ವಾತಂತ್ರ್ಯ ಹೋರಾಟಗಾರರು ಸೇರಿದಂತೆ ಸಮಕಾಲೀನ ರಾಜಕಾರಣಿ, ಸಮಾಜ ಸಾಂಸ್ಕೃತಿಕ ನಾಯಕರನ್ನು, ಘಟನೆಗಳನ್ನು ಹಾಡುಗಳನ್ನಾಗಿಸಿ ಹಾಡುವುದು ಇವರ ವಿಶೇಷ. ಜೊತೆಗೆ ಭಕ್ತಿಗೀತೆ, ಜನಪದ ಗೀತೆ, ತತ್ವಪದಗಳನ್ನೂ ಹಾಡುತ್ತಾರೆ.

ಗುಲಬರ್ಗಾ ಜಿಲ್ಲೆಯ ಕುಲಾಲಿ, ಪಟ್ಟಣ, ಮೇಲಕುಂದಾ, ಮಾದನ ಹಿಪ್ಪರಗಾ, ಕೆರೂರ, ಆಳಂದ, ಸೇಡಂ, ಚಿಂಚೋಳಿ, ನಿಡಗುಂದಾ, ಮಹಾರಾಷ್ಟ ಹಾಗೂ ತೆಲಂಗಾನಾ ಗಡಿ ಭಾಗದ ಪ್ರದೇಶಗಳು ಇವರ ಕಾರ್ಯಕ್ಷೇತ್ರಗಳು.

ಗೊಂದಲಿಗ ಕಲೆಯನ್ನು ಬೆಳೆಸುವಲ್ಲಿ ಕ್ರಿಯಾಶೀಲರಾಗಿದ್ದಾರೆ. ಗೊಂದಲ ಹಾಡುಗಾರಿಕೆಯೂ ಕೂಡಾ ಸಂಗೀತದಷ್ಟೇ ತ್ರಾಸು. ಎಲ್ಲರಿಗೂ ಶ್ರುತಿ ಹತ್ತುವುದಿಲ್ಲ. ಸ್ವರ ಹತ್ತಿದವರೇ ಹಾಡು ಕಲಿಯುತ್ತಾರೆ ಎಂದು ಹೇಳುತ್ತಾರೆ. ರುಕ್ಮಣ್ಣಾ ಗರಡಕರ್ ಇವರಿಗೆ ಸರಕಾರದ ಯಾವುದೇ ಅವಕಾಶಗಳು ಸಿಕ್ಕಿಲ್ಲ. ನನ್ನ ಕಲೆ ನನಗೆ ತೃಪ್ತಿ ನೀಡಿದೆ ಎನ್ನುತ್ತಾರೆ.

ಸಂಘ ಸಂಸ್ಥೆಗಳಿಂದ ಅನೇಕ ಸನ್ಮಾನ, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ.

**ರುಕ್ಮಣ್ಣ ಗರಡಕರ್**
**ಮುಕ್ಕಾಂ : ಚಿಂಚೋಳಿ**
**ತಾ : ಚಿಂಚೋಳಿ, ಜಿ : ಗುಲಬರ್ಗಾ**

## ಶ್ರೀಮತಿ ಶಾಂತಮ್ಮ ಹೊನ್ನಡ್ಡಿ

೧೯೪೦ರಲ್ಲಿ ಜನಿಸಿದ ಶ್ರೀಮತಿ ಶಾಂತಮ್ಮ ಕಳೆದ ಆರು ದಶಕಗಳಿಂದ ಎಲ್ಲಮ್ಮ ದೇವಿಯ ಹಾಡುಗಳನ್ನು ಹಾಡುತ್ತ ಬಂದಿದ್ದಾರೆ. ಶಾಂತಮ್ಮ ೫ ವರ್ಷವಿದ್ದಾಗಲೇ ಸಿದ್ದಣ್ಣನವರನ್ನು ಮದುವೆಯಾದರು. ಸಿದ್ದಣ್ಣ ಹುಟ್ಟಿದ್ದು ಚಿಂಚೂರ ಮಾಪುರ ತಾಯಿಯ ಕೃಪೆ.

ಮದುವೆಯಾದ ಮೇಲೆ ದೇವಿ ಆರಾಧಿಸದಿದ್ದಕ್ಕೆ ಗಂಡನ ಕಣ್ಣು ಹೋದವು. ಒಂದು ದಿನದವರೆಗೆ ದೇವಿಯ ಪೂಜೆ, ಜಾಗರಣೆಯ ನಂತರ ಬಂದವು. ಆ ಪವಾಡ ಅವಳಿಗೆ ಎಲ್ಲಮ್ಮನ ಹಾಡುಗಳನ್ನು ಹಾಡಲು ಪ್ರೇರೇಪಿಸಿದವು. ಇವರು ದೇವಿಯ ಅವತಾರ ಧರಿಸಿದಾಗ ಸಾಕ್ಷಾತ್ ದೇವಿಯೆ. ತಲಿಮ್ಯಾಲ ತುಂಬಿದ ಕೊಡ, ಕೊಡಕ್ಕೆ ನವಿಲು ಗರಿ ಹಾಗೂ ಬಣ್ಣದ ಬಟ್ಟೆಗಳಿಂದ ಶೃಂಗಾರ ಕಾಲಿಗೆ ಗೆಜ್ಜೆ, ಬಿಳಿ ಸೀರಿ ಕುಪ್ಪಸ, ಕೆಂಪು ಸೀರೆ ಕೆಂಪು ಕುಪ್ಪಸ, ಮೈಮೇಲೆ ೧೦–೧೨ ಕೆಜಿ ಕವಡಿ ಸರಗಳು, ಮುಂಗೈಗೆ, ರಟ್ಟೆಗೆ, ಟೊಂಕಕ್ಕೆ ಟೊಂಕಿನ ಪಟ್ಟಿ ಎರಡೂ ಬದಿಗೆ ಬಂಢಾರ ಚೀಲಗಳು. ಚಲಂ, ಚೌಡಿಕೆ, ಡೋಲಕಿ, ಟುಂಟಣಿ, ಗೆಜ್ಜೆ ಇವು ಪಕ್ಕವಾದ್ಯಗಳು. ರಾತ್ರಿ ೮.೦೦ ಗಂಟೆಗೆ ಹಾಡಲು ಪ್ರಾರಂಭಿಸಿದರೆ ಬೆಳಗಿನ ೮.೦೦ರ ವರೆಗೆ ಹಾಡುತ್ತಾಳೆ. ದೇವಿ ಹಾಡುಗಳಲ್ಲದೆ ಕುಟ್ಟುವ, ಬೀಸುವ ಪದಗಳು, ದೇವಿಯ ಜಾತ್ರೆಯ ಹಾಡುಗಳು, ಅಲ್ಲದೆ ಜನಪದ ವೈದ್ಯರೂ ಹೌದು. ಇವರ ವೈದ್ಯಕೀಯ ನೆರವನ್ನು ಅನೇಕ ಜನರು ಪಡೆಯುತ್ತಿದ್ದಾರೆ. ೪೦ ವರ್ಷಗಳಿಂದ ಇವರ ಸೇವೆ ನಿರಂತರವಾಗಿ ಸಾಗಿದೆ. ಅಲ್ಲದೆ ಇವರ ಭಜನೆ ತಂಡದಲ್ಲಿ ಬಹಳಷ್ಟು ಶಿಷ್ಯಂದಿರು ತಯಾರಾಗಿ ಬೆಳೆದಿದ್ದಾರೆ.

ಹೈದರಾಬಾದ, ಬೆಂಗಳೂರು, ಮೈಸೂರು, ಮಂಡ್ಯ, ಮುಂಬಯಿ, ಪೂನಾ, ದೌಂಡ್, ಸೊಲ್ಲಾಪುರ, ಔರಾದ್, ಸಂತಪುರ, ಭಾಲ್ಕಿ, ಉದಗೀರ್, ಲಾತೂರ ಎಲ್ಲಾ ಕಡೆ ಭಕ್ತರ ಮೇರೆಗೆ ಓಗೊಟ್ಟು ಸೇವೆ ಸಲ್ಲಿಸುತ್ತಿದ್ದಾರೆ.

ಶಾಂತಮ್ಮ ಹೊನ್ನಡ್ಡಿ ದೇವಿ ಹಾಡುಗಳಲ್ಲದೆ ಸಂಪ್ರದಾಯದ ಹಾಡುಗಳು, ಜೋಗಿ ಹಾಡುಗಳು ವಿಶೇಷವಾದ ರೀತಿಯಲ್ಲಿ ಹಾಡುತ್ತಾರೆ. ಗುಳ್ಳವ್ವನ ಪದಗಳು ಇವರಲ್ಲಿಯೇ ಸಿಗುತ್ತವೆ. ಎಲ್ಲ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದರೆ ಹಾಡುಗಳ ದಾಖಲೆಯ ಉತ್ತಮ ಕೃತಿಯಾಗಬಹುದು.

ಶಾಂತಮ್ಮ ಹೊನ್ನಡ್ಡಿ
ಮುಕ್ಕಾ : ಐನೊಳ್ಳಿ, ತಾ : ಚಿಂಚೋಳಿ
ಜಿಲ್ಲಾ : ಗುಲಬರ್ಗಾ

# ಬಸವಂತ ರೂಂಪಳ್ಳಿ

ಬಸವಂತ, ಸಾಯಿಬಣ್ಣ–ರತ್ನಮ್ಮನವರ ಉದರದಲ್ಲಿ ೧–೬–೧೯೪೮ರಲ್ಲಿ ಜನಿಸಿದವರು. ಅವರು ಹುಟ್ಟಿದ್ದು ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ನಿಡಗುಂದಾ ಗ್ರಾಮ. ಸೇಡಂ ಇವರಿಗೆ ಸಮೀಪ. ಸೇಡಂ ಕಲೆಗಳ ತವರೂರು. ಕಲೆಗಳ ಆಗರ. ಚಿಕ್ಕಂದಿನಲ್ಲೆ ಕಲೆಗಳಿಗೆ ಮಾರು ಹೋಗಿ, ೧೫ನೇ ವಯಸ್ಸಿನಲ್ಲಿಯೇ ಗುಣಲೋಪ ಎಂಬ ಡಪ್ಪಿನಾಟವನ್ನು ಆಡಿ ಅದರಲ್ಲಿ ಚಿತ್ರಸೇನಿ ಸ್ತ್ರೀ ಪಾತ್ರ ಮಾಡಿ ಜನ ಮೆಚ್ಚುಗೆ ಪಡೆದುಕೊಂಡರು.

ಈ ಮೆಚ್ಚುಗೆಯಿಂದ ಅವರಲ್ಲಿ ಜನಪದ ರಂಗ ಕ್ಷೇತ್ರದಲ್ಲಿ ಆಸಕ್ತಿ ಮೂಡಿ, ಪ್ರಖ್ಯಾತರಾಗಲು ಕಾರಣವಾಯಿತು. ಅನೇಕ ಡಪ್ಪಿನಾಟ, ಕೋಲಾಟಗಳಲ್ಲಿ ಭಾಗವಹಿಸಿ ಸ್ವತಃ ನಾಟಕಗಳನ್ನು ದೊಡ್ಡಾಟಗಳನ್ನು ಬರೆದು ಹಳ್ಳಿಗಳಲ್ಲಿ ಕಲಿಸಿ ಪ್ರದರ್ಶನ ಮಾಡಿಸಿ ಬಯಲಾಟದ ಮಾಸ್ತರರಾದರು.

ಬಾಲಚಂದ್ರ, ಯಯಾತಿ, ಹರಿಶ್ಚಂದ್ರ, ರಾಜಾ ವಿಕ್ರಮ ಮೊದಲಾದ ಡಪ್ಪಿನಾಟಗಳನ್ನು ಹಳ್ಳಿಗಳಲ್ಲಿ ಅವಿದ್ಯಾವಂತ ಜನಗಳಿಗೆ ಕಲಿಸಿ, ಆಡಿಸಿ ಜನಪ್ರಿಯತೆ ಪಡೆದಿದ್ದಾರೆ.

ರೂಂಪಳ್ಳಿಯವರ ಇನ್ನೊಂದು ಆಸಕ್ತಿ ಕ್ಷೇತ್ರ ಮೊಹರಂ ಹಾಡುಗಳನ್ನು ಹಾಡುವುದು. ಇವರು ರಚಿಸಿದ ಮೊಹರಂ ಗೀತೆಗಳ ೮ ಕ್ಯಾಸೆಟ್‌ಗಳು ಬಿಡುಗಡೆಯಾಗಿವೆ. ಅನೇಕ ಸಂಘ–ಸಂಸ್ಥೆಗಳಿಂದ ಬಿರುದು, ಸನ್ಮಾನಗಳನ್ನು ಪಡೆದಿದ್ದಾರೆ.

ತಾಂಡೂರ, ಕರ್ಣಕೋಟಿ, ಕೊಡಂಗಲ್, ವಿಕಾರಾಬಾದ, ಚಿಂಚೋಳಿ, ಸೇಡಂ, ನಿಡಗುಂದಾ, ಅಫಜಲಪೂರ ಹೀಗೆ ಗಡಿ ಭಾಗ ಹಾಗೂ ಆಂಧ್ರ ಮತ್ತಿತರ ರಾಜ್ಯಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸುತ್ತಿದ್ದಾರೆ.

ಈ ಕಲಾವಿದರನ್ನು ಕಲ್ಬುರ್ಗಿ ಜಿಲ್ಲೆಯ ೯ನೇ ಸಾಹಿತ್ಯ ಸಮ್ಮೇಳನದಲ್ಲಿ, ಚಿಂಚೋಳಿ ತಾಲೂಕಿನ ೩ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ.

ಆಕಾಶವಾಣಿ, ದೂರದರ್ಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾವಿದರೂ ಹೌದು.

**ಬಸವಂತ ರೂಂಪಳ್ಳಿ**
**ದೊಡ್ಡಾಟದ ಮಾಸ್ತರರು**
**ಮುಕ್ಕಾಂ : ನಿಡಗುಂದಾ**
**ತಾ : ಚಿಂಚೋಳಿ, ಜಿ : ಗುಲಬರ್ಗಾ**

# ಚನ್ನಯ್ಯಸ್ವಾಮಿ

೭೦ರ ಗಡಿಯನ್ನು ದಾಟಿದ ಶ್ರೀ ಚನ್ನಯ್ಯ ಸ್ವಾಮಿಯವರು ನಾವು ಸಾಲಿ ಓದಿಲ್ಲರಿ, ವಯಸ್ಸು ಸರಿಯಾಗಿ ಗೊತ್ತಿಲ್ಲರಿ. ಆದರ ನಾ ಹುಟ್ಟಿದ್ದು ರಜಾಕರ ಹಾವಳಿ ನಂತರ ಆರು ತಿಂಗಳ ಮ್ಯಾಲ ಅಂತ ನನ್ನ ತಾಯಿ ಹೇಳುತ್ತಿದ್ದಳು. ಅಂದ್ರ ಇವರಿಗೆ ೭೦ ವರ್ಷ ಮೇಲಾಗಿವೆ. ಸುಮಾರು ಐದು ದಶಕಗಳಿಂದ ಇವರ ಕಲಾ ಸೇವೆ ನಡೆದಿದೆ.

ಹಾಡು ಅಂದ್ರ ನನ್ನ ಜೀವ. ಹಾಡಿಕೊಂತ ಕುಂತ್ರ ಎಲ್ಲಾನೂ ಮರಿತೀನ್ರಿ ಆಗ ಬೇರೆ ವಿಚರ ಮಾಡಾಕ ಆಸದನ ಇರೋದಿಲರಿ ಅಂತ. ಚಿಂಚೋಳಿ ತಾಲೂಕಿನ ಎಲ್ಕಪಳ್ಳಿ ಗ್ರಾಮದ ಚನ್ನಯ್ಯ ಸ್ವಾಮಿಯವರು ಹೇಳುತ್ತಾರೆ, ತಂದೆ ಶ್ರೀ ಕರಿಬಸಯ್ಯ ತಾಯಿ ನೀಲವ್ವ ಕಾಯಕ ಜೀವಿಗಳು ದುಡಿದು ತಿನ್ನಬೇಕು ಕಾಯಕವೇ ಕೈಲಾಸವೆಂದು ಹೇಳಿದ ಬಸವಣ್ಣನವರ ಅನುಯಾಯಿಗಳು. ಅವರ ಮಡಿಲಲ್ಲಿ ಬೆಳೆದ ಚನ್ನಯ್ಯ ಸ್ವಾಮಿಯವರು ಹಣೆಯಲ್ಲಿ ಸದಾ ವಿಭೂತಿ ರಾರಾಜಿಸುತ್ತಿರುತ್ತದೆ.

ವೃತ್ತಿಯಿಂದ ಒಕ್ಕಲಿಗರಾದರೂ ಪ್ರವೃತ್ತಿಯಿಂದ ಸಂಗೀತ, ಸಾಹಿತ್ಯ ಕಲೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಳ್ಳಿಯ ಮುಗ್ಧ ಜನರ ಬದುಕನ್ನು ಆಧ್ಯಾತ್ಮದ ಕಡೆಗೆ ಕೊಂಡೊಯ್ಯುತ್ತ ಅವರ ಮನಸ್ಸನ್ನು ಸಂಗೀತದ ಮೂಲಕ ರಂಜಿಸುತ್ತ ಬಂದಿದ್ದಾರೆ.

ಶ್ರೀಯುತರು ಚಿಂಚೋಳಿ ತಾಲೂಕಿನ ಹಲವಾರು ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಲ್ಲದೆ ಬೀದರ, ರಟಕಲ್, ಐನೊಳ್ಳಿ ಸೇಡಂ. ನಿಡಗುಂದಾ, ರಾಯಚೂರು ಮತ್ತು ತೆಲಂಗಾನಗಳಲ್ಲೂ ಜನಪ್ರಿಯರಾಗಿದ್ದಾರೆ.

ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಕಡಕೋಳ ಮಡಿವಾಳಪ್ಪ ಮೊದಲಾದವರ ತತ್ವಪದಗಳನ್ನು ತಮ್ಮದೇ ಆದ ಜಾನಪದ ಧಾಟಿಯಲ್ಲಿ ಹಾಡುತ್ತಾರೆ.

ದುಂದುಮಿ, ಹಂತಿಯ ಹಾಡುಗಳನ್ನು ಹಾಡುವ ಇವರು ಎಲ್ಲಾ ಹಾಡುಗಳ ಅರ್ಥವನ್ನು ಬಿಡಿಸಿ ಹೇಳುವ ಪಾಂಡಿತ್ಯ ಇವರಲ್ಲಿದೆ. ತಮ್ಮ ಸ್ವಂತ ಸಂತೋಷಕ್ಕಾಗಿ ಹಾಡುವ ಇವರು ಯಾವುದೇ ಸರ್ಕಾರಿ ಕಾರ್ಯಕ್ರಮಗಳಲ್ಲಿ ಹಾಡಿರಲಿಲ್ಲ. ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ಗುರುತಿಸಿ ಕಾರ್ಯಕ್ರಮಗಳನ್ನು ನೀಡುತ್ತಿದೆ.

**ಚನ್ನಯ್ಯ ಸ್ವಾಮಿ**
**ಅಂಚೆ : ಎಲ್ಕಪಳ್ಳಿ**
**ತಾ : ಚಿಂಚೋಳಿ, ಜಿ : ಗುಲಬರ್ಗಾ**

## ಭೂಪರಾವ್ ಪೊಡದಳ್ಳಿ

೧೫-೫-೧೯೩೯ರಂದು ಜನಿಸಿದ ಶ್ರೀ ಭೂಪರಾವ್ ಗುಲಬರ್ಗಾ ಜಿಲ್ಲೆಯ, ಚಿಂಚೋಳಿ ತಾಲೂಕಿನ ಒಂದು ಚಿಕ್ಕ ಪೊಡದಳ್ಳಿಯವರು. ಓದಿದ್ದು ೯ನೆಯ ತರಗತಿಯವರೆಗೆ. ಆಗಿನ ಕಾಲದ ೯ನೇ ತರಗತಿ ಇದೂ ಸ್ವತಂತ್ರ ಪೂರ್ವದಲ್ಲಿ. ಆಗ ಪಂಚರ ಹತ್ತಿರ ಬರೆದ ತಮ್ಮ ಜನ್ಮ ದಿನಾಂಕದ ಒಂದು ಕಾಗದವನ್ನು ತೋರಿಸಿದರು. ಯಾವ ಸರ್ಕಾರಿ ನೌಕರಿಗೂ ಹೋಗದೆ ಜಾನಪದ ಹಾಡುಗಾರಿಕೆಗೆ ಮೊರೆ ಹೋಗಿ, ಗುಲಬರ್ಗಾ ಜಿಲ್ಲೆಯ ಖ್ಯಾತ ಹಾಡುಗಾರನಾಗಿದ್ದು ಇವರ ತಂದೆ ವೀರಪ್ಪ ತಾಯಿ ಕಾಶಮ್ಮನವರು. ಅಷ್ಟೇ ಸುಂಸ್ಕೃತ ಸಂಪ್ರದಾಯ ಹಾಗೂ ಕಲಾಪ್ರಿಯರು. ಅಂತೆಯೇ ಮಗನನ್ನು ಕಲೆಯಲ್ಲಿ ಬೆಳೆಯಲು ಪ್ರೋತ್ಸಾಹಿಸಿ ಖ್ಯಾತ ಹಾಡುಗಾರರನ್ನಾಗಿ ಮಾಡಿದರು.

ಚಿಂಚೋಳಿಯಲ್ಲಿ ಗುರುಗಳ ಮನೆಯಲ್ಲಿ ಹತ್ತು ವರ್ಷಗಳ ಕಾಲ ಗುರುಗಳ ಸೇವೆ ಮಾಡುತ್ತ ಅವರು ಹೇಳಿದ ಹಾಡುಗಾರಿಕೆಯ ಪಾಠಗಳನ್ನು ಚಾಚೂ ತಪ್ಪದೆ ಒಪ್ಪಿಸುತ್ತ ಶ್ರದ್ಧೆ, ಭಕ್ತಿ, ಮನಸ್ಸಿನಿಂದ ಕಲಿತರು ಗುರುಗಳು ಶೃತಿಗೆಂದ ಏಕತಾರಿ ವಾದ್ಯವಾದ ತುಂತುಣಿಯೊಂದಿಗೆ ಇವರಿಗೆ ಆಶೀರ್ವದಿಸಿದರು. ಮುಂದೆ ಹತ್ತು ವರ್ಷಗಳ ಕಾಲ ಗುರುಗಳ ಜೊತೆ ಊರೂರು ಅಲೆದು ಬಲಗೈಯಲ್ಲಿ ತುಂತುಣಿ, ಎಡಗೈಲಿ ಕಂಜರ ಹಿಡಿದು ಆಧ್ಯಾತ್ಮದಲ್ಲಿ ತಲ್ಲೀನರಾದರು. ಈಗ ನಿರಂತರ ೪೦ ವರ್ಷಗಳ ಇವರ ಸೇವೆ ಅನನ್ಯವಾದುದು. ವೃತ್ತಿ ಒಕ್ಕಲುತನ ಜನಪದ ಪ್ರಕಾರವಾದ ಸುಗ್ಗಿಯ ಹಾಡು ದುಂದುಮಿ ಹಂತಿಯ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲ ಇವರನ್ನು ಜನರು ತಮ್ಮ ಹೊಲಗಳಿಗೆ ಕರೆಯಿಸಿ ಹಾಡಿಸಿದರೆ ತಮಗೆ ತಮ್ಮ ರಾಶಿಯು ಇಮ್ಮಡಿಯಾಗುವುದು ಎಂಬ ಭಾವನೆಯಲ್ಲಿ ಕರೆಯಿಸಿ ಹಾಡಿಸುತ್ತಾರೆ. ಹೊಲದ ಹಂತಿಗಳೇ ವೇದಿಕೆ ಇವರಿಗೆ.

ಬಿಡುವಿನ ವೇಳೆಯಲ್ಲಿ ಗುಡಿಗಳಲ್ಲಿ ಹಾಡತೊಡಗುತ್ತಾರೆ. ಜನ ಸಮೂಹವೇ ಹರಿದು ಬರುತ್ತದೆ. ಬೆಳಗಿನ ಜಾವದಲ್ಲೂ ಅಷ್ಟೆ. ಇವರು ಭಕ್ತಿಯಲ್ಲಿ ತತ್ವಪದಗಳನ್ನು ಹಾಡುತ್ತ ಕಾಯಕ ಪ್ರಾರಂಭಿಸುತ್ತಾರೆ.

ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳ ಹಳ್ಳಿಗಳಲ್ಲೂ ಇವರ ಕಾರ್ಯಕ್ರಮಗಳು. ಅಪಾರ ಶಿಷ್ಯವೃಂದ ಹೊಂದಿರುವ ಇವರು ಹಳ್ಳಿಗಳ ಬದುಕಿಗೆ ನೆಮ್ಮದಿ ಕೊಟ್ಟವರು. ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಹಳ್ಳಿಯ ಜನರ ಪ್ರೀತಿ ಆದರಗಳೇ ಇವರಿಗೆ ಸಂದ ಸನ್ಮಾನ ಗೌರವ ಪ್ರಶಸ್ತಿಗಳು.

ಭೂಪರಾವ್
ಮುಕ್ಕಾಂ : ಪೋಡದಳ್ಳಿ
ತಾ : ಚಿಂಚೋಳಿ, ಜಿ : ಗುಲಬರ್ಗಾ

## ನಾಗಪ್ಪ ಅಮ್ಲಾಪುರ

ಡೋಲು ಬಾರಿಸುವುದರಿಂದ ಜನರ ಮನ ಸೆಳೆದು ಅವರನ್ನು ತಮ್ಮತ್ತ ಆಕರ್ಷಿಸಿಕೊಳ್ಳುವ ಶ್ರೀ ನಾಗಪ್ಪ ಅಮ್ಲಾಪುರ ಚಿಂಚೋಳಿ ತಾಲೂಕಿನ ಏಕೈಕ ಖ್ಯಾತ ಡೋಲು ವಾದಕ.

ಡೋಲು ಬಾರಿಸುವುದು ವಂಶ ಪರಂಪರೆಯಾಗಿ ಬಂದದ್ದು. ತಂದೆ ಸಾಯಿಬಣ್ಣನವರು ಕೂಡಾ ಡೋಲು ಬಾಜಿಗ ೧೩-೧-೧೯೩೭ರಂದು ಜನಿಸಿದ ಸಾಯಿಬಣ್ಣ ೭೦ ವರ್ಷ. ಈ ಕಲಾವಿದನ ಮುಖದಲ್ಲಿ ಕಲೆಯ ತೃಪ್ತಿಯ ಜೀವನ.

ತಂದೆಯಿಂದ ಬಳುವಳಿಯಾಗಿ ಬಂದ ಡೋಲು ಬಾರಿಸುವಿಕೆಯ ಕಲೆಯೊಂದಿಗೆ ಇವರು ಸಾಹಿತಿಗಳು ಕೂಡಾ. ಶರಣರ ಜೀವನ ಚರಿತ್ರೆಯನ್ನಾಧರಿಸಿದ ಅನೇಕ ಹಾಡುಗಳನ್ನು ಜನಪದ ತ್ರಿಪದಿಗಳಲ್ಲಿ ರಚಿಸಿ ಸುಶ್ರಾವ್ಯವಾಗಿ ಹಾಡುತ್ತಾರೆ. ಇವರು ರಚಿಸಿದ ಹಾಡುಗಳನ್ನು ಉಳಿಸುವ ನಿಟ್ಟಿನಲ್ಲಿ ಈಶ್ವರಯ್ಯ ಕೋಡಂಬಲ್ ಪ್ರಾಧ್ಯಾಪಕರು ಸರಕಾರಿ ಮಹಾವಿದ್ಯಾಲಯ ಸೇಡಂ ಇವರು ಜನಪದ ತ್ರಿಪದಿಗಳು ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

ಚಿಂಚೋಳಿಯಲ್ಲಿ ೧೯೭೦ರಲ್ಲಿಯೇ ಡೋಲು ಸಂಘ ಸ್ಥಾಪಿಸಿ ಅಧ್ಯಕ್ಷರಾಗಿ ಕಲೆಯ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಗುಲಬರ್ಗಾ ಜಿಲ್ಲೆಯಿಂದ ಅನೇಕ ಜನರು ಬಂದು ಕಲೆಯ ಪ್ರಧಾನ ಹಾಡುಗಾರರು ಮತ್ತು ಬಾಜಿಗಾರರಾಗಿದ್ದಾರೆ. ಇವರ ತಂಡದಲ್ಲಿ. ೧೦-೧೨ ಜನರಿದ್ದ ತಂಡ ಇವರದು. ಉತ್ಸವಗಳಲ್ಲಿ ಅಲ್ಲದೆ ಇತರ ಜಾತ್ರೆ, ಮೇಳಗಳಲ್ಲಿ ಕಾರ್ಯಕ್ರಮ ನೀಡುತ್ತಾರೆ. ಸುಮಾರು ೪೦ ವರ್ಷಗಳಿಂದಲೂ ಜನಪದ ಸಾಹಿತ್ಯ, ಸಂಗೀತಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಪ್ರಖ್ಯಾತರಾಗಿದ್ದಾರೆ.

ಚಿಂಚೋಳಿ, ಸೇಡಂ, ತಾಳಿಕೋಟ, ಅಕ್ಕಲಕೋಟ, ದುಧನಿ, ಮರೂಡ, ಮಹಾರಾಷ್ಟ್ರ, ತೆಲಂಗಾನಾ ಬಹುಭಾಗಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಇಂಥವರ ಕಲೆಗಳನ್ನು ಉಳಿಸಿ ಬೆಳೆಸಲು ಪ್ರೋತ್ಸಾಹಿಸುತ್ತಲಿದ್ದಾರೆ.

ನಾಗಪ್ಪ ಅಮ್ಮಾಪುರ
ಮುಕ್ಕಾ : ತಾ : ಚಿಂಚೋಳಿ
ಗುಲಬರ್ಗಾ

# ಶಿವಮ್ಮ ಭಾವಿದೊಡ್ಡಿ

ಕಂಚಿನ ಕಂಠದ ಜನಪದ ಹಾಡುಗಾರ್ತಿ. ಯುವ ಹಾಗೂ ಮಧ್ಯ ವಯಸ್ಸಿನ ಜನಪದ ಹಾಡುಗಾರರಿಗೆ ಆದರ್ಶದಾಯಿನಿ. ತಮ್ಮ ದೈನಂದಿನ ಬದುಕಿನಲ್ಲಿ ಜನಪದ ಹಾಡುಗಳನ್ನು ಹಾಡುತ್ತ ಬೇರೆಯವರಿಗೂ ಕಲಿಸುತ್ತ ಬಂದಿದ್ದಾರೆ. ಇನ್ನೂರಕ್ಕೂ ಹೆಚ್ಚು ಸೋಬಾನ ಪದ ಹಾಡುವ ಇವರು ಜನಪದ ಸಂಗೀತದ ಮೂಲಕ ಜೀವನ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ.

ಗುಲಬರ್ಗ ಜಿಲ್ಲೆಯ ಚಿಂಚೋಳಿ ತಾಲೂಕಿನ ಐನೋಲಿ ಗ್ರಾಮದ ಸೊಸೆಯಾಗಿ ಶಿವಶರಣೆಯೆಂದೇ ಪ್ರಖ್ಯಾತರಾಗಿರುವ ಶಿವಮ್ಮ ಭಾವಿದೊಡ್ಡಿ ಸಿದ್ರಾಮಯ್ಯ ಸ್ವಾಮಿಯವರ ಧರ್ಮಪತ್ನಿ. ಸತಿಪತಿಗಳಲ್ಲೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎನ್ನುವ ಹಾಗೆ ಇವರ ಬದುಕು, ಹನ್ನೆರಡನೇ ಶತಮಾನದ ಶಿವಶರಣೆಯನ್ನೇ ನೋಡಿದಂತೆ ಭಾಸವಾಗಿ ಪುಳಕಿತರಾಗುತ್ತೇವೆ. ಸರಳ, ಮೃದು, ಗಂಭೀರ ಮುಖಮುದ್ರೆ, ಹಣೆಯಲ್ಲಿ ವಿಭೂತಿ, ಶಿವಶಕ್ತಿಯ ಅವತಾರ. ೭೫ ವಯಸ್ಸಿನ ಆರೋಗ್ಯ. ಒಂದು ದಿನವೂ ವೈದ್ಯರ ಬಳಿಗೆ ಹೋದುದಿಲ್ಲ. ಅಡುಗೆ, ಊಟಗಳಲ್ಲೂ ಬಹಳ ಸಂಪ್ರದಾಯಸ್ಥೆ. ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಗೆ ಹೇಳಿ ಮಾಡಿಸಿದ ಉದಾಹರಣೆ ಇವರ ಬದುಕು.

ಜನಪದ ಕಲಾವಿದರಾದ ಇವರು ಜನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಒಗಟು, ಒಡಬು ಗೀತೆಗಳನ್ನು ಆಗಿಂದಾಗ್ಗೆ ಹೇಳುವ ಚಾಣಾಕ್ಷತೆ ಇದೆ. ಸಂಪ್ರದಾಯ ಹಾಡುಗಳು, ಸುಗ್ಗಿಯ ಹಾಡು, ಬೀಗರ ಹಾಡುಗಳು, ಕುಟ್ಟುವ, ಬೀಸುವ, ಕಥನ ಗೀತೆಗಳು, ಗರತಿಯ ಹಾಡುಗಳ ಸಮೃದ್ಧ ಭಂಡಾರವಿದೆ.

ಊರಿನ ಬಹುಪಾಲು ಹೆಣ್ಣುಮಕ್ಕಳು, ಇವರ ಶಿಷ್ಯಂದಿರೆ. ಗ್ರಾಮದಲ್ಲಿ ನಡೆಯುವ ಮಂಗಲ ಕಾರ್ಯಗಳಲ್ಲಿ ತನ್ನೊಂದಿಗೆ ತನ್ನ ಶಿಷ್ಯರನ್ನೂ ಕರೆದುಕೊಂಡು ಅವರಿಂದ ಹಾಡುಗಳನ್ನು ಹೇಳಿಸಿ ಅವರಿಗೆ ಪ್ರಧಾನ ಹಾಡುಗಾರರನ್ನಾಗಿ ಮಾಡಿದ ಖ್ಯಾತಿ ಇವರದು. ಇವರ ಶಿಷ್ಯಂದಿರು ಆಕಾಶವಾಣಿ, ದೂರದರ್ಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾವಿದರಾಗಿ ಬೆಳೆದಿದ್ದಾರೆ. ಅವರು ಹಾಡಿದರೆ ನಾನು ಹಾಡಿದಷ್ಟೆ ಸಂತೋಷವಾಗುತ್ತದೆ ಎಂದು ನಗುವಿನೊಂದಿಗೆ ಬೀಗುತ್ತಾರೆ. ಸನ್ಮಾನ-ಪುರಸ್ಕಾರಗಳನ್ನು ಬಯಸಿದವರಲ್ಲ ಆದರೂ ಶಿವಮ್ಮನವರಿಗೆ ಸರಕಾರ ಗುರುತಿಸಿ ಸನ್ಮಾನಿಸಬೇಕಾಗಿದೆ.

ಶಿವಮ್ಮ ಭಾವಿದೊಡ್ಡಿ
ಐನೋಲಿ ಗ್ರಾಮ
ತಾ : ಚಿಂಚೋಳಿ ಜಿ : ಗುಲಬರ್ಗಾ

## ಹಣಮಂತ ಫತ್ತೆಪುರ

ದೊಡ್ಡಾಟ, ಸಣ್ಣಾಟ, ಕೋಲಾಟಗಳ ಮಾಸ್ತರರೆಂದೇ ಪ್ರಸಿದ್ಧವಾಗಿರುವ ಜಾನಪದ ರಂಗಭೂಮಿಯ ಕಲಾವಿದ. ೮೦ ವಯಸ್ಸಿನ ಹಣಮಂತಪ್ಪನವರು ಶ್ರೀಮಂತ ಕಲೆಗಾರ. ಅವರನ್ನು ಸಂದರ್ಶಿಸಿದಾಗ ಹುರುಪಿನಿಂದ ತಾವು ಆಡಿದ ಪಾತ್ರಗಳ ಹಾಸ್ಯ ನುಡಿಗಳನ್ನು ಒಂದು ತಾಸು ನಿರರ್ಗಳವಾಗಿ ಹೇಳಿ ನಮ್ಮನ್ನು ಬೆರಗು ಗೊಳಿಸಿದ್ದಾರೆ.

ಹಣಮಂತ ಫತ್ತೆಪುರ ಅಪರೂಪದ ಮೃದಂಗ ಕಲಾವಿದ. ಡೋಲು ಕಲಾವಿದ ಹಣಮಂತಪ್ಪ ತಂದೆ ರುಕ್ಕಪ್ಪ, ಚಿಂಚೋಳಿ ತಾಲೂಕಿನ ಫತ್ತೆಪುರದವರು. ಬಡ ಕುಟುಂಬ ರಂಗಭೂಮಿಯ ಕಲಾ ಪ್ರೇಮಿಗಳಾದ ಇವರು ಮಗನ ರಂಗ ಭೂಮಿಯ ಒಲವುಗಳನ್ನು ಪ್ರೋತ್ಸಾಹಿಸಿ ಪ್ರಖ್ಯಾತರನ್ನಾಗಿ ಮಾಡಿದ ಖ್ಯಾತಿ ಅವರದು. ಸ್ವಯಂ ಪ್ರತಿಭೆಯಿಂದ ತಮ್ಮ ಹದಿಮೂರನೇ ವಯಸ್ಸಿನಲ್ಲಿ ಊರೂರು ಅಲೆದರು. ರಂಗಭೂಮಿಯ ಎಲ್ಲಾ ಕಲೆಗಳನ್ನು ಬಲ್ಲವರಾಗಿದ್ದು ಆಟಗಳಲ್ಲಿ ಸಾರಥಿಯಾಗಿ, ಹಾಸ್ಯ ತವಾಷೆಗಳಿಂದ ಚಿತ್ರ ವಿಚಿತ್ರವಾಗಿ ವರ್ತಿಸುತ್ತ ಗಂಭೀರ ಪ್ರಸಂಗವನ್ನು ಸುಲಲಿತಗೊಳಿಸುವ ವೈಶಿಷ್ಟ್ಯಪೂರ್ಣ ಕಲೆ ಇವರದು. ನಾನು ಮಾಡಿದ ಪಾತ್ರಗಳಿಗೆ ಲೆಕ್ಕವೇ ಇಲ್ಲ ಎಂದು ಹೇಳುತ್ತಾರೆ. ಯುವಕನಿದ್ದು ಊರೂರಿಗೆ ಹೋಗಿ, ಕಲಿಸಿ; ತಿಂಗಳುಗಟ್ಟಲೆ ಹೊರಗೆ ಇದ್ದು ಅವರ ಕಲೆಯನ್ನು ಪ್ರದರ್ಶಿಸುವವರೆಗೂ ಇದ್ದು ಬರುವವರು. ಈಗ ತರುಣರು ನನ್ನ ಹತ್ತಿರ ಬಂದು ಕಲಿತು ಹೋಗುತ್ತಿದ್ದಾರೆ ಅಲ್ಲದೆ ಎಲ್ಲಾ ಆಟಗಳ ಕಥೆಗಳನ್ನು ಬರೆದುಕೊಂಡು ಹೋಗುತ್ತಿದ್ದಾರೆ ಎಂದರು. ಒಟ್ಟಿಗೆ ಜನಪದ ರಂಗಭೂಮಿಯ ಸಾಂಸ್ಕೃತಿಕ ರೂವಾರಿ.

ಭೀಮ ವಿಲಾಸ, ಕರ್ಣಕಾಳಗ, ಯಯಾತಿ, ಇಂದ್ರಜೀತ ಇವರು ಆಡಿದ ದೊಡ್ಡಾಟಗಳು. ೬೦ ವರ್ಷಗಳಿಂದ ನಿರಂತರವಾಗಿ ಸಾಗಿ ಬರುತ್ತಿದ್ದ ಇವರ ಕಲಾಸೇವೆ ಸ್ತುತ್ಯಾರ್ಹ. ಸಂಸ್ಕೃತಿ ಇಲಾಖೆ ಇವರ ಕಲೆ ಗುರುತಿಸುವಲ್ಲಿ ನಿಧಾನಿಸಿ ಈಗ ಕಾರ್ಯೋನ್ಮುಖವಾಗಿದೆ.

ಹಣಮಂತ ಫತ್ತೇಪುರ

ಮುಕ್ಕಾಂ : ಫತ್ತೆಪುರ ತಾ : ಚಿಂಚೋಳಿ, ಗುಲಬರ್ಗಾ

# ಕಮಲಮ್ಮ ನಾಟಿಕರ

ಎಲೆ ಮರೆಯ ಕಾಯಿಯಂತೆ ಬೆಳೆದಿರುವ ಕಮಲಮ್ಮ ತನ್ನ ಕಲಾಸೇವೆಯನ್ನು ಹೈದರಾಬಾದ ಕರ್ನಾಟಕದ ತುಂಬ ಪಸರಿಸಿ ಜಾನಪದ ಕೋಗಿಲೆಯೆಂದು ಅನೇಕ ಸಂಘ-ಸಂಸ್ಥೆಗಳಿಂದ ಬಿರುದು ಪಡೆದವರು. ಕಮಲಮ್ಮ ನಾಟಿಕರ ೭೦ ವಯಸ್ಸಿನ ಕಲಾವಿದೆ. ಇವರು ಹುಟ್ಟಿದ್ದು ೧೯೩೮ರಲ್ಲಿ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಕೊಂಚಾವರಂ ಗ್ರಾಮದಲ್ಲಿ. ಐನೊಳ್ಳಿಯ ಲಕ್ಕಣ್ಣ ಅವರನ್ನು ಬಾಲ್ಯದಲ್ಲಿಯೇ ವಿವಾಹವಾಗಿ ಐನೊಳ್ಳಿಗೆ ಬಂದರು. ಕಮಲಮ್ಮ ಹಿಂದುಳಿದ ವರ್ಗಕ್ಕೆ ಸೇರಿದ ಪ್ರತಿಭಾವಂತ ಕಲಾವಿದೆ. ಬದುಕಿನುದ್ದಕ್ಕೂ ತತ್ವದ ಹಾಡುಗಳನ್ನೇ ಹಾಡುವ ಆಸಕ್ತಿ ಪಡೆದರು. ಕಮಲಮ್ಮ ತನ್ನ ತಾಯಿಯನ್ನೇ ಗುರುವಾಗಿ ಪಡೆದವಳು. ಹೊಲದಲ್ಲಿ ಕಳೆ ತೆಗೆಯುವಾಗ, ಬಿತ್ತುವಾಗ, ಮನೆಗೆಲಸ ಮಾಡುವಾಗಲೆಲ್ಲ ತಾಯಿ ಧ್ವನಿ ಎತ್ತಿ ಹಾಡಿ ಮಗಳಿಗೆ ಹಾಡಲು ಹೇಳಿ ಪ್ರೋತ್ಸಾಹ ನೀಡಿದವಳು. ಕಮಲಮ್ಮ ಬಾಲ್ಯದಿಂದಲೇ ಹಾಡಲಾರಂಭಿಸಿ ಕಲಿತದ್ದು ನೂರಾರು ಹಾಡುಗಳನ್ನು ಸೋಬಾನ, ಜೋಗುಳ, ಭುಲಾಯಿ, ಎಣ್ಣೆ ಹಚ್ಚುವ ಪದಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುವ ಕಮಲಮ್ಮ ದಿನಗಟ್ಟಲೇ ಹಾಡಬಲ್ಲ ಚಾಕಚಕ್ಯತೆಯುಳ್ಳ ಮಧುರ ಕಂಠದ ಗಾಯಕಿ. ಸಂಪ್ರದಾಯದ ಹಾಡುಗಳಲ್ಲದೆ ರಾಮಾಯಣ, ಮಹಾಭಾರತದ ಕಥೆಗಳನ್ನಾಧರಿಸಿದ ದೀರ್ಘವಾದ ಗೀತೆಗಳನ್ನು ದಿನಗಟ್ಟಲೆ ಹಾಡುವ ಕಮಲಮ್ಮ ಶರಣ ಬಸವೇಶ್ವರ, ಅಲ್ಲಮ ಪ್ರಭುವಿನ, ಅಕ್ಕಮಹಾದೇವಿ, ನೀಲಾಂಬಿಕೆಯರ ಚರಿತ್ರಾತ್ಮಕ ಹಾಡುಗಳನ್ನು ಪೂರ್ತಿ ಕೇಳಲು ೨-೩ ದಿನಗಳೇ ಬೇಕು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇಂಥ ಎಲೆ ಮರೆಯ ಕಾಯಿಗಳನ್ನು ಗುರುತಿಸಲು ಸದಾವಕಾಶ ಮಾಡಿಕೊಟ್ಟಿದ್ದಕ್ಕೆ ಕೃತಜ್ಞತೆ ಹೇಳುತ್ತ ಸ್ಮರಿಸುತ್ತಾಳೆ.

ರಟಕಲ್ ಸಿದ್ದೇಶ್ವರ, ಸೇಡಂನ ಕೊತ್ತಲ ಬಸವೇಶ್ವರ ಜಾತ್ರಾ ಮಹೋತ್ಸವಗಳಲ್ಲಿ ತನ್ನ ಶಿಷ್ಯ ಬಳಗದೊಂದಿಗೆ ಹಾಡಿ ಸೈ ಎನಿಸಿಕೊಂಡ ಕೀರ್ತಿ ಕಮಲಮ್ಮನವರದು. ಅನೇಕ ಶಿಷ್ಯಂದಿರನ್ನು ಹೊಂದಿರುವ ಕಮಲಮ್ಮ ನಾ ಹಾಡುವ ಹಾಡುಗಳು ಮುಂದೆಯೂ ಹಾಡುವಂತಾಗಬೇಕು ಎಂದು ಯುವಕರಿಗೆ ಎಡಬಿಡದೆ ಹೇಳಿಕೊಡುವ ಗುರುವಾಗಿದ್ದಾಳೆ. ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಸನ್ಮಾನಿತಗೊಂಡ ಕಮಲಮ್ಮ ನನ್ನ ಹಾಡು ಕಲಿತು ಹಾಡುವ ಮಕ್ಕಳೇ ನನಗೆ ಬಹುಮಾನ ಎಂದು ಎದೆ ತುಂಬಿ ಹೇಳುವ ಕಮಲಮ್ಮನಂಥ ಜಾನಪದ ಹಾಡು ಕೋಗಿಲೆಗೆ ಸರಕಾರ ಗುರುತಿಸಿದೆ.

**ಶ್ರೀಮತಿ ಕಮಲಮ್ಮ ನಾಟಿಕರ**
**ಮು : ಐನೂಲಿ, ತಾ : ಚಿಂಚೋಳಿ**
**ಗುಲಬರ್ಗಾ**

## ಹಣಮಂತರಡ್ಡಿ ನಾಗಡ್ಡಿಕರ್

ಸಂಗೀತದ ನಾದವಿದ್ದರೂ ದೊಡ್ಡ ಖ್ಯಾತ ಪ್ರಸಿದ್ಧ ಗುರುಗಳಾದ ಶ್ರೀ ಸಿದ್ಧರಾಮಯ್ಯ ಪುರಾಣಿಕ, ಶೇಷಾದ್ರಿ ಗವಾಯಿಗಳಲ್ಲಿ ಸಂಗೀತ ಅಭ್ಯಾಸ ಮಾಡಿ ತನ್ನ ಹುಟ್ಟೂರಾದ ಹಸರಗುಂಡಗಿ ಗ್ರಾಮಕ್ಕೆ ತೆರಳಿ ತನ್ನ ವೃತ್ತಿಯಾದ ಒಕ್ಕಲುತನ ಮಾಡಿ ಬದುಕಿನುದ್ದಕ್ಕೂ ಜಾನಪದ ಹಾಡುಗಳಾದ ಲಾವಣಿ ಹಂತಿಯ ಪದ, ಸುಗ್ಗಿಯ ಪದ, ಮೊಹರಂ ಪದಗಳನ್ನು ತತ್ವ ಪದಗಳನ್ನು ನಾಡಿನಾದ್ಯಂತ ಹಾಡಿ ಹಲವರಿಗೆ ಕಲಿಸಿ ಜನಪದ ಸಾಹಿತ್ಯ, ಕಲೆಯನ್ನು ಉಳಿಸುವಲ್ಲಿ ಶ್ರಮಿಸಿದವರು ೭೦ ವರ್ಷದ ಶ್ರೀ ಹಣಮಂತರಡ್ಡಿ ನಾಗಡ್ಡಿಕರ್.

ನಲವತ್ತು ವರ್ಷಗಳ ಕಾಲ ನಿರಂತರ ಸಾಗಿದ ಕಲಾಸೇವೆ, ಸಾರ್ಥಕ ಬದುಕು, ತೃಪ್ತಿ ಜೀವನ, ಇನ್ನೂ ಸೇವೆಯನ್ನು ಮಾಡುವ ಹಂಬಲದಿಂದ ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾರೆ. ೩೦ ವರ್ಷಗಳ ಹಿಂದೆಯೇ ಹಸರಗುಂಡಗಿಯಲ್ಲಿ ಸಂಗೀತ ಪಾಠಶಾಲೆ ನಡೆಸುತ್ತಿದ್ದು ಇಲ್ಲಿ ಉಚಿತವಾಗಿ ಸೇವೆಯನ್ನು ನಡೆಸಿ ಜನರ ಮನ ಗೆದ್ದಿದ್ದಾರೆ. ಅನೇಕ ಭಜನಾಮಂಡಳಿಗಳಲ್ಲಿ ಗುರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಸುತ್ತ ಮುತ್ತ ಹಳ್ಳಿಗಳ ಜಾತ್ರೆಗಳಿಗೆ ಭಜನೆಯೊಂದಿಗೆ ಪಾದಯಾತ್ರೆ ಕೈಗೊಂಡಿದ್ದಾರೆ.

ದೊಡ್ಡಾಟ, ನಾಟಕ, ಬಯಲಾಟಗಳಲ್ಲಿ ಜಾನಪದ ಸಂಗೀತ ಸೇವೆ ಮಾಡಿ ಹೈದರಾಬಾದ ಕರ್ನಾಟಕದ ಹಳ್ಳಿಗಳಲ್ಲಿ ನಾಟಕ ಹಾರ್ಮೋನಿಯಂ ಸಂಗೀತ ಮಾಸ್ತರ್ ಎಂದು ಹೆಸರಾಗಿದ್ದಾರೆ.

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್, ಉತ್ಸವಗಳಲ್ಲಿ ಜಾನಪದ ಮೇಳಗಳಲ್ಲಿ ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿರುವುದು ನಾಗಡ್ಡಿಯವರ ಹೆಗ್ಗಳಿಕೆಯಾಗಿದೆ. ಭಜನೆ ಪದಗಳು ಸಾವಿರಾರು, ಹಂತಿಯ ಪದಗಳು

ನೂರಾರು ಹೀಗೆ ಜನಪದ ಕಾವ್ಯ ಸಂಗ್ರಹವೇ ಇವರಲ್ಲಿದೆ. ರಾತ್ರಿಯಿಡಿ ಭಜನೆ, ವಾರಗಟ್ಟಲೆ ಸುಗ್ಗಿಯ ಹಾಡುಗಳನ್ನು ಹಾಡುವ ಇವರ ಕಲೆ ಅಪ್ರತಿಮವಾದುದು. ಇವರ ಕಲೆಗೆ ಇನ್ನೂ ಪ್ರೋತ್ಸಾಹ ದೊರೆಯಬೇಕು ಸರಕಾರದಿಂದ ಉಳಿಸುವಿಕೆ ಆಗಬೇಕು ಎಂದು ಹೇಳುವ ನಾಗರಡ್ಡಿಯವರು ಭಾವುಕರಾಗುತ್ತಾರೆ.

**ಹಣಮಂತರಡ್ಡಿ ನಾಗಡ್ಡಿಕರ್**<br>
**ಮು : ಹಸರಗುಂಡಗಿ, ತಾ : ಚಿಂಚೋಳಿ**<br>
**ಗುಲಬರ್ಗಾ**

# ಶರಣಪ್ಪ ಇದಲಾಯಿ

ಏಕಲಾರಿ ತಂಬೂರಿ ಹಿಡಿದ ಸಾಕ್ಷಾತ್ ನಾರದನ ಅವತಾರ ಬಲಗೈಯಲ್ಲಿ ತಂಬೂರಿ ಎಡಗೈಯಲ್ಲಿ ರಾಮತಾಳ ಹಿಡಿದು ಭಕ್ತಾದಿಗಳ ಮನ ಸೂರೆಗೊಂಡು ದೇವರ. ಸೇವೆಯಲ್ಲಿ ೫-೬ ದಶಕಗಳೇ ಕಳೆದವು. ಆಧ್ಯಾತ್ಮದ ಎತ್ತರ ನಿಲುವಿನಲ್ಲಿ ಗುರುತಿಸಿಕೊಂಡವರು. ೧೯೩೭ರಲ್ಲಿ ಶರಣ ಕಾಯಕ ಜೀವಿಗಳಾದ ಶಂಕರಪ್ಪ ತಾಯಿ ಭೀಮವ್ವರ ಉದರದಲ್ಲಿ ಪವಾಡ ಪುರುಷರಾಗಿಯೇ ಜನಿಸಿದವರು. ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಐನೂಲಿ ಗ್ರಾಮದ ಶರಣಪ್ಪ ಇದಲಾಯಿಯವರು ರಾಜ್ಯ ಮಟ್ಟದ ಜನಪದ ಕಲಾವಿದರಾಗಿ ಬೆಳೆದವರು. ಬಾಲ್ಯದಿಂದಲೇ ಜಾನಪದ ಕಲೆಯತ್ತ ಹೆಚ್ಚಿನ ಆಸಕ್ತಿ ಹೊಂದಿದ್ದರಿಂದ ತಮ್ಮ ಸುಂದರವಾದ ಕಂಠದಿಂದ ಭಜನೆ, ತತ್ವಪದ, ಜಾನಪದ ಗೀತೆಗಳು ಬೀಸುವ, ಕುಟ್ಟುವ ಪದಗಳನ್ನು ಹಾಡಿ ಎಲ್ಲರ ಮನಸೂರೆಗೊಳ್ಳುತ್ತಾರೆ.

ಶ್ರೀಯುತರು ಸ್ವಯಂ ಪ್ರತಿಭೆಯಿಂದ ಸಂಗೀತವನ್ನು ಕಲಿತು ಜಾನಪದ ಹಾಡುಗಳಿಗಷ್ಟೆ ಸಂಗೀತ ಸೀಮಿತಗೊಳಿಸಿ ತಮ್ಮ ಮಾಧುರ್ಯ ಧ್ವನಿಯಿಂದ ಭಕ್ತಿಗಳನ್ನು ಜಾನಪದದಲ್ಲಿ ಹೆಚ್ಚಿಸಿದ್ದಾರೆ, ಭಜನೆ, ತತ್ವಪದಗಳ ಇವರ ಪ್ರಧಾನ ಕಲೆ. ನಿಜಗುಣ ಶಿವಯೋಗಿ, ಕಡಕೋಳ ಮಡಿವಾಳಪ್ಪ ಶಿಶುನಾಳ ಶರೀಫರ ಗೀತೆಗಳನ್ನು ಹೆಚ್ಚು ಹೆಚ್ಚು ಹಾಡುತ್ತಾರೆ. ಇವರ ಸಂಗ್ರಹದ ಪುಸ್ತಕ ಪ್ರಕಟವಾಗಿದೆ. ಅಜ್ಜಿ, ಅಜ್ಜ ಹಿರಿಯರಿಂದ ಸಂಗ್ರಹಿಸಿದ ಹಾಡುಗಳನ್ನು ಮೂಲ ಧಾಟಿಯಲ್ಲೇ ಹಾಡಬಲ್ಲ ಸಾಮರ್ಥ್ಯವನ್ನು ಹೊಂದಿದ್ದಾರೆ.

ಇವರ ಕಲಾಸೇವೆಯನ್ನು ಮೆಚ್ಚಿದ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಚಿಂಚೋಳಿ, ಸೇಡಂ ಸನ್ಮಾನಿಸಿ ಜಾನಪದ ಗಾರುಡಿಗ ಎಂಬ ಬಿರುದುನ್ನು ನೀಡಿದೆ.

ರಟಕಲ್, ಇದಲಾಯಿ, ಐನೂಲಿ ಜಾತ್ರೆಗಳಲ್ಲಿ ಇವರ ಸೇವೆ ಇರಲೇಬೇಕು. ಗುಲಬರ್ಗಾದ ಶರಣಬಸವೇಶ್ವರ ಸಂಸ್ಥಾನದಲ್ಲಿ ತಮ್ಮ ಭಜನೆ ಸೇವೆ ಸಲ್ಲಿಸಿ ದೊಡ್ಡಪ್ಪ ಅಪ್ಪಾ ಅವರಿಂದ ಸೈ ಎನಿಸಿಕೊಂಡ ಕೀರ್ತಿ ಇವರದು.

ಸಂಘ ಸಂಸ್ಥೆಗಳಿಂದ ಸನ್ಮಾನ ಪ್ರೀತಿ ಆದರಗಳೇ ಇವರಿಗೆ ಪ್ರಶಸ್ತಿಗಳು ಹಳ್ಳಿಹಳ್ಳಿಗಳಿಗೆ ಹೋಗಿ ತಮ್ಮ ಕಲೆಯನ್ನು ಕಲಿಸುವ ಇವರ ಹುಮ್ಮಸ್ಸು ಈಗ ಆಗದಿದ್ದರೂ ಶಿಷ್ಯರ ಬಳಗವೇ ಇವರಲ್ಲಿ ಹರಿದು ಬರುತ್ತದೆ.

ತಮ್ಮ ಮಕ್ಕಳಿಗೂ ಹಾಡುವುದನ್ನು ಬಳುವಳಿಯಾಗಿ ನೀಡಿದ ಇವರು ಜೊತೆಯಾಗಿ ಕರೆದುಕೊಂಡು ಹೋಗಿ ತರಬೇತಿ ನೀಡಿದ ಪ್ರಯುಕ್ತ ಈಗ ಅವರೂ ಪ್ರಧಾನ ಹಾಡುಗಾರರಾಗಿದ್ದಾರೆ. ಹಾಡುತ್ತ ಹಾಡುತ್ತ ಮೈ ಮರೆಯುತ್ತಾರೆ. ಸ್ವಯಂ ಆನಂದಕ್ಕಾಗಿ ಹಾಡುವ ಇವರು ಐನೂಲಿಯ ಶ್ರೀ ಬಸವಣ್ಣ ದೇವರ ಗುಡಿಯಲ್ಲಿ ಮತ್ತು ಶ್ರೀ ಶ್ರೀ ಶಿವಯೋಗಿ ವಿರುಪಾಕ್ಷಯ್ಯ ತಾತನವರ ಮಂದಿರದಲ್ಲಿ ಪ್ರತಿ ದಿನ ಸಂಜೆ ವೇಳೆ ಹಾಡುತ್ತ ದೇವರ ದರ್ಶನ ಪಡೆಯಲು ಬಂದ ಭಕ್ತಾದಿಗಳ ಮನ ತಣಿಸುತ್ತಾರೆ.

ತಮ್ಮ ಶಿಷ್ಯಂದಿರು ಜಾನಪದ ಸೇವೆಯಲ್ಲಿ ಬೆಳೆದು ಸರಕಾರದ ಗೌರವ, ಸನ್ಮಾನಗಳು ದೊರೆಯಲೆಂದು ಆಶಿಸುವ ಶರಣಪ್ಪಜ್ಜ ಭಾವುಕನಾಗಿ ಹೃದಯ ತುಂಬಿ ಹೇಳುತ್ತಾರೆ.

**ಶರಣಪ್ಪ ಇದಲಾಯಿ**
**ಮು : ಇದಲಾಯಿ**
**ತಾ : ಚಿಂಚೋಳಿ, ಜಿ : ಗುಲಬರ್ಗಾ**

# ಬಸವಣ್ಣೆಪ್ಪ ಶಿವಪ್ಪ ರೇವೂರ

ಬಯಲಾಟದ ಆದಿಶಕ್ತಿಗಳಾದ ಪಾರ್ವತಿ, ಲಕ್ಷ್ಮೀ, ಸರಸ್ವತಿ, ರುಕ್ಮಿಣಿ, ಸತ್ಯಭಾಮರಂತಹ ಪ್ರಮುಖ ಪಾತ್ರಗಳು ಇವರಿಗೆನೇ ಕಾದಿರುತ್ತಿದ್ದವು. ಇವರ ದೇವಿ ಪಾತ್ರ ನೋಡಲು ಬಂದ ಜನರು ಭಾವುಕರಾಗಿ ಪರವಶರಾಗುವರು.

ದೇವತೆಗಳಲ್ಲದೇ ಪುರಾಣ ಸ್ತ್ರೀ ಪಾತ್ರಗಳಾದ ಸುಭದ್ರೆ, ಚಾಮಲೆ, ಮರುದ್ವತಿ, ಪ್ರಮಿಳಾ, ದ್ರೌಪದಿ, ಭಾನುಮತಿ ಹೀಗೆ ತಾನು ಭ್ರಮೆ ಹಿಡಿಸಿದ ಸ್ತ್ರೀ ಪಾತ್ರಗಳ ಲೆಕ್ಕವೆಷ್ಟೆಂಬುದು ಸ್ವತಹ ಬಸವಣ್ಣೆಪ್ಪನವರಿಗೆ ಗೊತ್ತಿಲ್ಲ. ಅಫಜಲಪೂರ ತಾಲೂಕಿನ ಘತ್ತರಗಾ ಭಾಗಮ್ಮನವರ ನಂಬಿಕೆಯು ಇವರ ಮೇಲೆ ಅಗಾಧ ಪ್ರಭಾವ ಬೀರಿ ಇವರ ಸ್ತ್ರೀ ಪಾತ್ರಕ್ಕೆ ದಾರಿಗಳಾದವು.

ಶಿವಪ್ಪ-ಶಿವಮ್ಮನವರ ಉದರದಲ್ಲಿ ೧೯೩೭ರಲ್ಲಿ ಜನಿಸಿದ ಬಸವಣ್ಣೆಪ್ಪನವರು ೭೦ ವರ್ಷ ಹಿರಿಯ ಬಯಲಾಟದ ಕಲಾವಿದರು. ಬದುಕು ಬಡತನವಾದರೂ ತನ್ನ ಕಲೆಯಿಂದ ಸಂತೃಪ್ತನೆಂದು ಅಭಿಮಾನದಿಂದ ಹೇಳುತ್ತಾನೆ. ಮೂಲ ಅಫಜಲಪೂರ ತಾಲೂಕಿನ ಮಾಶ್ಯಾಳದಲ್ಲಿರುವ ಬಯಲಾಟ ಸಂಘದ ಸದಸ್ಯರಾಗಿ ಉತ್ತರ ಕರ್ನಾಟಕದ ದೊಡ್ಡಾಟ ಸಂಘ, ಗೊಬ್ಬೂರ ಹೀಗೆ ಹತ್ತು ಹಲವಾರು ಸಂಘಗಳ ಸದಸ್ಯರಾಗಿ ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ ತುಂಬ ತಮ್ಮ ಸೇವೆ ಸಲ್ಲಿಸಿದ್ದಾರೆ.

ರಾಜ್ಯ ಮಟ್ಟದ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಕನ್ನಡ ಜಾಗೃತಿ ಸಮಾವೇಶ, ಗಡಿನಾಡು ಉತ್ಸವ, ಜಾತ್ರೆಗಳು ಹೀಗೆ ಇವರು ನೀಡಿದ ಕಾರ್ಯಕ್ರಮಗಳಿಗೆ ಲೆಕ್ಕವೇ ಇಲ್ಲ.

ಮಹಾರಾಷ್ಟ್ರದ ಸೊಲ್ಲಾಪುರ, ಅಕ್ಕಲಕೋಟ, ದುಧನಿ, ಗಾಣಗಾಪೂರ, ಮಹಾಂತೇಶ ಗುಡ್ಡ, ಮಹಾಂತ ಪ್ರತಿಷ್ಠಾನದಿಂದ ಸನ್ಮಾನ ಬಿರುದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೭ರಲ್ಲಿ ಗುರು ಶಿಷ್ಯ ಪರಂಪರೆಯ ದೊಡ್ಡಾಟದ ಕಲಿಕೆಯ ಶಾಲೆ ಪ್ರಾರಂಭವಾಗಿ ಇನ್ನೂ ಕ್ರಿಯಾತ್ಮಕವಾಗಿ ನಡೆಯುತ್ತಲಿದೆ. ಆಕಾಶವಾಣಿ ದೂರದರ್ಶನ ಕಲಾವಿದರಾಗಿ ಕಲೆಯಿಂದ ತೃಪ್ತಗೊಂಡ ಸಂತೃಪ್ತಿ ಜೀವನ ಇವರದು. ದೊಡ್ಡಾಟದ ಎಲ್ಲಾ ಕ್ಷೇತ್ರಗಳಲ್ಲಿ ಪರಿಣಿತರು. ४೦ ವರ್ಷಗಳ ಇವರ ಸೇವೆ ಅನನ್ಯವಾದುದು. ದೊಡ್ಡಾಟಗಳು ಉಳಿಯಬೇಕು, ಇನ್ನೂ ಎತ್ತರ ಬೆಳೆಯಬೇಕು ಎನ್ನುವುದು ಹೆಬ್ಬಯಕೆ. ದೊಡ್ಡಾಟದ ಬಳಗವೇ ನನ್ನ ಬಳಗ, ಕಲೆಯೇ ನನ್ನ ಉಸಿರು ಎನ್ನುವ ಬಸವಣ್ಣೆಪ್ಪ ಬಯಲಾಟಕಲಾವಿದರಲ್ಲಿ ವಿಶಿಷ್ಟ ಸ್ಥಾನ ಪಡೆದವರಾಗಿದ್ದಾರೆ.

ಬಸವಣ್ಣೆಪ್ಪ ಶಿವಪ್ಪ ರೇವೂರ
ದೊಡ್ಡಾಟದ ಕಲಾವಿದರು
ಮು : ನೂಶ್ಯಾಳ, ತಾ : ಅಫಜಲಪೂರ
ಜಿ : ಗುಲಬರ್ಗಾ

# ನಾಗಪ್ಪ ಶೇರಿಕಾರ

ಹೈದರಾಬಾದ ಕರ್ನಾಟಕ ಪ್ರದೇಶವೂ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನದಂತೆ ಉತ್ತರ ಕರ್ನಾಟಕದ ಬಯಲಾಟಕ್ಕೆ ಪ್ರಸಿದ್ಧಿ ಹೊಂದಿದೆ. ಪ್ರತಿಯೊಂದು ಹಳ್ಳಿಗಳಲ್ಲಿ ಕಲಾವಿದರು ಹಾಗೂ ಕಲಾಮೇಳಗಳು ಸಿಗುತ್ತವೆ. ಇಂಥ ಸಂಸ್ಕೃತಿ ನೆಲೆಯಲ್ಲಿ ರಾಜ್ಯಾದ್ಯಂತ ಮೆರೆದ ದೊಡ್ಡಾಟದ ಕಲಾವಿದ ಗುಲಬರ್ಗಾದ ಬಸವೇಶ್ವರ ನಗರದ ನಾಗಪ್ಪ ಶೇರಿಕಾರ. ೧೯೩೦ರಲ್ಲಿ ಜನಿಸಿದ ನಾಗಪ್ಪನವರು ಬಾಲ್ಯದಲ್ಲಿಯೇ ಬಯಲಾಟದ ಗೀಳು ಹಚ್ಚಿಕೊಂಡವರು. ಮನೆಯಲ್ಲಿ ಸೋದರ ಮಾವ ಶಿವಲಿಂಗಪ್ಪ ಸಾಲಿ ದೊಡ್ಡ ತಂಡ ಕಟ್ಟಿಕೊಂಡು ಬಯಲಾಟದ ಮಾಸ್ತರರಾಗಿ ಮೆರೆದವರು. ಮಾವನೊಂದಿಗೆ ೧೦-೧೨ ವರ್ಷ ಎಲ್ಲದರಲ್ಲೂ ಪರಿಣಿತರಾಗಿ ಮುಂದೆ ಬೇರೆ ಬೇರೆ ಊರುಗಳಿಗೆ ಅತಿಥಿ ಕಲಾವಿದರಾಗಿ, ಮಾಸ್ತರರಾಗಿ ಕಲಿಸಿ ಆಡಿಸಿದ ಆಟಗಳು ನೂರಾರು.

ವೀರ ಅಭಿಮನ್ಯು, ಶಿವ ಜಲಂಧರ, ಬಸವೇಶ್ವರ, ಸತ್ಯಶೀಲ, ಹರಿಶ್ಚಂದ್ರ, ರಾಮ, ಲಕ್ಷ್ಮಣ, ಲವಕುಶ, ಐರಾವಣ, ಮೈರಾವಣ, ಸೀತಾಪಹರಣ, ರಾಮಾಯಣ, ಲಂಕಾದಹನ, ಚನ್ನಬಸವ, ಭೀಮ ವಿಲಾಸ, ಸೀತಾ ಸ್ವಯಂವರ, ಪ್ರೇಮಿಲಿ, ಬಬ್ರುವಾನ ಇವರು ಆಡಿದ ಮತ್ತು ಆಡಿಸಿದ ಆಟಗಳು.

ಖ್ಯಾತ ಬಯಲಾಟದ ಮಾಸ್ತರರಾದ ಶಾಂತಪ್ಪ ಉಡುಚಣ ಅವರು ರಚಿಸಿದ ಶರಣಬಸವೇಶ್ವರ ಬಯಲಾಟದ ತಂಡದ ಸದಸ್ಯರಾಗಿ ಅವರಿಗೆ ಬಲಗೈಯಾಗಿ ಸತತ ೪೦ ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿದವರು. ಆಟದಲ್ಲಿ ಬರುವ ಪಾತ್ರಗಳಲ್ಲಿ ತೊಡುವ, ವೇಷ ಭೂಷಣಗಳ ತಯಾರಿಕೆ ಇವರ ಕಾಯಕ. ರಾಜರ ವೇಷ ಭೂಷಣಗಳಂತೂ ಇವರ ಚಾಕಚಕ್ಯತೆಯಿಂದ ಅಂದವನ್ನು ಹೆಚ್ಚಿಸಿ

ಕೊಳ್ಳುತ್ತಿದ್ದವು. ಕಿರಿಟ ಹಿಡಿದು ಪಾದದ ಪಾದುಕೆಗಳವರೆಗೆ ತಯಾರಿಸುವ ಮತ್ತು ಅದರಲ್ಲಿ ಆನಂದವನ್ನು ಹೊಂದುವ ನಾಗಪ್ಪನವರ ಪ್ರತಿಭೆ ಎದ್ದು ಕಾಣುತ್ತಿದ್ದವು. ತಂಡದ ವಸ್ತ್ರಗಳನ್ನು ತಾಯರಿಸುವುದು, ಪಾತ್ರ ಮಾಡುವುದ ಮತ್ತು ಹಾಡುಗಾರಿಕೆ ಇವರ ಇನ್ನೊಂದು ವಿಶಿಷ್ಟ ಕಲೆ. ದುಃಖವಿರಲಿ, ವಿಷಾದವಿರಲಿ, ಹಾಸ್ಯವಿರಲಿ, ರೌದ್ರವಿರಲಿ, ವೀರವಿರಲಿ, ಎಲ್ಲ ಪ್ರಸಂಗಗಳನ್ನು ಪ್ರೇಕ್ಷಕರ ಮನ ಮುಟ್ಟುವಂತೆ ಹಾಡುವ ಹಾಡುಗಾರಿಕೆ ತಾಳ ಮದ್ದಳೆಗಳ ಗತ್ತಿಗೆ ಕುಣಿತಕ್ಕೆ ಅನುವಾಗುವಂತೆ ಹಾಡಿನ ದಾಟಿಗಳನ್ನು ಸಂಯೋಜಿಸಿ ಹಾಡುವ ನಾಗಪ್ಪನವರ ಅನುಭವ ಮತ್ತು ಪರಿಣತಿಗಳು ಹಾಗು ಸಾಹಿತ್ಯ ಸಮೃದ್ಧತೆಯು ಎಲ್ಲಕ್ಕಿಂತ ದೊಡ್ಡದು. ಅಫಜಲಪೂರ, ತಾಂಡೂರ, ಆಳಂದ, ಶಹಾಪೂರ, ಸುರಪೂರ, ಲಿಂಗಸೂಗೂರ, ಯಾದಗಿರಿ, ಸೇಡಂ ಮಹಾರಾಷ್ಟ್ರದ ಸೋಲಾಪುರ, ಅಕ್ಕಲಕೋಟ, ಚಿಂಚೋಳಿ, ಸುಲೇಪೇಟ. ಜೇವರ್ಗಿ ಎಲ್ಲ ಕಡೆಯಿಂದಲೂ ಭೇಷ್ ಎನಿಸಿಕೊಂಡ ನಾಗಪ್ಪನವರು ಶರಣ ಸಂಸ್ಥೆಯ ಪೂಜ್ಯ ದೊಡ್ಡಪ್ಪ ಅಪ್ಪ ಅವರಿಂದ ಸೈ ಎನಿಸಿಕೊಂಡರು. ಇನ್ನೂ ಆಟದ ಮಾಸ್ತರರಾಗಿ ಸೇವೆ ನೀಡುತ್ತಲಿದ್ದಾರೆ.

ನಮ್ಮ ದೊಡ್ಡಾಟ, ಬಯಲಾಟಗಳು ದೇಶದಾದ್ಯಂತ ಖ್ಯಾತಿ ಪಡೆಯಲಿ ಎಂಬುದೇ ಇವರ ಮನದಾಸೆ.

**ನಾಗಪ್ಪ ಶೇರಿಕಾರ**
**ಬಸವೇಶ್ವರ ಕಾಲನಿ**
**ಗುಲಬರ್ಗಾ**

## ಮೊಗಲಪ್ಪ ತೋಡಿ

ಮೃದಂಗ ಮದ್ದಳೆಗಾರನೆಂದೇ ಖ್ಯಾತಿ ಪಡೆದ ಶ್ರೀ ಮೊಗಲಪ್ಪ ತೋಡಿ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನವರು. ಮೃದಂಗ ಬಾರಿಸುತ್ತಾ ಎತ್ತರದ ಧ್ವನಿಯಲ್ಲಿ ಹಾಡಲು ಪ್ರಾರಂಭಿಸಿದರೆ ಊರಿಗೆ ಊರೇ ಸೇರಬೇಕು. ಅಂತಹ ಕಂಚಿನ ಕಂಠ ಇವರದು. ಇವರಿಗೆ ಮೈಕ್ ಬೇಕಾಗಿಲ್ಲ. ಶ್ರೀಯುತ ಮೊಗಲಪ್ಪ ೧೫-೫-೧೯೩೭ರಲ್ಲಿ ಜನಿಸಿ ಬಾಲ್ಯದಲ್ಲಿಯೇ ನಾದದ ಗುಂಗಿನಲ್ಲಿ ಬೆಳೆದು ೨೦ ದಶಕಗಳನ್ನು ಸಾಂಸ್ಕೃತಿಕ ಬದುಕಿನಲ್ಲಿ ಕಳೆದವರು. ತಂದೆ ಫಕೀರಪ್ಪ ಇವರ ನಾದ ಲಯದ ಅರಿವನ್ನು ಪೋಷಿಸಿ, ಇವರ ಕಲೆಯನ್ನು ಬೆಳೆಯಲು ಸಹಾಯಕರಾಗಿ ನಿಂತು ಗುರುಗಳಲ್ಲಿಗೆ ಕರೆದೊಯ್ದರು. ೩-೪ ವರ್ಷಗಳ ಕಾಲ ಹಿರಿಯರಲ್ಲಿ ಮೃದಂಗ ಅಭ್ಯಾಸ ಮಾಡಿ ಸಣ್ಣಾಟ ಸಂಘ ಸೇರಿಕೊಂಡು ಸಣ್ಣಾಟ, ದೊಡ್ಡಾಟಗಳಲ್ಲಿ ಪಾತ್ರ ಮಾಡಿ ಹಿಮ್ಮೇಳ, ಮುಮ್ಮೇಳಗಳಲ್ಲಿ ಹಾಡಿ ಕಲಾವಿದರಾಗಿ, ಗಾಯಕರಾಗಿ ಬಯಲಾಟಗಳನ್ನು ಕಲಿತರು. ನಂತರ ರಂಗಭೂಮಿಯ ಕಲೆಯ ನಿರ್ದೇಶನದ ಅಂಶಗಳನ್ನು ತಮ್ಮ ಸ್ವಂತ ಪ್ರತಿಭೆಯಿಂದ ಕರಗತ ಮಾಡಿಕೊಂಡು ತಾವೇ ಬಯಲಾಟ ಕಲಿಸ ಹತ್ತಿದರು. ಚಿಂಚೋಳಿ ಜಾತ್ರೆಯಲ್ಲಿ ಪ್ರಾರಂಭವಾದ ಇವರ ಬಯಲಾಟಗಳು ಬೇಸಿಗೆ ಮುಗಿಯುವವರೆಗೆ ಪ್ರತಿ ಹಳ್ಳಿಗಳಲ್ಲಿ ಪ್ರತಿ ದಿನವೂ ಇರುತ್ತಿದ್ದವು. ಒಮ್ಮೊಮ್ಮೆ ಸತತವಾಗಿ ಐದಾರು ಆಟಗಳನ್ನು ಆಡಿಸುವ ಹೊಣೆ ಬಿದ್ದರೂ ಮೊಗಲಪ್ಪನ ಕಂಠ ಕುಂದುತ್ತಿರಲಿಲ್ಲ. ಪಾಂಡು ವಿಜಯ, ಕುರುಕ್ಷೇತ್ರ, ಚಿತ್ರಕೇತು ಮಹಾರಾಜ, ಮಲಕಾಸುರ, ಜಲಂಧರ, ಕಬೀರದಾಸ, ಸತ್ಯವಾನ-ಸಾವಿತ್ರಿ, ರಾಮಾಂಜನೇಯ ಯುದ್ಧ, ದಲಿತ ಈ ಕಲಾವಿದರು ಹಿಂದುಳಿದ ವರ್ಗಗಳ ಕೇರಿಯಲ್ಲಿದ್ದು ಅಲ್ಲಿಯ ಯುವಕರನ್ನು ಕಲಾವಿದರನ್ನಾಗಿ ಮಾಡಿದ್ದಾರೆ.

ಪಾತ್ರ ಮಾಡುವುದು, ಹಾಡುವುದಲ್ಲದೆ, ಮೃದಂಗ ಬಾರಿಸುವುದು, ಡೋಲು ಬಾರಿಸುವುದು ಇವರ ಇನ್ನೊಂದು ಪ್ರತಿಭೆ. ಬಯಲಾಟಗಳನ್ನು ಕಲಿಸುವುದಲ್ಲದೆ ಹಳ್ಳಿಗಳಲ್ಲಿ ಹಬ್ಬ ಹರಿದಿನಗಳಲ್ಲಿ ಕೋಲಾಟ, ಲೇಜಿಮ್‌ಗಳನ್ನು ಕಲಿಸಿ ಆಡಿಸುತ್ತಿದ್ದರು. ತನು–ಮನ–ಧನ ಸಹಾಯದಿಂದ ನಿರಂತರವಾಗಿ ೫೦ ವರ್ಷಗಳ ಕಲಾಸೇವೆ ಇವರ ಸಾರ್ಥಕ ಬದುಕಿನ ಪ್ರತೀಕ.

ಕಾರ ಹುಣ್ಣಿವೆ, ಬಸವ ಜಯಂತಿ, ಉತ್ಸವಗಳ ಸ್ಪರ್ಧೆಗಳಲ್ಲಿ ತಮ್ಮ ಶಿಷ್ಯಂದಿರ ಬಹುಮಾನಗಳೇ ಇವರಿಗೆ ಸಂದಿರುವ ಬಹುಮಾನಗಳು. ಅಂಬೇಡ್ಕರ್ ಉತ್ಸವ, ಬಸವ ಉತ್ಸವ, ರಾಜ್ಯೋತ್ಸವ ಗಾಂಧಿ ಜಯಂತಿ ಉತ್ಸವಗಳಲ್ಲಿ ಇವರ ಕೋಲಾಟ. ಲೇಜಿಮ್ ತಂಡಗಳು ಊರೂರಿಗೊಂದು.

ತಮಗೆ ಬಂದ ಎಲ್ಲ ವಿದ್ಯೆಗಳನ್ನು ಧಾರೆಯೆರೆದು ಜಾನಪದ ಕಲೆ, ಸಾಹಿತ್ಯದ ಹೊಳಹುಗಳನ್ನು ಮುಂದೆ ಹರಿದು ಬಿಟ್ಟಿದ್ದಾರೆ. ಸರಕಾರದ ಯಾವುದೇ ಪ್ರಶಸ್ತಿಗಳು ದೊರೆಯದೆ ಮಠಾಧೀಶ, ಸಂಘ–ಸಂಸ್ಥೆಗಳಿಂದ ಬಿರುದು ಸನ್ಮಾನ ಲಭಿಸಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕನ್ನಡ ಸಾಹಿತ್ಯ ಪರಿಷತ್‌ಗಳಲ್ಲಿ ಗುರುತಿಸಿಕೊಂಡಿದ್ದಾರೆ.

**ಮೊಗಲಪ್ಪ ತೋಡಿ**
**ಮು : ತಾ : ಚಿಂಚೋಳಿ**
**ಜಿ : ಗುಲಬರ್ಗಾ**

## ವೇದಮೂರ್ತಿ ಗುರುಲಿಂಗಯ್ಯ

ರೈತನ ಮಗನಾಗಿ, ಅನ್ನದಾತನಾಗಿ, ಒಕ್ಕಲುತನ ಮಾಡಿದ ತೃಪ್ತಿ, ಎಪ್ಪತ್ತು ವರ್ಷದ ಶ್ರೀ ಗುರುಲಿಂಗಯ್ಯನವರದು. ಬಯಲಾಟದ ಮಾಸ್ತರರಾಗಿ ೭೦ರ ವಯಸ್ಸಿನಲ್ಲೂ ಹತ್ತು ಹಳ್ಳಿ ತಿರುಗಿರುವ ಇವರು ಚೈತನ್ಯ, ಹುರುಪು, ಹುಮ್ಮಸ್ಸು, ಇವರ ಕೃಷಿತನದ ಫಲ. ಸ್ವಚ್ಛ ಗಾಳಿ, ನೀರು, ಆಹಾರ, ಮೈಮುರಿದು ದುಡಿಯುವ ಕಾಯಕಗಳು ಇವರನ್ನು ಸದೃಢರನ್ನಾಗಿ ಮಾಡಿವೆ. ಇವರ ಕಲೆ ಇವರನ್ನು ಯಶಸ್ಸಿನ ಉತ್ತುಂಗಕ್ಕೆ ಕರೆದೊಯ್ದಿದೆ. ಕಲೆ ನನ್ನುಸಿರು ಅದು ಯಾವಾಗಲೂ ನನ್ನಲ್ಲಿ ಮಿಡಿಯುತ್ತಿರುತ್ತದೆ. ನನ್ನ ಶಿಷ್ಯಂದಿರ ಪ್ರತಿಭೆ ನೋಡಿ ನನ್ನ ವಿದ್ಯೆ ಧಾರೆಯೆರೆದು ಸಾರ್ಥಕವಾಯಿತು ಎಂದು ತೃಪ್ತಿ ಜೀವನದ ನಿಟ್ಟುಸಿರು ಬಿಡುತ್ತಾರೆ.

ಸೇಡಂ ತಾಲೂಕಿನ ತೆಲಕೂರ ಗ್ರಾಮದ ಶ್ರೀ ವೇ. ಗುರುಲಿಂಗಯ್ಯ ವೀರಭದ್ರಯ್ಯ ಮಠಪತಿ ಅವರು ಗುಣ ಸಂಪನ್ನ ದಂಪತಿಗಳು ಶರಣೆ ಪಾರ್ವತಮ್ಮ ಮತ್ತು ವೀರಭದ್ರಯ್ಯ ದಂಪತಿಗಳ ಉದರದಲ್ಲಿ ಜನಿಸಿದರು. ಒಬ್ಬನೇ ಮಗ ತಂದೆಗೆ. ಮಗನ ಎಲ್ಲ ಇಷ್ಟಾರ್ಥಗಳನ್ನು ಪೂರೈಸುವ ಹಂಬಲ. ಸುತ್ತ ಮುತ್ತ ಹಳ್ಳಿಗಳಲ್ಲಿ ಕೀರ್ತನೆ, ಪುರಾಣ, ಪ್ರವಚನಗಳಿಗೆ ಮಗನನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಇವರಲ್ಲಿದ್ದ ಹಾಡುಗಾರಿಕೆ ಇವರನ್ನು ಯಾವಾಗಲೂ ಗುನುಗುನಿಸುತ್ತಲೇ ಇರುವಂತೆ ಮಾಡಿತ್ತು. ಚಿಂಚೋಳಿ ತಾಲೂಕಿನ ಸುಲೇಪೇಟ್‌ದ ಶ್ರೀಗಳ ಮಠದಲ್ಲಿ ಇವರ ಹಾಡು ಕೇಳಿದ ಗುರುಗಳು ಇವರನ್ನು ಹಾಡಿಸಿಯೇ ಬಿಟ್ಟರು. ಅಂದಿನಿಂದ ಪ್ರವಚನ, ಕೀರ್ತನೆ, ಭಜನೆಗಳ ಮುಂಚೆ ಇವರಿಂದಲೇ ಶುರುವಾಗ ತೊಡಗಿದವು.

ಜಾನಪದ ಕಲೆ ಹಿರಿಯರಿಂದ ವಂಶ ಪಾರಂಪರೆಯಿಂದ ಬಂದದ್ದಲ್ಲದೆ ಹಾರ್ಮೋನಿಯಂ ಬಾರಿಸುವುದನ್ನು ಕಲಿತು ಹಾರ್ಮೋನಿಯಂ ಜೊತೆಗೆ

ಹಾಡತೊಡಗಿದರು. ಅರಿವೇ ಗುರು ಎಂಬಂತೆ ಅರಿವನ್ನು ಗುರುವಾಗಿಸಿಕೊಂಡು ಸ್ವ ಪ್ರಯತ್ನದಿಂದ ಏಕಲವ್ಯನಂತೆ ತಮ್ಮ ಸತತ ಪರಿಶ್ರಮದಿಂದ ದೈವದತ್ತವಾಗಿ ಹಾಗೂ ಗಣ್ಯರಿಂದ ಪಡೆದುಕೊಂಡು ದೊಡ್ಡಾಟ, ಸಣ್ಣಾಟ, ಬಯಲಾಟಗಳಲ್ಲಿ ಹಾರ್ಮೋನಿಯಂ ಮಾಸ್ತರರಾಗಿ ಪ್ರಸಿದ್ಧಿ ಪಡೆದರು. ನಂತರ ಆಟಗಳ ಎಲ್ಲ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿ ಪರಿಣಿತರಾಗಿ ೧೯೬೦ರಲ್ಲಿ ಬಯಲಾಟದ ಸಂಘ ನಿರ್ದೇಶಕರಾಗಿ ಸತತ ೪೫ ವರ್ಷಗಳ ಕಾಲದಿಂದ ಸೇವೆ ಸಲ್ಲಿಸುತ್ತಿದ್ದಾರೆ. ನಿಜಾಮರ ಆಳಿಕೆಯಿಂದ ಕನ್ನಡ ಅಷ್ಟೊಂದು ಬಳಕೆಯಲ್ಲಿರಲಿಲ್ಲ. ಪ್ರಾಥಮಿಕ ಶಿಕ್ಷಣ ಮುಗಿಸಿದ ಇವರು ಮೋಡಿ ಲಿಪಿಯಲ್ಲಿದ್ದ ಬಯಲಾಟದ ಆಟಗಳನ್ನು ಕನ್ನಡಕ್ಕೆ ಅನುವಾದಿಸಿ ನೂರಾರು ಆಟಗಳನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಿದ್ದಾರೆ. ಸೇಡಂ ತಾಲೂಕಿನ ಪ್ರತಿಯೊಂದು ಹಳ್ಳಿಗಳಿಗೆ ಹೋಗಿ ಸಂಘ ಕಟ್ಟಿ ಕಲಿಸಿದ್ದಾರೆ. ಸೇಡಂ ತಾಲೂಕಿನ ಸರಕಾರಿ ಕಾಲೇಜಿನ ಪ್ರಾಧ್ಯಾಪಕರಾದ ಈಶ್ವರಯ್ಯ ಕೋಡಂಬಲ್ ಅವರು ಇವರ ಬಯಲಾಟ ಕಥೆಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಟ್ಟಿದ್ದಾರೆ.

ಸೇಡಂ, ಚಿಂಚೋಳಿ, ಗುಲಬರ್ಗಾ, ಬೀದರ, ನಿಡಗುಂದಾ, ಐನೂರಿ, ಸುಲೇಪೇಟ್, ಚಂದಾಪೂರ, ಕೊಂಚಾವರಂ, ಆಂಧ್ರದ ತಾಂಡೂರ, ಕರ್ಣಕೋಟಿ ಇವರು ಸೇವೆ ಸಲ್ಲಿಸಿದ ಕ್ಷೇತ್ರಗಳು.

ದೇವಿ ಮಹಾತ್ಮೆ, ದಕ್ಷಬ್ರಹ್ಮ, ಯುದ್ಧಕಾಂಡ, ಭೀಮ ವಿಲಾಸ, ದ್ರೌಪದಿ ವಸ್ತ್ರಾಪರಹಣ, ಮಹಿಷಾಸುರ ಮರ್ದಿನಿ; ದಾನಶೂರ ಕರ್ಣ, ಕನಕಾಂತಿ, ಬಾಣಾಸುರ ಇವು ಇವರು ಆಡಿಸಿದ ದೊಡ್ಡಾಟಗಳು. ಶಿಷ್ಯಂದಿರ ಕಲಿಕೆ, ಪ್ರತಿಭೆಗಳನ್ನು ಕಂಡು ಆನಂದಿಸುವ ಇವರು ಸರ್ಕಾರದ ಸೌಲಭ್ಯಗಳ ಅವರಿಗೆ ದೊರೆತು ಕಲೆಗಳು ಮುಂದುವರಿಯಲಿ ಎನ್ನುವುದೇ ಇವರ ಮಹದಾಸೆ ಈಗಲೂ ಯಾವುದೇ ಗ್ರಾಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿ ಇವರು ತಮ್ಮ ತನು-ಮನ-ಧನಗಳಿಂದ ಸೇವೆ ಸಲ್ಲಿಸುತ್ತಾರೆ. ತೃಪ್ತ ಮನದಿಂದ ಯುವಕ ತಂಡವನ್ನು ಹರಸಿ ಮಾರ್ಗದರ್ಶನ ನೀಡುತ್ತಾರೆ.

**ವೇದಮೂರ್ತಿ. ಶ್ರೀ ಗುರುಲಿಂಗಯ್ಯ ಮಠಪತಿ ತೆಲಕೂರ**
**ಅಂಚೆ : ತೆಲಕೂರು**
**ತಾ : ಸೇಡಂ ಜಿ : ಗುಲಬರ್ಗಾ**

# ನಾಗಮ್ಮ ಸಾಲಿಮಠ

೧೯೪೭ರಲ್ಲಿ ಗಂಗಾಧರ ನೀಲಮ್ಮ ದಂಪತಿಗಳ ಉದರದಲ್ಲಿ ಜನಿಸಿದ ನಾಗಮ್ಮ ಸಾಲಿಮಠ ಬಸಯ್ಯ ಸ್ವಾಮಿ ಕೈ ಹಿಡಿದು ಬಂದದ್ದು ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಮರಪಳ್ಳಿಗೆ. ನಾಗಮ್ಮ ಚಿಕ್ಕಂದಿನಿಂದಲೇ ಹಬ್ಬ-ಹರಿದಿನ, ಶ್ರಾವಣ ತಿಂಗಳಿನಲ್ಲಿ ನಡೆಯುವ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಕೀರ್ತನೆ, ಪ್ರವಚನ, ಜಾನಪದ ಹಾಡುಗಳು, ವಚನ ಗಾಯನಗಳು ನಡೆಯುವ ಸ್ಥಳಗಳಿಗೆ ಮುಂಚಿತವಾಗಿಯೇ ಹೋಗಿ ತಪ್ಪದೆ ಅವುಗಳನ್ನು ಕೇಳಿಕೊಂಡು ಅವುಗಳಂತೆ ನಡೆಯಲು ಪ್ರಯತ್ನಿಸಿದ ಶಿವಶರಣೆ. ಇವರ ನೆನಪಿನ ಶಕ್ತಿ ಅಗಾಧವಾದುದು. ಶಾಲೆಯ ಗುರುತೇ ಇಲ್ಲದ ಇವರು ಸಾವಿರಾರು ಹಾಡುಗಳನ್ನು ಹೇಳಿ ಅವುಗಳ ಅರ್ಥಗಳನ್ನು ಬಿಡಿಸಿಹೇಳುತ್ತ ಯುವ ಜನಾಂಗಕ್ಕೆ ಸಾರ್ಥಕ ಗೌರವಾನ್ವಿತ ಬದುಕನ್ನು ಬಾಳುವಲ್ಲಿ ಮಾರ್ಗದರ್ಶಕಳಾಗಿ ನಿಂತು, ಜನಪದ ಸಾಹಿತ್ಯ, ಸಂಗೀತ ಉಳಿಸುವಲ್ಲಿ ಮಹತ್ತರ ಸಾಧನೆ ಗೈದ ಶರಣೆ.

೪೭ರಲ್ಲಿ ಜನಿಸಿದ ನಾಗಮ್ಮನವರಿಗೀಗ ಅರವತ್ತು ವರ್ಷ. ಸೋಬಾನ ಪದಗಳ ಕಲಾವಿದೆ. ಸುತ್ತ ಹಳ್ಳಿಗಳಲ್ಲಿ ಮದುವೆಗಳಿದ್ದರೆ ಮೊದಲು ನೆನಪಾಗುವುದು ನಾಗಮ್ಮ. ತಿಂಗಳು ಗಟ್ಟಲೇ ಮೊದಲೇ ಹೋಗಿ, ಈ ಕಲಾವಿದೆಗೆ ಕೊಬ್ಬರಿ, ಕುಪ್ಪಸ, ಕುಂಕುಮ ಕೊಟ್ಟು ಹೇಳಿ ಬರುವುದು ವಾಡಿಕೆ. ಮದುವೆಯಲ್ಲಿ ಬರುವ ಒಳಕಲ್ಲು ಬೀಸುಕಲ್ಲು ಪೂಜೆ, ನಿಶ್ಚಯ ಹಾಡು, ಐರಾಣಿ ಕೊಡ ತರುವ ಹಾಡು, ಬೀಗರ ಹಾಡುಗಳು, ಅರಿಶಿಣ ಹಚ್ಚುವ ಹಾಡು, ನೀರೆರೆಯುವ ಹಾಡು, ಭೂಮದ ಹಾಡು, ಬಾಸಿಂಗ ಹಾಡು, ತಾಳಿಕಟ್ಟುವ ಹಾಡು, ಪಾದ ತೊಳೆಯುವ ಹಾಡು, ಧಾರೆ ಎರೆಯುವ ಹಾಡು, ಮಗಳನ್ನು ಬೀಳ್ಕೊಡುವ ಹಾಡು ಹೀಗೆ ಮದುವೆಯ ಹಾಡುಗಳಿಗೆ ಲೆಕ್ಕವೇ ಇಲ್ಲ. ಇವಲ್ಲದೆ ಜೋಗುಳ ಹಾಡು, ಊರ ಮನೆಯ ಕಾರ್ಯಕ್ರಮಗಳಲ್ಲಿ ಹಬ್ಬದ, ದೇವಿಯ ಪೂಜೆಯ ಹಾಗೂ ಜನಪದ ಗೀತೆಗಳನ್ನು ಹಾಡಿ ಜನರನ್ನು ರಂಜಿಸುವ ಕಾಯಕದ

ಜೊತೆಗೆ ಜನಪದ ತಂಡ ರಚಿಸಿ ಅಲ್ಲದೆ ಊರಿಗೊಂದು ಅಕ್ಕನ ಬಳಗ, ಸ್ಥಾಪಿಸಿ ಅಕ್ಕನ ಹಾಡುಗಳನ್ನು, ಬಸವಣ್ಣನವರ ಹಾಡುಗಳನ್ನು ಕಲಿಸಿ, ಹಾಡಿಸಿ. ಜನಪದ ಹಾಗೂ ಶರಣ ಸಾಹಿತ್ಯ ಬೆಳೆಸುವಲ್ಲಿ ಶ್ರಮಿಸಿದ ಅಪರೂಪದ ಕಲಾವಿದೆ.

ಇವರ ಹಾಡು ಸಂಗ್ರಹಗಳಲ್ಲಿ ನೀತಿಪದಗಳು, ತತ್ವಪದಗಳು, ಅದರಲ್ಲೂ ಪ್ರಮುಖವಾಗಿ ಕಡಕೋಳ ಮಡಿವಾಳಪ್ಪ ಮತ್ತು ಶಿಶುನಾಳ ಶರೀಫರ ಹಾಡು, ಕಥೆ ಕವನಗಳಾದ ಕೊರವಂಜಿ, ಗೋವಿನ ಹಾಡು ಗರತಿಯರ ಹಾಡುಗಳು ಪ್ರಮುಖವಾದವುಗಳು.

ಇವರ ಭಜನೆ ತಂಡವು ಪ್ರತಿ ಹಳ್ಳಿಗಳಲ್ಲಿ ಜಾತ್ರೆಯ ವೇಳೆಯಲ್ಲಿ ಹೋಗಿ ಸೇವೆ ಸಲ್ಲಿಸುತ್ತಿದೆ. ಗುಲಬರ್ಗಾ ಶ್ರೀ ಶರಣಬಸವೇಶ್ವರ ಜಾತ್ರೆಯ ವೇಳೆಯಲ್ಲಿ ಸಂಸ್ಥಾನದಿಂದ ಸೈ ಎನಿಸಿಕೊಂಡು ಬಿರುದು, ಸನ್ಮಾನ ಪಡೆದಿರುತ್ತಾರೆ. ರಟಕಲ್ ಸಿದ್ದೇಶ್ವರ ಸಂಸ್ಥಾನ ಸುಲೇಪೇಟ್, ಸೇಡಂ ತಾಲೂಕಿನ ನಿಡಗುಂದಾ ಮಠಾಧೀಶ್ವರರಿಂದ, ಸೇಡಂ ಕೊತ್ತಲ ಬಸವೇಶ್ವರ ಸಂಸ್ಥಾನದಿಂದ ಬಿರುದು ಸನ್ಮಾನ.

ಆಳಂದ, ಬೀದರ, ಚಿತ್ತಾಪುರ, ಮಳಖೇಡ, ಚಿಂಚೋಳಿ, ಕೊಂಚಾವರಂ, ಐನೂಲಿ, ಇದಲಾಯಿ, ಇವು ಇವರು ಸುತ್ತಾಡಿ ತಮ್ಮ ಕಲೆಯನ್ನು ಕಲಿಸಿ ಅಪಾರ ಶಿಷ್ಯಂದಿರನ್ನು ಹೊಂದಿರುವ ಕ್ಷೇತ್ರಗಳು.

ಇವರ ಹಾಡುಗಳನ್ನು ಶ್ರೀ ಈಶ್ವರಯ್ಯ ಕೋಡಂಬಲ್ ಅವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ತಾಲೂಕಾ ಕ. ಸಾ. ಪ. ಮತ್ತು ಕಲ್ಬುರ್ಗಿ ಬಸವ ಸಮಿತಿಯ ಅಧ್ಯಕ್ಷರಾದ ಮತ್ತು ಮಾಜಿ ಉಪರಾಷ್ಟ್ರಪತಿ ಶ್ರೀ ಬಿ. ಡಿ. ಜತ್ತಿ ಅವರು ಮಗಳಾದ ಶ್ರೀ ವಿಲಾಸವತಿ ಎಸ್. ಖೂಬಾ ಅವರ ಮೆಚ್ಚುಗೆಯನ್ನು ಗಳಿಸಿ ಪ್ರತಿ ವರ್ಷ ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ, ದತ್ತಿ ಉಪನ್ಯಾಸಗಳ ಕಾರ್ಯಕ್ರಮದಲ್ಲಿ ಇವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ನಾಗಮ್ಮ ಸಾಲಿಮಠ
ಅಂಚೆ : ಮರಪಳ್ಳಿ
ತಾ : ಚಿಂಚೋಳಿ, ಜಿ : ಗುಲಬರ್ಗಾ

## ಮೋನಪ್ಪ ವಿಠ್ಠಪ್ಪ ಸುತಾರ (ಬಡಿಗೇರ)

ತಂದೆ ವಿಠ್ಠಪ್ಪ ದೊಡ್ಡಾಟದ ಹಿಮ್ಮೇಳದ ಕಲಾವಿದ. ತಾಯಿ ರತ್ನಾಬಾಯಿ ಸೋಬಾನ ಪದ, ಜೋಗುಳ ಪದ, ಕುಟ್ಟುವ, ಬೀಸುವ ಪದಗಳ ಹಾಡುಗಾರ್ತಿ. ಇವರಿಂದ ವಂಶಪಾರಂಪರವಾಗಿ ಕರಗತವಾಗಿ ಪುರವಂತಿಕೆಯಲ್ಲಿ ಖ್ಯಾತಿ ಪಡೆದ ಮೋನಪ್ಪಾ ವಿಠ್ಠಪ್ಪ ಸುತಾರ ಜನಿಸಿದ್ದು ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ಚಿಂಚೋಳಿಯಲ್ಲಿ ೫-೩-೧೯೨೪ರಂದು. ೮೦ ವರ್ಷದ ಮೋನಪ್ಪನವರು ತೇಜಸ್ಸು ಹೊಂದಿದ್ದಾರೆ. ಕಂಚಿನ ಕಂಠ ಅವರದು. ಮೈಕ್ ಇಲ್ಲದೆ ಇಡೀ ಓಣಿಗೆ ಕೇಳುವಂತೆ ಹಾಡುತ್ತಾರೆ.

೧೩-೧೪ನೇ ವಯಸ್ಸಿನಲ್ಲೇ ಕನಕಾಂಗಿ ದೊಡ್ಡಾಟದಲ್ಲಿ ಕನಕಾಂಬರಿ ಪಾತ್ರ ವಹಿಸಿ ಅಭಿನಯ ಪ್ರಾರಂಭಿಸಿದರು. ಬಾಣಾಸುರ, ಹರಿಶ್ಚಂದ್ರ, ವೀರ ಅಭಿಮನ್ಯು, ಚಿತ್ರಾಂಗದ ಅಕ್ಷಯಾಂಬರದಲ್ಲಿ ದ್ರೌಪದಿ ಪಾತ್ರಗಳನ್ನು ನಿರ್ವಹಿಸಿ ಆಟಗಳನ್ನು ಯಶಸ್ವಿಗೊಳಿಸಿ ಸಾವಿರಾರು ಜನರ ಮನಸ್ಸನ್ನು ಸೂರೆಗೊಂಡ ಕೀರ್ತಿ ಇವರದು.

ಗುಲಬರ್ಗಾ ಜಿಲ್ಲೆಯ ಹಳ್ಳಿ ಹಳ್ಳಿಗಳಿಗೆ ಹೋಗಿ ಕಲಿಸಿದ ಆಟಗಳು ಹಲವಾರು ಅವುಗಳಲ್ಲಿ ಕನಕಾಂಗಿ, ಲವಕುಶ, ರಂಭಾ ವಿಲಾಸ, ಬಬ್ರುವಾಹನ, ಶಾಂಭವಿ, ವೀರ ಅಭಿಮನ್ಯು, ಇಂದ್ರಜಿತ, ಹರಿಶ್ಚಂದ್ರ, ಕೌಂಡಲೀಕ ರಾಜಾ, ವಿಶ್ವಕರ್ಮದ ಐದು ವಿದ್ಯೆಗಳಾದ ಅಕ್ಕಸಾಲಿಗ, ಬಡಿಗತನ, ಕಂಬಾರಿಕೆ, ಶಿಲ್ಪಕಲೆ, ಕಂಚಗಾರ ಎಲ್ಲ ವಿದ್ಯೆಗಳಲ್ಲೂ ಪರಿಣಿತರು ಜೊತೆಗೆ ಒಕ್ಕಲುತನ ಮಾಡಿ ಅನ್ನದಾತನೆನಿಸಿಕೊಂಡವರು.

ದೊಡ್ಡಾಟದ ಸಂಗೀತ, ಪಾತ್ರಗಳ ನಿರ್ದೇಶನ, ವಸ್ತ್ರಾಲಂಕಾರ, ಎಲ್ಲದರಲ್ಲೂ ಪರಿಣಿತರು. ವಸ್ತ್ರಾಲಂಕಾರದ ಕಿರಿಟ, ನಡಪಟ್ಟಿ, ತ್ರಿಶೂಲ, ಸಿಂಹ, ಬಾಣ, ತಲವಾರ, ಗಧಾ ಆಗಿನ ಕಾಲದ ಪ್ರಸಿದ್ಧ ತಯಾರಕರಾದ ಆಲ್‌ಮೇಲ್ ಗಂಗಾಧರ ಸ್ವಾಮಿಗಳಲ್ಲಿ

ಹೋಗಿ ಕಲಿತು ಬಂದ ಕೀರ್ತಿ ಅವರದು. ದೊಡ್ಡಾಟದಲ್ಲಿ ಯಾವುದಾದರೂ ಪಾತ್ರದ ಕೊರತೆಯಾದರೆ ಅದನ್ನು ತೂಗಿಸಿಕೊಂಡು ಹೋಗುವ ಶಕ್ತಿ ಇವರಲ್ಲಿ ಇದ್ದಿತು. ಇವರ ದುಃಖದ ವೀರಾವೇಶದ ಸನ್ನಿವೇಶಗಳು ಅಚ್ಚರಿ ಮೂಡಿಸುತ್ತಿದ್ದವು.

ದೊಡ್ಡಾಟದ ಕಲೆಯಲ್ಲದೆ ಅನೇಕ ಜಾನಪದ ಕಲೆಗಳಾದ ಪುರವಂತಿಕೆಯಲ್ಲೂ ಅಷ್ಟೇ ನಿಪುಣರು. ಸಣ್ಣಾಟ, ದೊಡ್ಡಾಟ, ಡಪ್ಪಿನಾಟ, ಕೀರ್ತನೆ, ಭಜನೆ, ಪ್ರವಚನ, ಪುರಾಣ ಒಂದೇ ಎರಡೇ. ಮುಂದೆ ಇಂತಹ ಅಪರೂಪದ ಕಲಾವಿದರು ಸಿಗುವುದು ದುಸ್ತರ. ಗುಲಬರ್ಗಾ, ಚಿಂಚೋಳಿ, ಬಳೂರಗಿ, ಅತನೂರ, ರೇವೂರ, ಮಳಖೇಡ, ಸೇಡಂ, ಮರತೂರ, ತೊನಸನಳ್ಳಿ ಬಂದರವಾಡ, ಚಿಣಮಗೇರಾ, ಸಿಂಧನೂರ, ಆಲಮೇಲ್, ಮೈಸೂರ, ಬೆಂಗಳೂರು, ಧಾರವಾಡ, ಹಂಪಿ, ಉಡುಪಿ, ಬಡದಾಳ, ಕೋಟನೂರ, ದುಧನಿ, ಮಹಾರಾಷ್ಟ್ರದ ಸೊಲ್ಲಾಪುರ, ಕಂಡಾಳು ಟೆಂಗಳಿ, ಮಾಶ್ಯಾಳ, ಗಾಣಗಾಪುರ, ಭೋಗನಳ್ಳಿ, ಮಣ್ಣೂರ, ಬೀದರ, ತಿಂಥಣಿ ಇವರು ಕಾರ್ಯಕ್ರಮ ನೀಡಿದ ಕ್ಷೇತ್ರಗಳು. ಜಿಲ್ಲಾ, ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ನೀಡಿದ ಕೀರ್ತಿ ಇವರದು. ೨೦೦೫ರಲ್ಲಿ ರಾಷ್ಟ್ರಮಟ್ಟದ ಕಾನ್ಫರೆನ್ಸ್-ಬೀದರ ೨೦೦೦ ರಲ್ಲಿ ರಾಜ್ಯ ಮಟ್ಟದ ಸಂಸ್ಕೃತಿ ಸಂಭ್ರಮ, ೧೯೮೮ರಲ್ಲಿ ರಾಷ್ಟ್ರಮಟ್ಟದ ಅಖಿಲ ಭಾರತ ಜಾನಪದ ಪುರವಂತಿಕೆ ಸಮಾವೇಶ, ೧೯೮೫ರಲ್ಲಿ ಪ್ರಥಮ ವಿಶ್ವಕನ್ನಡ ಸಮ್ಮೇಳನ, ೧೯೭೬ರಲ್ಲಿ ಜನಪದ ಗೀತ ಗಾಯನ ಶಿಬಿರ, ಪುರವಂತಿಕೆ ಕಲಿಕಾ ಕೇಂದ್ರ. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನಾಲ್ಕು ವರ್ಷಗಳ ಕಾಲ ಎಂ. ಎ. ತರಗತಿಗೆ ಹಾಡು ಕುಣಿತಗಳನ್ನು ಪ್ರಾಯೋಗಿಕವಾಗಿ ಹೇಳಿಕೊಟ್ಟ ಖ್ಯಾತಿ ಇವರದು.

೨೦೦೫ರಲ್ಲಿ ಶ್ರೀ ಭೀಮ ಅವರ, ಇವರ ಜೀವನದ ಬಗ್ಗೆ ಪಿ.ಎಚ್‌ಡಿ. ಮಾಡಿದ್ದಾರೆ. ಇವರ ಜೀವನ ಚರಿತ್ರೆ ಪ್ರಬಂಧಗ್ರಂಥ ಲೈಬ್ರರಿಯಲ್ಲಿದೆ. ೫ನೇ ತರಗತಿಯವರೆಗೆ ಕನ್ನಡ, ಮರಾಠಿ, ಮೋಡಿ ಓದಿದ ಮೋನಪ್ಪ ಎಂ. ಎ. ತರಗತಿಗೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಸರಿಸಮಾನವಾಗಿ ಪಾಠ ಹೇಳಿದ ಹೆಗ್ಗಳಿಕೆ. ಆಕಾಶವಾಣಿಯ ಕಲಾವಿದರಾಗಿ ૩೦ ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರು, ಗುಲಬರ್ಗಾ ದೂರದರ್ಶನದಲ್ಲಿ ಏಕತಾರಿ ಪದಗಳು, ಪುರವಂತಿಕೆಯ ಕಲೆಯ ಪ್ರದರ್ಶನಗಳು ಕಂಡಿವೆ. ೧೯೮೫ರಲ್ಲಿ ಜಿ. ಪರಮೇಶ್ವರ ರಿಂದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು.

ಮೋನಪ್ಪ ವಿಠ್ಠಪ್ಪ ಸುತಾರ
ಅಂಚೆ : ಚಿಂಚೋಳಿ
ತಾ : ಅಫಜಲಪೂರ, ಗುಲಬರ್ಗಾ

# ಗಣಪತಿ ಹಡಪದ

ಇವರು ರಾಜ್ಯಮಟ್ಟದ ಕಲಾವಿದರಿಗಿಂತ ಕಡಿಮೆ ಏನೂ ಇಲ್ಲ. ಸರಕಾರದ ಯಾವ ಪ್ರಶಸ್ತಿಗಳೂ ಸಿಕ್ಕಿಲ್ಲವಾದರೂ ಇವರು ರಾಜ್ಯದ ತುಂಬೆಲ್ಲ ಕಾರ್ಯಕ್ರಮ ನೀಡಿ ರಾಜ್ಯಮಟ್ಟದ ಕಲಾವಿದರೆಂದು ಗುರುತಿಸಿಕೊಂಡಿದ್ದಾರೆ. ಬಾಲ್ಯದಿಂದಲೇ ಜನಪದ ಕಲೆಯುತ್ತ ಹೆಚ್ಚಿನ ಆಸಕ್ತಿ ಹೊಂದಿದ್ದರಿಂದ ತಮ್ಮ ಸುಂದರವಾದ ಕಂಠದಿಂದ ಡಪ್ಪಿನಾಟ, ಭಜನೆ, ಗೀಗೀ ಪದ, ಜಾನಪದ ಗೀತೆ, ಸುಗ್ಗಿ ಕುಣಿತದ ಹಾಡು ಹಾಡಿ ಎಲ್ಲರ ಮನ ಸೂರೆಗೊಂಡಿದ್ದಾರೆ. ನಶಿಸುತ್ತಿರುವ ಜನಪದ ಕಲೆಯನ್ನು ಉಳಿಸುವಲ್ಲಿ, ಬೆಳೆಸುವಲ್ಲಿ ಸಾಕಷ್ಟು ಶ್ರಮಿಸುತ್ತಿರುವ ಇವರಲ್ಲಿ ಹಾಡಿನ ಕಣಜ ತುಂಬಿದೆ. ಅಜ್ಜಿ ಅಜ್ಜ ಖ್ಯಾತ ಗುರುಗಳಾದ ವೀರಣ್ಣ ಆರಳಿ ಸುಲೇಪೇಟ್ ಅವರಿಂದ ಸಂಗ್ರಹಿಸಿ ಎಲ್ಲ ಹಾಡುಗಳನ್ನು ಮೂಲ ಧಾಟಿಯಲ್ಲೇ ಹಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ.

ಶ್ರೀ ಗಣಪತಿ ಹಡಪದ ಅವರು ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಮರಪಳ್ಳಿ ಗ್ರಾಮದ ನರಸಪ್ಪ ಹುಲಿಗೆಮ್ಮನವರ ಉದರದಲ್ಲಿ ೧೮-೮-೧೯೩೭ರಲ್ಲಿ ಜನಿಸಿದರು. ತಂದೆ ತಮ್ಮ ಕಸುಬಾದ ಕ್ಷೌರಿಕ ವೃತ್ತಿಯನ್ನು ಸಾಗಿಸಿಕೊಂಡು ಬಂದವರು. ತಂದೆಯ ನಿಷ್ಠೆ, ನಿತ್ಯವೂ ಶರಣ ಸಾಹಿತ್ಯವಾದ ವಚನಗಳನ್ನು ಹೇಳಿಕೊಳ್ಳುವ ಪರಿಪಾಠ. ಮಗನನ್ನು ಜೊತೆಗೆ ಕೂಡಿಸಿಕೊಂಡು ವಚನಗಳನ್ನು ಹೇಳಿಸುತ್ತಿದ್ದರು. ಗಣಪತಿಯು ಹೆಸರಿಗೆ ತಕ್ಕಂತೆ ಜಾಣ, ವಿದ್ಯೆಯನ್ನು ಮೊದಲೇ ಪಡೆದುಕೊಂಡು ಬಂದಂತೆ ತಂದೆ ಹೇಳಿದ ಪಾಠಗಳನ್ನು ನಿಮಿಷಾರ್ಧದಲ್ಲಿ ಸುಶ್ರಾವ್ಯವಾಗಿ ಹೇಳತೊಡಗಿದ. ಮಗನ ಹಾಡುಗಾರಿಕೆ ಕಂಡ ನರಸಪ್ಪನವರು ಖ್ಯಾತ ಸಂಗೀತಗಾರರಾದ ವೀರಣ್ಣ ಆರಳಿ ಸುಲೇಪೇಟ್ ಅವರಲ್ಲಿ ಅಭ್ಯಾಸ ಶುರುಮಾಡಿಸಿದರು. ಮರಪಳ್ಳಿಯಿಂದ ಸುಲೇಪೇಟ್‌ಕ್ಕೆ ಹೋಗಿ ವಾರದಲ್ಲಿ ಮೂರ್‍ನಾಲ್ಕು ಸಲ ಪಾಠ ಹೇಳಿಸಿಕೊಂಡು ಬಂದು ಮುಂಜಾವದಲ್ಲೇ ಎದ್ದು ಅಭ್ಯಾಸ ಮಾಡಿ ತಮ್ಮ ಕಂಠವನ್ನು ಮಧುರಗೊಳಿಸುತ್ತ ಸಾಧನೆಯಲ್ಲಿ ಹೆಜ್ಜೆ ಹಾಕತೊಡಗಿದರು. ಜೊತೆಗೆ ವಿದ್ಯಾಭ್ಯಾಸವನ್ನು ೧೧ನೇ ತರಗತಿಯವರೆಗೆ ಓದಿದರು. ಇವರ ಜೊತೆ ಓದಿದವರು ಶಾಲಾ ಶಿಕ್ಷಕರಾಗಿಯೋ ಇಲ್ಲಾ ಕಚೇರಿಗಳಲ್ಲಿ ಕೆಲಸ ಮಾಡಿ

ನಿವೃತ್ತರಾಗಿದ್ದಾರೆ. ಆದರೆ ಇವರು ಹಾಡುಗಾರಿಕೆಯನ್ನು ತಮ್ಮ ಉಸಿರಾಗಿಸಿಕೊಂಡು ಇನ್ನೂ ದುಡಿಯುತ್ತಿದ್ದಾರೆ. ಕಂಚಿನ ಕಂಠ ಹಾಗೇ ಇದೆ. ಜಾತ್ರೆಗಳಲ್ಲಿ ಇವರ ಹಾಡುಗಾರಿಕೆ ಶುರುವಾದರೆ ಸಾವಿರಾರು ಜನರು ಬೆಳಗ್ಗಿನವರೆಗೆ ಕುಳಿತು ಕೇಳುತ್ತಾರೆ. ಇವರು ಸಂಘ ಸಂಸ್ಥೆಗಳಿಗೆ ಹೋಗಿ ತಿಂಗಳುಗಟ್ಟಲೇ ಪಾಠ ಹೇಳಿಕೊಟ್ಟು ಬರುತ್ತಾರೆ.

ರಂಗಗೀತೆಗಳು, ಮೊಹರಂ ಗೀತೆಗಳು, ದುಂದುಮಿ ಹಾಡುಗಳು, ಇವರ ವಿಶೇಷ ಹಾಡುಗಳು. ರಂಗಗೀತೆಗಳ ರಚನೆ ಸಂಯೋಜನೆ ಮಾಡಿ ಅನೇಕ ನಾಟಕ, ಬಯಲಾಟಗಳಿಗೆ ಮುಮ್ಮೇಳವಾಗಿ ಹಾಡಿದ್ದಾರೆ.

ಅಮೃತರಾಜ, ಮದನ ಮಂಜರಿ, ನಂದ ಗೋಪಾಲ, ಬ್ರಹ್ಮ ಲಿಖಿತ, ಸತ್ಯ ಶರಾವತಿ, ನನ್ನ ಭೂಮಿ, ತಾರಾಮತಿ, ಗುಣರೂಪ ಸಾಹುಕಾರ ಇವುಗಳಲ್ಲಿ ಹಾಡಿದ ಕಲಾವಿದರು. ಪ್ರತಿ ಹಬ್ಬಗಳಲ್ಲಿ ಮೊಹರಂ, ಕಾರಹುಣ್ಣಿಮೆ, ಪಂಚಮಿ, ಶಿವರಾತ್ರಿ, ರಾಷ್ಟ್ರೀಯ ಹಬ್ಬಗಳಾದ, ಅಗಸ್ಟ ೧೫, ನವೆಂಬರ್ ೧, ಅಂಬೇಡ್ಕರ್, ಬಸವ, ಗಾಂಧಿ ಜಯಂತಿಗಳಲ್ಲಿ ಶಾಲಾ ಮಕ್ಕಳಿಗೆ ಲೇಜಿಮ್ ಆಟ, ಕೋಲಾಟ, ಪದಗಳನ್ನು ಕಲಿಸಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ದುಂದುಮಿ ಹಾಡುಗಳನ್ನು ೫–೬ ಜನರ ತಂಡ ಪ್ರಧಾನ ಹಾಡುಗಾರರಾಗಿ ಇವರು ಇನ್ನೊಬ್ಬರು ಉಳಿದವರು ಹಿಮ್ಮೇಳವಾಗಿ ಹಲಗೆ, ಗುಂಡುತಾಳ ವಾದ್ಯಗಳೊಂದಿಗೆ ಕಾರ್ಯಕ್ರಮ ನೀಡುವುದು ಇವರ ವಿಶೇಷತೆ.

ಮರಪಳ್ಳಿ, ಚಿಂಚೋಳಿ, ಸುಲೇಪೇಟ್, ಚಂದಾಪುರ, ಐನೂಲಿ, ಕೊರಳ್ಳಿ, ಇದಲಾಯಿ, ನಿಡಗುಂದಾ, ಸೇಡಂ, ಮಳಖೇಡ, ಚಿತ್ತಾಪುರ, ತೆಲಂಗಾನಾದ ಕರ್ಣಕೋಟೆ, ತಾಂಡೂರ, ವಿಕಾರಾಬಾದ, ಲಿಂಗಸೂಗುರು, ಶಹಾಪೂರ, ಸುರಪುರ ಇವರು ಕಾರ್ಯಕ್ರಮ ನೀಡಿದ ಕ್ಷೇತ್ರಗಳು.

ತಾಲೂಕಾ ಸಾಹಿತ್ಯ ಪರಿಷತ್, ತಾಲೂಕಾ ಮಟ್ಟದ ಜನಪದ ಮೇಳಗಳು, ಇವರ ಪಾಲಿಗೆ ಸಂದ ಗೌರವಗಳು.

೧೯೫೧ ರಿಂದ ಇಲ್ಲಿಯವರೆಗೆ ಸತತ ೫೦ ವರ್ಷಗಳ ಕಾಲ ಸೇವೆ ಅನನ್ಯವಾದುದು. ಇವರ ಕಲೆ ನಶಿಸಿ ಹೋಗಬಾರದೆಂದು ಐನೂಲಿಯ ಪ್ರಾಧ್ಯಾಪಕರಾದ ಶ್ರೀ ಈಶ್ವರಯ್ಯ ಕೋಡಂಬಲ್ ಅವರು ಇವರ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಾ ಬಂದಿದ್ದಾರೆ.

ಗಣಪತಿ ಹಡಪದ ಅವರು ತಮ್ಮ ಶಿಷ್ಯಂದಿರಿಗೆ ಹೇಳುವ ಮಾತು ನೀವು ಕಾಯಕ ಮಾಡುತ್ತ ಹೋಗಿರಿ ಈಶ್ವರಯ್ಯ ಕೊಡಂಬಲನಂಥವರು ಯಾರಾದರೂ ಬಂದು ನಮ್ಮಂತಹವರ ಕಲೆ ಉಳಿಸುತ್ತಾರೆ ಎಂದು ಹೇಳಿ ಸದಾ ಜಾನಪದ ಕಲೆಯ ಉಳಿಸಿ ಬೆಳೆಸುವ ಚಿಂತನೆಯಲ್ಲಿರುವ ಗಣಪತಿಯವರ ಹೃದಯ ಬಹಳ ಸಾತ್ವಿಕ.

**ಗಣಪತಿ ಹಡಪದ**
**ಅಂಚೆ : ಮರಪಳ್ಳಿ**
**ತಾ : ಚಿಂಚೋಳಿ, ಜಿ : ಗುಲಬರ್ಗಾ**

# ಶಿವರುದ್ರಪ್ಪ ಗುರುಸಿದ್ದಪ್ಪ ಅಂವಟಿ

ದೊಡ್ಡಾಟ ಮುಮ್ಮೇಳದಲ್ಲಿ ಪ್ರಧಾನ ಹಾಡುಗಾರ ಶಿವರುದ್ರಪ್ಪ. ದೊಡ್ಡಾಟದ ಸಂಗೀತ ಮಾಸ್ತರರಾಗಿ, ಹೆಸರುವಾಸಿಯಾದ ಶಿವರುದ್ರಪ್ಪನವರು ಜನಿಸಿದ್ದು ೬-೮-೧೯೩೭ ರಂದು ಗುಲಬರ್ಗಾ ಜಿಲ್ಲೆಯ ಮಾಶಾಳ ಗ್ರಾಮದಲ್ಲಿ. ೭೦ ವರ್ಷದಲ್ಲೂ ಇವರ ಗಾಂಭೀರ್ಯ, ಮೀಸೆ, ತಲೆಗೆ ಕೆಂಪು ಗುಜರಾತಿ ಶಲ್ಯಾ, ಪಠಾಣರನ್ನು ಹೋಲುವ ಇವರ ರುಮಾಲು ಶೈಲಿ ಜನರಲ್ಲಿ ಗಂಭೀರ, ಗೌರವ ಭಾವನೆ ಮೂಡಿಸುತ್ತದೆ.

ತಂದೆ ಗುರುಸಿದ್ದಪ್ಪ, ತಾಯಿ ಬಸವಣ್ಣೆವ್ವ ಇಬ್ಬರೂ ಕಲಾವಿದರು. ತಂದೆ ದೊಡ್ಡಾಟದ ಕಲಾವಿದರಾಗಿ ಮಗನ ಹಿಂದೆ ನಿಂತು ಪ್ರೋತ್ಸಾಹ ನೀಡಿ ಪ್ರಖ್ಯಾತನನ್ನಾಗಿ ಮಾಡಿದ್ದಾರೆ. ಕುಟ್ಟುವಾಗ, ಬೀಸುವಾಗ, ಮದುವೆ, ಸೀಮಂತಿಕೆಯಲ್ಲಿ ಹಾಡುತ್ತಿದ್ದ ತಾಯಿ ಬಸವಣ್ಣೆವ್ವನ ಕಲೆ ಮಗನಿಗೆ ಪ್ರಭಾವಿತನನ್ನಾಗಿ ಮಾಡಿದೆ.

೧೦ ವರ್ಷದವರಿದ್ದಾಗಲೇ ಮಾಶಾಳ ಸಂಘದ ದೊಡ್ಡಾಟದಲ್ಲಿ ಭಕ್ತ ಪ್ರಲ್ಹಾದನ ಪಾತ್ರ ಮಾಡಿ ಸಾವಿರಾರು ಪ್ರೇಕ್ಷಕರ ಮನ ಗೆದ್ದವರು. ಅಫಜಲಪೂರ ತಾಲೂಕಿನ ಮಾಶಾಳ ಗ್ರಾಮದ ಸಾರಥೀ ಪಾತ್ರಕ್ಕೆ ಹೆಸರಾದ ಶ್ರೀ ಸಿದ್ಧಾರೂಢ ಗಡೆದವರ ನೆರಳಲ್ಲಿ ಬೆಳೆದು ಬಂದವರು. ದೊಡ್ಡಾಟದ ಹಾಡುಗಾರಿಕೆಗೆ ಕಂಠ ತ್ರಾಣ ಬಲವಾಗಿರಬೇಕು. ವೀರ, ರೌದ್ರ, ಅಬ್ಬರಗಳಿಂದ ಕೂಡಿದ ಎತ್ತರದ ಹಾಡುಗಾರಿಕೆಗೆ ಹೆಸರಾದವರು. ಹಾಡುಗಾರಿಕೆ ಅಷ್ಟೇ ಅಲ್ಲದೆ ಸ್ತ್ರೀ ಪಾತ್ರಗಳಿಂದಲೂ ಗುರುತಿಸಿಕೊಂಡರು. ಸುಭದ್ರೆ, ಚಾಮಲೆ, ಮರುದ್ವತಿ, ಪ್ರಮಿಳಾ, ದ್ರೌಪದಿ, ಭಾನುಮತಿ ಹೀಗೆ ತಾನು ಸ್ತ್ರೀ ವೇಷ ಧರಿಸಿ ಕಾಲ ಗೆಜ್ಜೆಯ ನಾದದಿಂದ ಲಯಬದ್ಧವಾಗಿ ಸೊಂಟದ ಮೇಲೆ ಕೈಯಿರಿಸಿ ಕುಣಿಯುಲಾರಂಭಿಸಿದರೆ ಎಂತಹವರೂ ಮೋಹಕ್ಕೆ ಒಳಗಾಗದೆ ಇರಲು ಸಾಧ್ಯವಿರಲಿಲ್ಲ.

ಇವರು ಮಾಶ್ಯಾಳದ ದೊಡ್ಡಾಟದ ಸಂಘದ ಮುಖ್ಯಸ್ಥರಾಗಿ ಸಂಘ ೪೦ ವರ್ಷಗಳ ಕಾಲ ನಿರಂತರ ಯಶಸ್ವಿಯಾಗಿ ನಡೆದು ಬರಲು ಕಾರಣೀಭೂತರಾದ ಹೆಗ್ಗಳಿಕೆ ಇವರದು. ಅಫಜಲಪುರ ತಾಲೂಕಿನವರಾದ ಇವರು ಗುಲಬರ್ಗಾ ಜಿಲ್ಲೆಯ ಹಳ್ಳಿ ಹಳ್ಳಿಗಳಿಗೆ ಆಟಗಳನ್ನು ಕಲಿಸಿದ ಇವರು ದೊಡ್ಡಾಟದ ಮಾಸ್ತರರೆಂದೇ ಹೆಸರುವಾಸಿಯಾಗಿದ್ದಾರೆ. ನಾಡಿನ ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಕನ್ನಡ ಜಾಗೃತಿ ಸಮಾವೇಶ, ಗಡಿನಾಡು ಉತ್ಸವ, ಜಾತ್ರೆಗಳಲ್ಲಿ, ಕಾಲೇಜುಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸಾಹಿತ್ಯ ಸಮ್ಮೇಳನಗಳಲ್ಲಿ ಅಂಬೇಡ್ಕರ್, ಬಸವ ಜಯಂತಿ ಉತ್ಸವಕ್ಕೆ ಅಂಬೇಡ್ಕರ, ಬಸವೇಶ್ವರ ಆಟ, ಗಾಂಧೀ ಜಯಂತಿಯಂದು ಗಾಂಧೀ ಆಟ ಆಡಿ ಜನಮನ ಸೆಳೆದ ಕೀರ್ತಿ ಇವರದು.

೧೯೯೦ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಗುರು ಶಿಷ್ಯ ಪರಂಪರೆಯ ದೊಡ್ಡಾಟ ಕಲಿಕೆಯ ತರಬೇತಿ ಪ್ರಾರಂಭವಾಗಿ ಶಾಲೆ ಇನ್ನೂ ಹುರುಪು ಹುಮ್ಮಸ್ಸುಗಳಿಂದ ನಡೆಯುತ್ತ ಬಂದುದು ಇವರ ಕಲೆಯ ಅಭಿಮಾನ, ಕಲಾಪ್ರೇಮ ಗುರುತಿಸುವಲ್ಲಿ ಸಾಕ್ಷಿಯಾಗಿದೆ. ೧೯೮೦ರಿಂದ ಆಕಾಶವಾಣಿಯಲ್ಲಿ ಇಂದಿನವರೆಗೆ ನೀಡಿದ ಕಾರ್ಯಕ್ರಮಗಳು ಹಲವಾರು ದೂರದರ್ಶನ ಕಲಾವಿದರಾಗಿ ಬೆಂಗಳೂರು ಗುಲಬರ್ಗಾ ಖ್ಯಾತ ಹಿಮ್ಮೇಳ-ಮುಮ್ಮೇಳದ ಗಾಯಕರಾಗಿ ಪ್ರಸಿದ್ಧಿ ಪಡೆದವರು. ಗುಲಬರ್ಗಾ ಜಿಲ್ಲಾ ಜಾನಪದ ಮೇಳದಲ್ಲಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರಿಂದ ಸನ್ಮಾನ ಪಡೆದ ಶ್ರೇಯಸ್ಸು ಇವರದು.

ಶ್ರೀ ಎ. ಕೆ. ರಾಮೇಶ್ವರರು ಸಂಪಾದಿಸಿ, ಪ್ರಕಟಿಸಿದ, ಮಾಶಾಳದ ದೊಡ್ಡಾಟಗಾರರು ಪುಸ್ತಕದಲ್ಲಿ ಶಿವರುದ್ರಪ್ಪ ಗುರುಸಿದ್ದಪ್ಪ ಅಂಬಟಿಯವರ ಸಂಪೂರ್ಣ ಜೀವನ ಚರಿತ್ರೆಯನ್ನು ಚಿತ್ರಿಸಿದ್ದಾರೆ. ಇವರಿಗೆ ಸರಕಾರದ ಪ್ರಶಸ್ತಿಗಳ ಕಡೆಗೆ ಗಮನವಿಲ್ಲ. ಅಪಾರ ಶಿಷ್ಯಂದಿರನ್ನು ಹೊಂದಿದ್ದಾರೆ. ಕಲ್ಬುರ್ಗಿಯ ಕಲಾ ಸಂಪತ್ತನ್ನು ನಾಡಿನಾದ್ಯಂತ ಹರಡಿಸಿರುವ ಇವರ ಸೇವೆ ಅನನ್ಯ ಅಗಾಧವಾದುದು.

ಶಿವರುದ್ರಪ್ಪ ಗುರುಸಿದ್ದಪ್ಪ ಅಂಬಟಿ
**ಅಂಚೆ : ಮಾಶ್ಯಾಳ, ತಾ : ಅಫಜಲಪೂರ, ಜಿ : ಗುಲಬರ್ಗಾ**

## ದೊಂಡಿಬಾ ಮಕಾಜಿ ಚವ್ಹಾಣ

ಗೌರ (ಕೆ) ಗ್ರಾಮದ ಶ್ರೀ ಧೋಂಡಿಬಾ ಅವರು ಗುರುತಿಸಿಕೊಂಡಿದ್ದು ಕೃಷ್ಣ ಪಾರಿಜಾತದಲ್ಲಿ ಕೃಷ್ಣನಾಗಿ, ಸುಮಾರು ೬೫ ವರ್ಷ ವಯಸ್ಸಿನ ದೋಂಡಿಬಾ ಹುಟ್ಟೂರು ಮಾಶ್ಯಾಳದ ಹತ್ತಿರ ಗೌರ(ಕೆ) ಲಮಾಣಿ ತಾಂಡಾದಲ್ಲಿ. ತಮ್ಮ ಭಜನಾ ಕಲೆಗೆ ರಾಜ್ಯದಾದ್ಯಂತ ಹೆಸರು ಮಾಡಿದ ಈ ಕಲಾವಿದ ಲಮಾಣಿ ಜನಾಂಗಕ್ಕೆ ಕೀರ್ತಿ ತಂದ ಅಪರೂಪದ ಕಲಾವಿದ. ಕಲೆಗಳ ತವರೂರಾದ ಮಾಶ್ಯಾಳ ಇವರಿಗೆ ಸಮೀಪದ ಊರು. ಪರಂಪರೆಯಾಗಿ ಬಂದ ಇವರ ಹಾಡುಗಾರಿಕೆ, ತಂದೆಯವರ ಪ್ರೋತ್ಸಾಹ, ಜನರ ಪ್ರೀತಿ, ಮೆಚ್ಚುಗೆಗಳು ಇವರನ್ನು ಜಾನಪದ ಕಲೆಗಳಾದ ಶ್ರೀಕೃಷ್ಣ ಪಾರಿಜಾತ, ಭಜನೆಗಳತ್ತ ಸೆಳೆದವು. ತಂದೆಯುವರೊಡನೆ ಮಾಶಾಳಕ್ಕೆ ಬಂದು ದೊಡ್ಡಾಟ ಸಂಘದ ದೊಡ್ಡಾಟಗಳನ್ನು ನೋಡಿ ಆನಂದಿಸಿ ಮನೆಗೆ ಬಂದು ದೊಡ್ಡಾಟಗಳ ಎಲ್ಲ ಪಾತ್ರಗಳ ಮಾತುಗಳನ್ನು ಪಾತ್ರಗಳ ಅಭಿನಯ ಮುಖಾಂತರ ಅಭಿನಯಿಸಿ ಮನೆಯ ಸುತ್ತ ಮುತ್ತಲಿನ ವಾತಾವರಣವನ್ನೆಲ್ಲ ದೊಡ್ಡಾಟ ಮಾಡಿಬಿಡುತ್ತಿದ್ದರು. ಪ್ರಸಿದ್ಧ ರಂಗಭೂಮಿಯ ಕಲಾವಿದರಾದ ಶಿವಲಿಂಗಯ್ಯ ಸಾಲಿಮಠ ಅವರ ದರ್ಶನ ಪಡೆದು ಅವರೊಂದಿಗೆ ಕಲಿತು ಅವರ ದೊಡ್ಡಾಟಗಳಲ್ಲಿ ಆಡಿ ಶ್ರೀಕೃಷ್ಣ ಪಾರಿಜಾತ ಸಂಪೂರ್ಣ ಆಟ ಕಲಿತು ತಮ್ಮ ಕಲೆಯನ್ನು ಇತರರಿಗೂ ಕಲಿಸಿದ ಹೆಮ್ಮೆ ಇವರದು.

ಲಂಬಾಣಿ ಹಾಡುಗಾರಿಕೆ, ಶ್ರೀಕೃಷ್ಣ ಪಾರಿಜಾತ ಮತ್ತು ಭಜನೆ ಇವುಗಳ ಆಗರವಾದ ದೋಂಡಿಬಾ ಅವರಿಗೆ ಭಜನೆ ಪ್ರಮುಖ ಕಲೆಯಾಯಿತು. ಸಹಜವಾಗಿ ಆಧ್ಯಾತ್ಮದ ಕಡೆಗೆ ಒಲವು ಗುರು-ಹಿರಿಯರ ನೆರವಿನಿಂದ ಭಜನೆ ಕಲಿಕೆ ಬರುಬುರತ್ತಾ ಭಜನೆಯೇ ಸರ್ವಸ್ವವಾಗಿ ಪರಿಣಮಿಸಿತು. ಪರಿಣಾಮವಾಗಿ ಜನರ ಬಾಯಲ್ಲಿ ಭಜನೆ ದೊಂಡಿಬಾ ಎಂದೇ ಹೆಸರುವಾಸಿಯಾದರು. ಎಲ್ಲಿ ಭಜನೆ ಇದೆಯೋ ಅಲ್ಲಿ ದೋಂಡಿಬಾ ಹಾಜರಿದ್ದು ತಮ್ಮ ಸುಶ್ರಾವ್ಯ ಕಂಠದಿಂದ ರಾಗ, ತಾಳ, ಲಯಬದ್ಧವಾಗಿ ಭಜನೆ ಮೇಳ

ನಡೆಸಿಕೊಡುತ್ತಾರೆ. ಇದುವರಗೆ ಯಾವುದೆ ಫಲಾಪೇಕ್ಷೆಯಿಲ್ಲದೆ ಅನೇಕ ಭಜನಾ ಸಂಘಗಳನ್ನು ಕಟ್ಟಿ ಅಫಜಲಪುರ ತಾಲೂಕಿನಲ್ಲಿ ಪ್ರತಿ ಹಳ್ಳಿಗಳಲ್ಲಿ ಭಜನಾ ಭಕ್ತರನ್ನು ಹೊಂದಿರುವ ಇವರು ಗುಲಬರ್ಗಾ ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿದ್ದಾರೆ.

೧೨ನೇ ವಯಸ್ಸಿನಲ್ಲಿ ಕಲಿತ ಭಜನೆ ಪದಗಳು ೬೫ನೇ ವಯಸ್ಸಿನಲ್ಲಿಯೂ ಸಂಭ್ರಮವನ್ನು ತಂದು ಕೊಡುತ್ತವೆ ಎಂದು ಹೇಳುವ ದೋಂಡಿಬಾ ಬದುಕಿನ ಸಂತಸದ ವಿಷಯ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುಲಬರ್ಗಾ ವತಿಯಿಂದ ಜಾನಪದ ಮೇಳ ಗಡಿನಾಡು ಉತ್ಸವ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಗುಲಬರ್ಗಾ ಜಿಲ್ಲೆಯ ಯುವ ಸಂಘಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ.

ಮಾಶಾಳ, ಅಫಜಲಪುರ, ಅಕ್ಕಲಕೋಟ, ಧುತ್ತರಗಿ, ಸೊಲಾಪುರ ಇವರ ಕಾರ್ಯ ಕ್ಷೇತ್ರಗಳು.

ಭಜನೆ ಮತ್ತು ಕೃಷ್ಣ ಪಾರಿಜಾತದ ಉಳಿಸುವುದಕ್ಕಾಗಿ ಬೆಳೆಸುವುದಕ್ಕಾಗಿ ಶ್ರಮಿಸುತ್ತಿರುವ ಇವರು ಸಾರ್ಥಕ ಬದುಕು ನಡೆಸಿ ಕಳೆದ ೪೦ ವರ್ಷಗಳಿಂದ ಪಾರಿಜಾತ ಪ್ರಿಯರ ಮನ ಗೆದ್ದಿದ್ದಾರೆ. ಪಾರಿಜಾತದ ಹಾಡುಗಾರಿಕೆ, ಹಾವಭಾವ, ಮಾತುಗಾರಿಕೆ, ನೃತ್ಯಭಿನಯಗಳಲ್ಲಿ ಹೊಸತನ ತೋರಿಸುವ ಇವರ ಕಲಾ ನೈಪುಣ್ಯತೆ ಬೆರಗು ಗೊಳಿಸುವಂಥದು. ಸಮರ್ಥ ಸಂಘಟನಾಕಾರರು. ಕಲೆ ಯಾವುದಾದರೇನು ಅದನ್ನು ಉಳಿಸಬೇಕು ಬೆಳೆಸಬೇಕು ಎಂಬ ಮಹದಾಸೆ ಅವರದು.

**ದೊಂಡಿಬಾ ಮಕಾಜಿ ಚವ್ಹಾಣ**
**ಭಜನೆಕಾರರು**
**ಅಂಚೆ : ಗೌರ(ಕೆ)**
**ತಾ : ಅಫಜಲಪುರ, ಗುಲಬರ್ಗಾ**

# ಅಣ್ಣಪ್ಪ ಮಲ್ಲಿಕಾಜಪ್ಪ ಹಡಲಗಿ

೬೫ ವರ್ಷ ವಯಸ್ಸಿನ ಅಣ್ಣಪ್ಪನವರು ದೊಡ್ಡಾಟದಲ್ಲಿ ಗುರುತಿಸಿಕೊಂಡಿದ್ದು ದೈತ್ಯ ಪಾತ್ರದೊಂದಿಗೆ. ದೈತ್ಯ ಪಾತ್ರದ ಕುಣಿತವೇ ಪ್ರಧಾನವಾದುದು. ಕುಣಿಯುತ್ತಾ ಅಟ್ಟವನ್ನು ಪ್ರವೇಶಿಸುವ ಸನ್ನಿವೇಶ ಪ್ರೇಕ್ಷಕರ ಮೈ ನವಿರೇಳಿಸುವಂತಿರುತ್ತದೆ. ದೊಡ್ಡಾಟದ ಕುಣಿತದ ಹೆಜ್ಜೆಗಳಾದ ಕತ್ತರಿ ಕುಣಿತ, ಅಟ್ಟ ಹೆಜ್ಜೆಯ ಕುಣಿತ, ಹಿಮ್ಮಡ ಕುಣಿತ, ಕತ್ತು ಕುಣಿತ ಹೀಗೆ ದೊಡ್ಡಾಟ ಕುಣಿತಗಳ ಹೆಸರನ್ನು ಹೇಳುತ್ತ ಒಂದೊಂದು ಕುಣಿತಗಳನ್ನು ೧೫ ನಿಮಿಷಗಳವರೆಗೆ ಮಾಡಿ ತೋರಿಸುತ್ತಿರುವಾಗ ಆಶ್ಚರ್ಯವೆನಿಸಿತು.

ಅಣ್ಣಪ್ಪನವರು ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲೂಕಿನ ಮಾಶ್ಯಾಳ ಗ್ರಾಮದವರು. ಮಾಶ್ಯಾಳ ಗ್ರಾಮದ ಕರ್ನಾಟಕದ ದೊಡ್ಡಾಟ ಸಂಘದ ಸದಸ್ಯರಾಗಿ ಶಿವಲಿಂಗಯ್ಯನವರ ನೇತೃತ್ವದಲ್ಲಿ ರಾಜ್ಯಾದ್ಯಂತ ನೂರಾರು ಕಾರ್ಯಕ್ರಮ ನೀಡಿದ ಪ್ರಖ್ಯಾತರು. ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ದೊಡ್ಡಾಟಕ್ಕೆ ಕಾಲಿರಿಸಿದವರು ಹಿಮ್ಮೇಳ, ಮುಮ್ಮೇಳ, ತಾಳ-ಮದ್ದಳೆ ಗತ್ತಿಗೆ ಅನುಗುಣವಾಗಿ ಕುಣಿಯುವ ಗತ್ತು ಅಣ್ಣಪ್ಪನವರ ಅನುಭವ ಮತ್ತು ಪರಿಣತಿಗಳು ಹಾಗೂ ಕಲೆಯ ಸಮೃದ್ಧತೆಯನ್ನು ಎತ್ತಿ ತೋರಿಸುತ್ತವೆ.

ದೈತ್ಯ ಪಾತ್ರವಲ್ಲದೆ ಸ್ತ್ರೀ ವೇಷ ಮಾಡಿದ್ದು ಉಂಟು. ಸ್ತ್ರೀ ವೇಷದ ಪೋಷಾಕು ಹಾಕಿಕೊಂಡು ಕಾಲ ಗೆಜ್ಜೆಯ ನಾದ ನುಡಿಸುತ್ತು ಲಯಬದ್ಧವಾಗಿ ಸೊಂಟದ ಮೇಲೆ ಕೈಯಿರಿಸಿ ಕುಣಿಯಲಾರಂಭಿಸಿದರೆ ಅಣ್ಣಪ್ಪನವರನ್ನು ಗುರುತಿಸಲಾಗುವುದಿಲ್ಲ. ದೊಡ್ಡಾಟದ ಕಲೆಯನ್ನು ಬೆಳೆಸಿ ಉಳಿಸುವ ಹಂಬಲದಿಂದ ಊರೂರು ತಿರುಗಿ ಹಳ್ಳಿ ಹಳ್ಳಿಗಳಲ್ಲಿ ಸಂಘಟಿಸಿ ದೊಡ್ಡಾಟದ ಪ್ರದರ್ಶನವನ್ನು ಕಳೆದ ೨೫ ವರ್ಷಗಳಿಂದ ನಡೆಸಿದ್ದಾರೆ. ಶ್ರೀಕೃಷ್ಣ ಗಾರುಡಿಗ, ಕರ್ಣ ಪರ್ವ, ಕುರುಕ್ಷೇತ್ರ, ಐರಾವಣ ಮೈರಾವಣ ಈ ಮೊದಲಾದ ದೊಡ್ಡಾಟ ಪ್ರಸಂಗಗಳು ಇವರಿಗೆ ಜನಪ್ರಿಯತೆ ತಂದು ಕೊಟ್ಟಿವೆ.

ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಸೊಲ್ಲಾಪುರದ ಗಡಿನಾಡು ಕನ್ನಡ ಜಾಗೃತಿ ಸಮಾವೇಶ, ಮಹಾರಾಷ್ಟ್ರದ ಬಹುಭಾಗಗಳಲ್ಲಿ ಕಾರ್ಯಕ್ರಮ ನೀಡಿ ಪ್ರಖ್ಯಾತರಾಗಿದ್ದಾರೆ. ಯುವಜನಮೇಳ, ಸಾಹಿತ್ಯ ಸಮ್ಮೇಳನಗಳಲ್ಲಿ ಆಹ್ವಾನಿತ ಕಲಾವಿದರಾಗಿ ದೊಡ್ಡಾಟದ ಪ್ರದರ್ಶಿಸಿದ್ದಾರೆ.

ಅಕ್ಕಲಕೋಟದ ಸಮರ್ಥ ಸ್ವಾಮಿಗಳ ಆಶೀರ್ವಾದ ಹಾರೈಕೆಗಳು. ಇವರ ಕಲಾ ನೈಪುಣ್ಯತೆ, ಕಲಾ ಸೇವೆಗೆ ಕಾರಣ. ಇವರ ಕಲಾ ಶ್ರಮಕ್ಕೆ ಅಪಾರ ಶಿಷ್ಯ ಬಳಗ ಇದೆ. ಅಣ್ಣಪ್ಪನವರು ನನಗೆ ತಿಳಿದಷ್ಟು ನನ್ನ ಕೈಲಾದಷ್ಟು ಆಸಕ್ತರಿಗೆ ನಾನು ಕಲಿಸಿಕೊಟ್ಟಿದ್ದೇನೆ ಎಂಬ ತೃಪ್ತಿ ನನಗಿದೆ ಎನ್ನುತ್ತಾರೆ. ಕಲಾಸೇವೆ ಮುಂದುವರೆಯಲು ಸರಕಾರದ ಅವಕಾಶಗಳು ಅವರಿಗೆ ಅವರ ಶಿಷ್ಯಂದಿರಿಗೆ ದೊರೆಯಲೆಂದು ನನ್ನ ಹಾರೈಕೆ.

ಅಣ್ಣಪ್ಪ ಮಲ್ಲಿಕಾಜಪ್ಪ ಹಡಲಗಿ
ಅಂಚೆ : ಮಾಶ್ಯಾಳ, ತಾ : ಅಫಜಲಪುರ, ಜಿ : ಗುಲಬರ್ಗಾ

# ದಿಗಂಬರ ಪಾಂಚಾಳ (ವಿಶ್ವಕರ್ಮ)

ಕುಂತ ಸಭದಾಗ ನಿಂತ ನಾ ಹೇಳ್ತೀನಿ
ಎಂತಿದ್ರ ನನಗಂಡ ಸರದಾರ
ನಾಲ್ಕು ಮಂದ್ಯಾಗ ಭಾಳ ಪಾಸ ಬಹದ್ದೂರ
ಹ್ಯಾಂಗ ಮರೆಯಲವ್ವ ಅವನ ಉಪಕಾರ

ಈ ಜಾನಪದ ಹಾಡನ್ನು ಉತ್ತರ ಕರ್ನಾಟಕದ ಜನತೆ ಎಂದಿಗೂ ಮರೆಯಲಾರರು. ಇಂತಹ ಹಲವಾರು ಜನಪದ ಹಾಡುಗಳನ್ನು ಗ್ರಾಮಾಂತರ ಜನರಿಗೆ ಮುಟ್ಟುವಂತೆ ಹಾಡಿ ರಂಜಿಸುವ ಹೈದರಾಬಾದ ಕರ್ನಾಟಕ ಭಾಗದ ಜ್ಯೂನಿಯರ್ ಹುಕ್ಕೇರಿ ಬಾಳಪ್ಪ ಎಂದೇ ಪ್ರಖ್ಯಾತರಾಗಿರುವ ಕಲಾವಿದರೇ ಶ್ರೀ ದಿಗಂಬರ ಪಂಚಾಳರು. ಇವರು ಮೂಲತಃ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಹುಲ್ಲೂರ ಗ್ರಾಮದವರು. ೫-೪-೧೯೪೮ರಲ್ಲಿ ವೀರಪ್ಪ ಪಂಚಾಳರ ಮಗನಾಗಿ ಜನಿಸಿದರು. ಬಡತನದ ಬೇಗೆಗೆ ಒಳಗಾದವರು. ಮನೆತನದ ಕುಲಕಸುಬಾದ ಕಮ್ಮಾರಿಕೆಯಿಂದಲೇ ಜೀವನ ನಡೆಸುತ್ತಿದ್ದ ತಂದೆ ಬಿಡುವಿನಲ್ಲಿ ಜಾನಪದ, ತತ್ವಪದಗಳನ್ನು ರಚಿಸಿ ಯಾವ ತಾಳ, ತಂಬೂರಿಯಿಲ್ಲದೆ ಗ್ರಾಮದ ಯಾವುದೇ ಶುಭ ಸಮಾರಂಭಗಳಲ್ಲಿ ಹಾಡುತ್ತಿದ್ದರು. ಅವರನ್ನು ಅನುಕರಿಸಿದ ದಿಗಂಬರರು ೧೧ನೇ ವಯಸ್ಸಿನಿಂದಲೇ ಜನಪದ ತತ್ವಪದಗಳನ್ನು ಹಾಡುವುದನ್ನು ರೂಢಿಸಿಕೊಂಡರು.

ಪಂಚಾಳರು ಮೆಟ್ರಿಕ್‌ವರೆಗೆ ಕಲಿತು ಮುಂದೆ ಓದಲಾರದೆ ಉದ್ಯೋಗ ಅರಸತೊಡಗಿದರು. ಕಲೆ ಮಾನವನಿಗೆ ದೇವರು ಕೊಟ್ಟ ವರವಾಗಿದೆ. ಇದು ಎಲ್ಲರಿಗೂ ಲಭಿಸುವುದಿಲ್ಲ. ಕೆಲವರಿಗೆ ಅನುವಂಶಿಕವಾಗಿಯೂ, ಪರಿಶ್ರಮದಿಂದಲೋ ಲಭ್ಯವಾಗುವುದು. ತಂದೆ ಕಲಿಸಿದ ಹಾಡುಗಳನ್ನು ಪ್ರಶಂಸೆಗೆ ಒಳಗಾಗಿದ್ದ ಇವರಿಗೆ

ಉದ್ಯೋಗ ಸಿಗದೆ ಹೋದಾಗ ಊರೂರು ಅಲೆದು ಜನರೆದುರಿಗೆ ಮೂಢನಂಬಿಕೆ, ಅಜ್ಞಾನ ಕುರಿತು ಸ್ವರಚಿತ ಜನಪದ ತತ್ವಪದಗಳನ್ನು ಹಾಡುತ್ತ ಜನಜಾಗ್ರತೆಯಲ್ಲಿ ನಡೆದರು. ಹಾಡುಗಳ ಪ್ರಭಾವದಿಂದ ಗುರುಹಿರಿಯರ ಅನುಗ್ರಹದಿಂದ ಪಶು ಸಂಗೋಪನಾ ಇಲಾಖೆಯಲ್ಲಿ ಸಣ್ಣ ಉದ್ಯೋಗ ದೊರೆಕಿತು. ಪಂಚಾಳರು ಉದ್ಯೋಗದೊಂದಿಗೆ ಕಲೆಯನ್ನೂ ಬೆಳೆಸಿಕೊಂಡರು.

ಕುಟುಂಬ ಕಲ್ಯಾಣದ ಪ್ರಚಾರ ಯೋಜನೆಯಡಿಯಲ್ಲಿ ಮಿತ ಸಂತಾನ, ವಯಸ್ಕರ ಶಿಕ್ಷಣ, ಪೋಲಿಯೋ, ವರದಕ್ಷಿಣೆ, ಏಡ್ಸ್, ಕುಷ್ಟರೋಗ, ಅಂಗವಿಕಲರ ಸಹಾಯಾರ್ಥ, ನೆರವು ಸುಧಾರಿತ ಕೃಷಿ ಸಾಧನ ಇತ್ಯಾದಿ ಕಾರ್ಯಕ್ರಮಗಳ ಕುರಿತು ಸ್ವತಃ ಪದಗಳನ್ನು ರಚಿಸಿ ಜಾನಪದ ಶೈಲಿಯಲ್ಲಿ ಗ್ರಾಮಾಂತರ ಜನರ ಮನ ಮುಟ್ಟುವಂತೆ ಹಾಡಿ ಯೋಜನೆಯಗಳನ್ನು ಯಶಸ್ವಿಗೊಳಿಸುವಲ್ಲಿ ಪ್ರಖ್ಯಾತರಾದರು.

ಅಕ್ಷರ ಕಲಿಬೇಕು, ಹೆಬ್ಬೆಟ್ಟು ಒತ್ತೋದು ಬಿಡಬೇಕು, ಸಹಿ ಮಾಡಬೇಕು,
ಶಾಲೆ ಕಲಿಬೇಕು, ದೇಶ ಸುದ್ದಿ ತಿಳಿಬೇಕು, ತಿಳಿದು ಬುದ್ಧಿ ಜೀವಿಗಳಾಗಬೇಕು

ಎನ್ನುವ ಹಾಡು,

ನಾ ಕೊಟ್ಟ ಬಂದೀನಿ, ಹುಂಡಾ ನಿನಗಂಜೋದ್ಯಾಕೋ ಗಂಡ,
ಕವಡಿ ಕೆಲಸ ಬರೋದಿಲ್ಲ ನನಗ ಗಂಡಾ
ಕುಯ್ ಕುಯ್ ಮಾಡಿದರ ಮಾಡ್ತೀನಿ ಬಂಡಾ

ಎನ್ನುವ ವರದಕ್ಷಿಣೆ ಕುರಿತ ಹಾಡುವ ಹಾಡು ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿವೆ.

ವಾರ್ತಾ ಮತ್ತು ಪ್ರಚಾರ ಇಲಾಖೆ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ನೀಡಿದ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುಲಬರ್ಗಾ ಮತ್ತು ಬೆಂಗಳೂರು ವತಿಯಿಂದ ಉಡುಪಿ, ಬೆಂಗಳೂರು, ಬೀದರ, ಧಾರವಾಡ, ಬೆಳಗಾವಿ, ಹಾವೇರ, ಶಿವಮೊಗ್ಗಾ, ಮಂಗಳೂರು, ಮಂಡ್ಯ, ಮೈಸೂರು, ಹಂಪಿ, ಚಿತ್ತಾಪೂರ, ಜೇವರ್ಗಿ, ಸುರಪುರ, ವಿಜಾಪುರಗಳಲ್ಲಿ ಸಾಂಸ್ಕೃತಿಕ ಸೌರಭ, ಸಂಗೀತ ಸಂಜೆ, ಉದ್ಯಾನವನದಲ್ಲಿ ಉದಯರಾಗ, (ಜಾನಪದ ಭಕ್ತಿಗೀತೆ) ಗಳಂತಹ ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ನೀಡಿ ಅಖಿಲ ಭಾರತ ಸರ್ಕಾರಿ ನೌಕರರ ಸಮಾವೇಶಗಳಲ್ಲಿ ಭಾಗವಹಿಸಿ ರಾಷ್ಟ್ರಮಟ್ಟದ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ.

ಆಕಾಶವಾಣಿಯ ಬಿ ಹೈಗ್ರೇಡ್ ಕಲಾವಿದರಾಗಿ ಸುಮಾರು ವರ್ಷಗಳಿಂದ ಆಕಾಶವಾಣಿ ಕಲಾಸೇವೆ ಸಲ್ಲಿಸಿದ ಪಂಚಾಳರು ದೂರದರ್ಶನ ಗುಲಬರ್ಗಾ, ಬೆಂಗಳೂರುಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಲ್ಲದೆ ಬೆಳಗು ಕಾರ್ಯಕ್ರಮದಲ್ಲೂ ಪರಿಚಯಿಸಿಕೊಂಡಿದ್ದಾರೆ.

ಕಡಕೋಳ ಮಡಿವಾಳೇಶ್ವರ ಮಠದಿಂದ ಅಬ್ಬೆ ತುಮಕೂರಿನ ವಿಶ್ವಾರಾಧ್ಯ ಮಠದಿಂದ, ನಾಲವಾರದ ಶ್ರೀ ಕೋರಿ ಸಿದ್ದೇಶ್ವರ ಮಠದಿಂದ, ಹುಬ್ಬಳ್ಳಿಯ ಸಿದ್ಧಾರೂಢ ಮಠದಿಂದ ಗೌರವ, ಸನ್ಮಾನ, ಪ್ರಶಸ್ತಿಗಳನ್ನು ಪಡೆದಿದ್ದಲ್ಲದೆ ವಾರ್ತಾ ಪ್ರಚಾರ ಇಲಾಖೆಯಿಂದ ಭಾರತ ಸರ್ಕಾರದಿಂದ ಸನ್ಮಾನ, ಗೌರವ, ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹೀಗೆ ನೂರಾರು ಕಾರ್ಯಕ್ರಮಗಳನ್ನು ನೀಡಿ ಈಗ ಸೇವೆಯಿಂದ ನಿವೃತ್ತರಾಗಿ ತಮ್ಮ ಕಲೆಯ ಸೇವೆಯನ್ನು ಕ್ರಿಯಾತ್ಮಕವಾಗಿ ಮುಂದುವರೆಸಿದ್ದಾರೆ. ಇವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಅವಕಾಶ ದೊರೆಯಲೆಂದು ಹಾರೈಸೋಣ.

ದಿಗಂಬರ ವೀರಪ್ಪಾ ಪಾಂಚಾಳ
ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರು
ಪ್ಲಾಟ್ ನಂ. ೧೨೩, ಬಡೇಪೂರ ಕಾಲನಿ
ಗುಲಬರ್ಗಾ

## ಬಕ್ಕಪ್ಪ ಗೇನಳ್ಳಿ ಐನೂಲಿ

ಶ್ರೀ ಬಕ್ಕಪ್ಪ ಗೇನಳ್ಳಿ ಜಾನಪದ ರಂಗಭೂಮಿಯ ಕಲಾವಿದರಾಗಿ ಅರಳಿದ್ದು ಚಿಂಚೋಳಿ ತಾಲೂಕಿನ ಐನೂಲಿ ಗ್ರಾಮದಲ್ಲಿ. ಅವರ ಕಲಾ ಕಂಪು ಸೂಸಿದ್ದು ಹೈದರಾಬಾದ ಕರ್ನಾಟಕದ ತುಂಬ. ೬೦ ವರ್ಷದ ಬಕ್ಕಪ್ಪನವರು ಜಾನಪದ ರಂಗಭೂಮಿಯ ಕಲಾವಿದರು. ಅದನ್ನು ಉಳಿಸಿ ಬೆಳೆಸಲು ಶ್ರಮಿಸಿದ ಅಪರೂಪದ ಪ್ರತಿಭಾವಂತ ಕಲಾವಿದರು. ತಂದೆ ಭೀಮಶೆಟ್ಟಿ ತಾಯಿ ಸುಗಲಮ್ಮ ಕಲೆಗಾರರು. ಕಲಾಪ್ರೇಮಿಗಳೂ ಆದ ಈ ದಂಪತಿಗಳ ಉದರದಲ್ಲಿ ೭-೯-೧೯೪೬ರಲ್ಲಿ ಜನಿಸಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಐನೂಲಿಯಲ್ಲಿಯೇ ಮುಗಿಸಿದ ಬಕ್ಕಪ್ಪನವರು ತಮ್ಮ ಹೈಸ್ಕೂಲ್ ಮತ್ತು ಕಾಲೇಜನ್ನು ಚಿಂಚೋಳಿ ತಾಲೂಕಿನ ಚಂದಾಪುರಕ್ಕೆ ಕಲ್ನಾಡಿಗೆಯಲ್ಲಿಯೇ ಹೋಗಿ ಬಂದು ಕಲಿತ ಕಷ್ಟಕರ ಜೀವಿ. ಮನೆಯಲ್ಲಿ ತಂದೆ-ತಾಯಿಗಳು ಹಣದಲ್ಲಿ ಶ್ರೀಮಂತಿಕೆಯಿಲ್ಲದಿದ್ದರೂ ಕಲೆಯಲ್ಲಿ ಆಗರ್ಭ ಶ್ರೀಮಂತಿಕೆಯನ್ನು ಹೊಂದಿದ್ದರು. ತಮ್ಮೂರಿಗೆ ಜಾತ್ರೆ ಹಬ್ಬ ಹರಿದಿನಗಳಲ್ಲಿ ಬರುತ್ತಿದ್ದ ದೊಡ್ಡಾಟದ ಕಲಾವಿದರನ್ನು ಪರಿಚಯಿಸಿಕೊಂಡು ಶಾಲೆಯ ಬಿಡುವಿನ ವೇಳೆಯಲ್ಲಿ ಅವರ ಊರುಗಳಿಗೆ ತೆರಳಿ ಆಟಗಳನ್ನು ಕಲಿತು ಅವರೊಡನೆ ಪ್ರದರ್ಶಿಸಿ ಬರುತ್ತಿದ್ದ. ಬಕ್ಕಪ್ಪನವರು ಪಿ. ಯು. ಸಿ.ವರೆಗೆ ಓದಿದ್ದರಿಂದ ಆಟದ ಪುಸ್ತಕಗಳನ್ನು ಓದಿ ಹೆಚ್ಚಿನ ಆಸಕ್ತಿ ಹೊಂದಿ ಐನೂಲಿಯಲ್ಲಿಯೇ ಒಂದು ಸಂಘ ಕಟ್ಟಿ ಹಿರಿಯ ಕಲಾವಿದರ ಮಾರ್ಗದರ್ಶನಲ್ಲಿ ಅಥವಾ ಕಲಿಸುವ ಭಾಗವಂತನನ್ನು ಬೇರೆ ಕಡೆಯಿಂದಲೂ ಕರೆಸಿ ನಿರ್ದೇಶನ ಪಡೆದು ಆಟಗಳನ್ನು ಯಶಸ್ವಿಗೊಳಿಸಲು ಫಲಕಾರಿಯಾಗಿದ್ದು ತಮ್ಮ ೨೦ ವರ್ಷದವರಿದ್ದಾಗಲೆ.

ಎಲ್ಲದರಲ್ಲೂ ಪರಿಣಿತರು ಆದರೂ ಯಾರೂ ಮಾಡದ ಸಾರಥಿ ಪಾತ್ರ ಇವರ ಪಾಲಿಗೆ ಥೇಟ್ ಕೋಡಂಗಿಯನ್ನು ಹೋಲುವ ಇವರ ವೇಷ ಭೂಷಣ

ನಗುವಂತೆ ಇದ್ದು ತಲೆಗೆ ಕಟ್ಟಿದ ಬಟ್ಟೆ ಅಥವಾ ಬಿದಿರಿನಿಂದ ಮಾಡಿದ ಕುಲಾಯಿ ಮುಖದ ಮೇಲೆಲ್ಲಾ ಅಲ್ಲಲ್ಲಿ ಬಿಳಿ ಚುಕ್ಕಿ, ಕೋರೆ ಮೀಸೆ, ಇಜಾರು, ಕಾಲಿಗೆ ಗೆಜ್ಜೆ, ಕೈಯಲ್ಲಿ ಕೋಲು ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುವ ವಿಧಾನ ಇವರ ವಿಶಿಷ್ಟತೆ ಹೇಳುತ್ತೇನೆ ಕೇಳುವಂತವನಾಗು ನಡುನಡುವೆ ಭಲೆ ಭಲೆಲೆ ಶಹಬ್ಬಾಸ್, ಸಾರಥಿ ಪಾತ್ರದ ಬಕ್ಕಪ್ಪನವರು ಹಾಸ್ಯದಿಂದ ಜನರನ್ನು ರಂಜಿಸಿ ಹಾಸ್ಯದ ಹೊನಲಲ್ಲಿ ಮುಳುಗಿಸಿ ಸಂಸಾರದ ತಾಪತ್ರಯ ದುಃಖ ದುಮ್ಮಾನಗಳನ್ನು ದೂರವಿರಿಸುವಿಕೆಯು ಮಹಾದುದ್ದೇಶದ ಮಹಾಕಲಾವಿದ. ಇವರ ಹಾಸ್ಯ ಪಾತ್ರವನ್ನು ನೋಡಿ ಹೊಟ್ಟೆ ಹುಣ್ಣಾಗುವಂತೆ ನಕ್ಕವರೆಷ್ಟು ಲೆಕ್ಕವಿಲ್ಲ. ಇಡೀ ದೊಡ್ಡಾಟದ ವೇಳೆಯಲ್ಲಿ ಕೊನೆ ಪಕ್ಷ ಐದಾರು ಸಲ ನಗೆಗಡಲಲ್ಲಿ ಮುಳುಗಿದ ಜನ ಸಮೂಹ ಬಕ್ಕಪ್ಪನವರನ್ನು ಹಾಡಿ ಹೊಗಳಿದ್ದುಂಟು.

ಪಾತ್ರಗಳಲ್ಲದೆ ಬಕ್ಕಪ್ಪನವರು ಹಾಡುಗಾರಿಕೆಯ ಕಲೆಯನ್ನೂ ಮೈಗೂಡಿಸಿ ಕೊಂಡವರು. ಆಪಜಲಪೂರ, ಚಿಂಚೋಳಿ ಗ್ರಾಮದ ಪ್ರಖ್ಯಾತ ದೊಡ್ಡಾಟದ ಕಲಾವಿದರಾದ ಮೋನಪ್ಪ ಸುತಾರ ಬಳಿಯೂ ಇವರು ದೊಡ್ಡಾಟದ ಹಾಡುಗಾರಿಕೆಯ ಅಭ್ಯಾಸ ಮಾಡಿದ್ದುಂಟು. ದೊಡ್ಡಾಟದ ಮುಮ್ಮೇಳ ಮತ್ತು ಹಿಮ್ಮೇಳಗಳೆರಡರಲ್ಲೂ ಹಾಡಬಲ್ಲ ಬಕ್ಕಪ್ಪ ವೀರ, ರೌದ್ರ, ಅಬ್ಬರಗಳಿಂದ ಹಾಡಿದರೆ ಊರಿಗೆ ಊರೇ ಕೇಳಿಸಿಕೊಳ್ಳುತ್ತಿತ್ತು.

ಮಾರ್ಕಂಡೇಯನ ಕಥೆ, ಕನಕಾಂಗಿ ಕಲ್ಯಾಣ, ವೀರ ಪ್ರತಾಪ, ರುಕ್ಮಾಂಗದ, ವಜ್ರಮುಕುಟ, ದೇವಿ ಆಟ, ರತಿ ಕಲ್ಯಾಣ, ಗಿರಿಜಾ ಕಲ್ಯಾಣ, ಲವ-ಕುಶ, ಚಂದ್ರಹಾಸ, ವೀರ ಅಭಿಮನ್ಯು, ದ್ರೌಪದಿ ವಸ್ತ್ರಾಪಹರಣ ಇವರು ಆಡಿದ ಆಡಿಸಿದ ಪ್ರಮುಖ ಆಟಗಳು. ಪ್ರತಿ ವರ್ಷ ನಡೆಯುವ ಜಾತ್ರೆಗಳಲ್ಲಿ ಐದಾರು ತಿಂಗಳು ಗಟ್ಟಲೆ ಪ್ರತಿ ಹಳ್ಳಿಗಳಲ್ಲಿ ನೂರಾರು ದೊಡ್ಡಾಟಗಳನ್ನು ಆಡಿಸಿ ದೊಡ್ಡಾಟ ಮಾಸ್ತರರಾಗಿ ಮೆರೆದಿದ್ದಾರೆ. ಐನೂಲಿ, ಚಿಂಚೋಳಿ, ಇದಲಾಯಿ, ತೆಲಂಗಾನಾನದ ಕರ್ನಕೋಟಿ, ತಾಂಡೂರು, ಜಹಿರಾಬಾದ, ಸದಾಶಿವಪೇಟ್, ಎಂಪಲ್ಲಿ, ಸೇಡಂ, ನಿಡಗುಂದಾ ಇವು ಇತರ ಪ್ರಮುಖ ಊರುಗಳು.

ದೊಡ್ಡಾಟ, ಸಣ್ಣಾಟ, ಡಪ್ಪಿನಾಟವಲ್ಲದೆ ಹಳ್ಳಿಗಳ ಪ್ರಮುಖ ಕಲೆಗಳಾದ, ಕೋಲಾಟ, ಸುಗ್ಗಿ ಕುಣಿತ, ಲೇಜಿಮ್, ಭಜನೆ, ಮುಳ್ಳಿನ ಹೆಜ್ಜೆ. ಜಗ್ಗಲಿಗೆ ಮುಂತಾದ ಆಟಗಳನ್ನು ಯುವಕರಿಗೆ ಕಲಿಸಿ ಪ್ರದರ್ಶನಗಳು ಮುಗಿಯುವವರೆಗೆ ಮಾರ್ಗದರ್ಶಕರಾಗಿ ತಮ್ಮನ್ನು ತೊಡಗಿಸಿಕೊಳ್ಳುವರು. ೪೦ ವರ್ಷಗಳಿಂದ ಈ ಕಲೆಗಾಗಿ ದುಡಿದ ಇವರ ಸೇವೆ ಗಮನಾರ್ಹ. ಯುವ ಪ್ರಾಧ್ಯಾಪಕರಾದ ಶ್ರೀ ಈಶ್ವರಯ್ಯ ಕೋಡಂಬಲ್ ಅವರು ಸಂಗ್ರಹಿಸಿದ ಚಿಂಚೋಳಿ ತಾಲೂಕಿನ

ಕಲಾವಿದರು ಎಂಬ ಪುಸ್ತಕದಲ್ಲಿ ಬಕ್ಕಪ್ಪ ಗೇನಳ್ಳಿಯವರು ಪ್ರಮುಖರು. ಇವರ ಜನಪದ ಸಾಹಿತ್ಯ ಹಾಗೂ ಕಲೆಗಳ ಮಾಹಿತಿ "ಜನಪದ ಕಲೆಗಳು" ಎಂಬ ಇನ್ನೊಂದು ಪುಸ್ತಕದಲ್ಲಿಯೂ ಪ್ರಕಟವಾಗಿದೆ.

ಚಿಂಚೋಳಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ ಇವರನ್ನು ಗೌರವಿಸಿ, ಸನ್ಮಾನಿಸಿದೆ. ಇವರ ಜನಪದ ಕಲೆಯ ಬೆಳವಣಿಗೆಯಲ್ಲಿ ಸರಕಾರದ ಪ್ರೋತ್ಸಾಹ, ಬೆಂಬಲ ಅವಕಾಶಗಳು ಸಿಗಲೆಂದು ನಮ್ಮ ನಿಮ್ಮೆಲ್ಲರ ಹಾರೈಕೆ.

ಬಕ್ಕಪ್ಪ ಗೇನಳ್ಳಿ
ಅಂಚೆ : ಐನೂಲಿ
ತಾ : ಚಿಂಚೋಳಿ, ಜಿ : ಗುಲಬರ್ಗಾ

## ಸಾಯಬಣ್ಣ ದಾಸ

ಹಾಡುಗಾರ ಸಾಯಬಣ್ಣ ದಾಸ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಚಿಮ್ಮ ಇದಲಾಯಿ ಗ್ರಾಮದವರು. ೬೫ರ ಸಾಯಬಣ್ಣ ಜನಿಸಿದ್ದು ೧೯೪೨ರ ಎಪ್ರಿಲ್ ತಿಂಗಳಲ್ಲಿ. ೬೫ ವರ್ಷ ಕಳೆದರೂ ಪದ ಹಾಡುವ ಉತ್ಸಾಹ ಬತ್ತಿಲ್ಲ. ಧ್ವನಿ ತೊದಲುತ್ತಿಲ್ಲ. ಸಾಯಬಣ್ಣನ ಧ್ವನಿ ೨೦ ವರ್ಷದ ಯುವಕನ ಧ್ವನಿ ಕೇಳಿದಂತಿರುತ್ತದೆ. ಇದೇ ಅವರ ಕಲಾ ಸಾಧನೆಯ ವಿಶೇಷತೆ.

ಪ್ರಾಥಮಿಕ ಶಿಕ್ಷಣ ಕಲಿಯಲೂ ಅವಕಾಶವಾಗದ ಈ ಕಲಾವಿದ ಜಾನಪದ ಶಾಲೆಯಲ್ಲಿ ಕಲಿತದ್ದು ಅಪಾರ. ಈ ಅಪಾರ ಜ್ಞಾನವನ್ನು ಜಾನಪದ ಹಾಡುಗಾರಿಕೆಯಲ್ಲಿ ತೋರಿಸಿದ್ದಾರೆ. ತಂದೆ ನರಸಪ್ಪ ದಾಸ ಮತ್ತು ತಾಯಿ ಎಲ್ಲಮ್ಮನವರು ದಾಸರ ಹಾಡುಗಳನ್ನು ಹಾಡುತ್ತ ದಾಸರೆಂದೇ ಹೆಸರು ಮಾಡಿದವರು. ತಂದೆ ತಾಯಿಯವರೊಂದಿಗೆ ಹಾಡುತ್ತ ವಂಶ ಪರಂಪರೆಯಾದ ಈ ಹಾಡುಗಾರಿಕೆ ಕಲೆಯೊಂದಿಗೆ ಬೆಳೆದಿದ್ದಾರೆ. ಕೋಲಾಟ, ದೊಡ್ಡಾಟ, ಸಣ್ಣಾಟ, ಬುಲಾಯಿ ಹಾಡುಗಳು, ಡಪ್ಪಿನಾಟ, ತತ್ವಪದಗಳು, ಸುಗ್ಗಿಯ ಹಾಡುಗಳು ಹೀಗೆ ಹೆಸರು ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಆಗಬಹುದು.

ರೈತಾಪಿ ಬದುಕಿನ ಮಧ್ಯ ಕೋಲು ಮೇಳವನ್ನು ಸಂಘಟಿಸಿ ರಾಜ್ಯದ ಹೆಸರಾಂತ ಸಾಂಸ್ಕೃತಿಕ ಸಮಾವೇಶಗಳಲ್ಲಿ ಕೋಲಾಟ ಪ್ರದರ್ಶಿಸಿದ ಹಿರಿಮೆಗೆ ಪಾತ್ರರಾದವರು. ಚಿಕ್ಕಂದಿನಲ್ಲಿ ಗಾಯನದ ಆಟಗಳ ಒಲವಿದ್ದ ಸಾಯಬಣ್ಣನವರು ಊರಿಗೆ ದೊಡ್ಡಾಟ, ಸಣ್ಣಾಟಗಳು ಬಂದರೆ ರಾತ್ರಿ ಇಡೀ ಅವುಗಳನ್ನು ನೋಡಿ ಹಗಲಿನ ವೇಳೆ ಅವರಲ್ಲಿ ಸೇರಿ ಅವರ ಸೇವೆ ಮಾಡಿ ಅವರ ಮನಗೆದ್ದು ಅವರಲ್ಲೊಂದಾಗಿ ಎಲ್ಲವನ್ನು ಕಲಿಯುತ್ತಿದ್ದರು. ಹಾಡಿ ಹಾಡಿ ರಾಗ ಉಗುಳಿ ಉಗುಳಿ ರೋಗ ಎಂಬ ಗಾದೆಯಂತೆ

ದೊಡ್ಡಾಟ, ಸಣ್ಣಾಟದ ಹಿಮ್ಮೇಳ, ಮುಮ್ಮೇಳಗಳೆರಡರ ಜೊತೆಗೂ ಹಾಡುತ್ತಿದ್ದುದುಂಟು. ನೂರಾರು ಹಾಡುಗಳನ್ನು ಹಾಡಿದ ಇವರು ಜನಪದ ಸಾಹಿತ್ಯದ, ಜನಪದ ಸಂಗೀತದ ಪರಿಣಿತರಾಗಿದ್ದಲ್ಲದೆ ಹೊಸ ಹೊಸ ಹಾಡುಗಳನ್ನು ರಚಿಸಿ, ತಮ್ಮದೇ ಆದ ಧಾಟಿಗಳನ್ನು ಬೆಳೆಸಿ ಜನಮನವನ್ನು ಸೆಳೆದಿದ್ದಾರೆ.

ಕೋಲಾಟದ ತಂಡಗಳಲ್ಲಿ ಅನೇಕ ಗ್ರಾಮಗಳ ಯುವಕರಿಗೆ ನೆಲೆ ಬೆಲೆಗಳನ್ನು ತಂದುಕೊಟ್ಟು, ಹಬ್ಬ ಹರಿದಿನಗಳಲ್ಲಿ, ಕಲಾ ಉತ್ಸವಗಳಲ್ಲಿ ಕೋಲಾಟ, ಆಡಿಸಿದ್ದಾರೆ. ಮೊಹರಂ ಪದಗಳ ಸರದಾರನೂ ಹೌದು. ಮೊಹರಂದಲ್ಲಿ ಲೇಜಿವ್ ಮಾಡಿಸುವುದರ ಮೂಲಕ ಮೊಹರಂ ಪದಗಳ ಪೋಷಕನಲ್ಲದೆ ಗೆಜ್ಜೆ ಹಿಡಿದು ಲೇಜಿಮ್ ಹಿಡಿದು ಗೆಜ್ಜೆ ಕಾಲುಗಳನ್ನು ಎತ್ತಿಡುತ್ತಾ ಕುಣಿದರೆ ಜನ ಇಂದಿಗೂ ಸಂತಸ ಪಡುತ್ತಾರೆ. ತತ್ವಪದಗಳನ್ನು ಸುಗ್ಗಿಯ ಹಾಡುಗಳನ್ನು, ಬುಲಾಯಿ ಹಾಡುಗಳನ್ನು ತಮ್ಮ ಕೃಷಿ ಕೆಲಸದೊಂದಿಗೆ, ಕೆಲಸ ಮಾಡುವ ವೇಳೆಯಲ್ಲಿ ಬೇರೆಯವರಿಗೆ ಹೇಳಿ ಕೊಡುವ ಪರಿಪಾಠ. ಚಿಂಚೋಳಿ ತಾಲೂಕಿನ ಜಾನಪದ ಕಲಾವಿದರು ಎಂಬ ಪುಸ್ತಕ ಪ್ರಕಟಿಸಲು ಸಂಸ್ಕೃತಿ ಇಲಾಖೆಯ ಆದೇಶದ ಮೇರೆಗೆ ಶ್ರೀ ಈಶ್ವರಯ್ಯ ಕೋಡಂಬಲ್ ಅವರು ಸಾಯಬಣ್ಣನ ಅಪರೂಪದ ಜನ ಮೆಚ್ಚುಗೆಯ ಮಾತುಗಳನ್ನಾಡಿರುವುದು ಹೆಮ್ಮೆಯ ವಿಷಯ. ಈಶ್ವರಯ್ಯ ಕೋಡಂಬಲ್ ಅವರು ಚಿಂಚೋಳಿ ತಾಲೂಕಿನ ಜಾನಪದ ಕಲಾವಿದರು, ಅವರಿಂದ ಜನಪದ ಸಾಹಿತ್ಯ ಸಂಗ್ರಹಿಸಿ ಜನಪದ ಲೋಕಕ್ಕೆ ಅಪಾರ ಸೇವೆ ಗೈದಿದ್ದಾರೆ. ಅವರ ಸೇವೆ ಜನಪದ ಲೋಕ ಉಳಿಯುವ ಬೆಳೆಯುವ ನಿಟ್ಟಿನಲ್ಲಿ ಅಪಾರ ಸೇವೆ ಸಂದಿದೆ.

ಕನ್ನಡ ಸಾಹಿತ್ಯ ಪರಿಷತ್ತು ಗುಲಬರ್ಗಾ, ಕುಟುಂಬ ಕಲ್ಯಾಣ ಯೋಜನೆ, ಸಾಕ್ಷರತಾ ಮಿತ್ರ ಯೋಜನೆಗಳಂತಹ ಜನಪದ ಕಲಾ ಮೇಳಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಲ್ಲದೆ ಆಕಾಶವಾಣಿ ದೂರದರ್ಶನ ಕಲಾವಿದರೂ ಹೌದು.

ತನಗಾಗಿ ಏನನ್ನೂ ಮಾಡಿಕೊಳ್ಳದ ಈ ಹಾಡು ಹಕ್ಕಿ ಇಳಿವಯಸ್ಸಿನಲ್ಲಿ ಜನಪದ ಕಲೆಗಾಗಿ ಶ್ರಮಿಸುತ್ತಿರುವ ಈ ಕಲಾವಿದ. ಕಲೆಗಾಗಿ ನಾನು ಹುಟ್ಟಿ ಬಂದಿದ್ದೇನೆ. ಹಾಡುವುದೊಂದೇ ನನ್ನ ಗುರಿ ಎಂದು ಹೇಳುವ ಸಾಯಬಣ್ಣನವರ ಕಲೆಯ ಬಗ್ಗೆ ಅಪಾರ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಸಾಯಬಣ್ಣ ದಾಸ
ಅಂಚೆ : ಚಿಮ್ಮಾ ಇದಲಾಯಿ
ತಾ : ಚಿಂಚೋಳಿ, ಜಿ : ಗುಲಬರ್ಗಾ

# ಶ್ರೀಮಂತ ಆಲ್ದಿ

ಡೊಳ್ಳು ಕುಣಿತ, ಡೊಳ್ಳಿನ ಹಾಡು ಕರ್ನಾಟಕ ಜನಪದ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಡೊಳ್ಳಿನ ಪದ ಹಾಡುವವರು ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ ಸಿಗುತ್ತಾರೆ. ಡೊಳ್ಳು ಕಲೆಯಿಂದ ಗುಲಬರ್ಗಾ ಜಿಲ್ಲೆಗೆ ಖ್ಯಾತಿ ತಂದು ಕೊಟ್ಟವರೆಂದರೆ ಶ್ರೀ ಶ್ರೀಮಂತ ಅಲ್ದಿ ಅವರೂ ಒಬ್ಬರು.

ಮಹಾರಾಷ್ಟ್ರದ ಗಡಿಗೆ ಅಂಟಿಕೊಂಡಿರುವ ಗುಲಬರ್ಗಾ ಜಿಲ್ಲೆ ಆಳಂದ ತಾಲೂಕಿನ ಮಾದನ ಹಿಪ್ಪರಗಾ ಅಲ್ಲಿ ಅವರ ಕಾರ್ಯ ನೆಲೆ. ತಮ್ಮ ಕ್ರಿಯಾಶೀಲ ಸಂಘಟನೆಯಿಂದಾಗಿ ಇಡೀ ಗ್ರಾಮವನ್ನೇ ಡೊಳ್ಳು ಕಲಾ ಗ್ರಾಮವಾಗಿಸಿದ ಶ್ರೇಯಸ್ಸಿಗೆ ಪಾತ್ರರಾಗಿರುವ ಶ್ರೀ ಆಲ್ದಿ ಅವರು ಡೊಳ್ಳು ಬಾರಿಸುವ, ಕುಣಿಯುವ ಹಾಗೂ ಡೊಳ್ಳಿನ ಹಾಡು ಹಾಡುವ ಅದ್ಭುತ ಕಲಾವಿದರು. ತಮ್ಮ ಪೂರ್ವ ಪರಂಪರೆಯೂ ಸೇರಿದಂತೆ ಒಟ್ಟು ಕುಟುಂಬವೇ ಡೊಳ್ಳು ಕಲೆಯ ಪ್ರಸರಣದಲ್ಲಿ ನಿರತವಾಗಿದೆ.

ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾಗಿ ಸೇವೆ ಸಲ್ಲಿಸಿದ ಪ್ರತಿಭಾವಂತರು. ೬೫ ವಯಸ್ಸಿನ ಶ್ರೀಮಂತ ಆಲ್ದಿಯವರು ಸರಳ, ಮೃದು ಸ್ವಭಾವದವರು. ಹೆಚ್ಚಿಗೆ ಸದಾ ಕಲೆಯ ಚಿಂತನೆಯಲ್ಲಿರುವ ಆಲ್ದಿಯವರು ರಾಜ್ಯಮಟ್ಟದ ಖ್ಯಾತಿ ಪಡೆದ ಶ್ರೀಮಂತ ಆಲ್ದಿಯವರು ಬೀರಲಿಂಗೇಶ್ವರ ಡೊಳ್ಳಿನ ಸಂಘ ಸ್ಥಾಪಿಸಿ ಅದಕ್ಕೊಂದು ಸ್ವರೂಪ ಕೊಟ್ಟಿದ್ದು ೪೦ ವರ್ಷಗಳ ಹಿಂದೆಯೆ. ಯುವಕರು, ಮಧ್ಯ ವಯಸ್ಸಿನವರ ಹಿರಿಯರೂ ಸೇರಿದಂತೆ ಇವರ ತಂಡದಲ್ಲಿ ಲೆಕ್ಕವೇ ಇಲ್ಲಾ. ಯಾವ ಘಳಿಗೆಗಾದರೂ ಸರಿ ಇವರು ಕಾರ್ಯಕ್ರಮ ನೀಡಲು ಸಿದ್ಧರು. ಮಾದನ ಹಿಪ್ಪರಿಗಿಯಲ್ಲಿ ಬೀರಲಿಂಗೇಶ್ವರ ಗುಡಿ ಸ್ಥಾಪಿಸಿ ಲಕ್ಷೋಪಲಕ್ಷ ಭಕ್ತಾದಿಗಳ ಮನದಿಚ್ಛೆ ಪೂರೈಸುವಂತೆ ಮಾಡಿದ ಪುಣ್ಯ ಇವರಿಗೆ ಸಲ್ಲುತ್ತದೆ.

ಹಾಲುಮತ ಪುರಾಣವನ್ನು ಸೊಗಸಾಗಿ ಹಾಡುವ ಇವರು ಡೊಳ್ಳು ಕಲೆಗೆ ಹೊಸ ರೂಪ ನೀಡಿದ ಖ್ಯಾಲಿ ಮಾರ್ಗ, ದುಮಾಲಿ ಹೀಗೆ ವಿವಿಧ ಮೆಟ್ಟುಗಳನ್ನು ರೂಪಿಸಿ ವೈವಿಧ್ಯತೆ ತಂದಿದ್ದಾರೆ. ರಾಜ್ಯ ಹೊರ ರಾಜ್ಯಗಳಲ್ಲಿ ಡೊಳ್ಳು ಪ್ರದರ್ಶಿಸಿರುವ ಇವರು ಮಹಾರಾಷ್ಟ್ರದಲ್ಲೂ ಜನಪ್ರಿಯ ಕಲಾವಿದರು. ಯಳಸಂಗಿ, ಖಾನಾಪುರ, ಅಫಜಲಪೂರ ಮೊದಲಾದ ಕಡೆ ಡೊಳ್ಳು ಸಂಘ ಕಟ್ಟಿ ಡೊಳ್ಳು ಹಾಡು, ಕುಣಿತ ಕಲಿಸುವ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಇವರ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದೆ.

ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ ಗೌರವಗಳನ್ನು ಪಡೆದಿರುವ ಶ್ರೀಮಂತ ಖೇಮಣ್ಣ ಆಲ್ದಿ ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೪ರ ಸಾಧನಾ ಪ್ರಶಸ್ತಿ ನೀಡಿ ಗೌರವಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಸೊಲ್ಲಾಪುರದ ಗಡಿನಾಡು ಕನ್ನಡ ಜಾಗೃತಿ ಸಮಾವೇಶಗಳಲ್ಲಿ ರಾಜ್ಯಾದ್ಯಂತ ಕಾರ್ಯಕ್ರಮ ನೀಡಿದ ಹೆಗ್ಗಳಿಕೆ ಇವರದು. ೪೦ ವರ್ಷಗಳ ಕಾಲ ಇವರ ಸೇವೆ ಅನನ್ಯ ಆಗಾಧವಾದುದು.

ಶ್ರೀಮಂತ ಆಲ್ದಿ
ಅಂಚೆ : ಮಾದನ ಹಿಪ್ಪರಗಾ
ತಾ : ಆಳಂದ, ಜಿ : ಗುಲಬರ್ಗಾ

# ಅಂಬುಬಾಯಿ ರುದ್ರಪ್ಪ ಬಡಿಗೇರ

ತಂದೆ ರಾಚಪ್ಪ ದೊಡ್ಡಾಟದ ಹಿಮ್ಮೇಳದ ಕಲಾವಿದ. ತಾಯಿ ಸಾವಿತ್ರಮ್ಮ ಕೂಡಾ ಕಲಾವಿದೆ. ಸಂಗೀತ ಪ್ರೇಮಿ. ಇಂಥ ಕಲಾವಿದರ ಮನೆತನದಲ್ಲಿ ಹುಟ್ಟು ಕಲಾವಿದೆಯಾಗಿ ಅಂಬುಬಾಯಿ ಜನಿಸಿದ್ದು ೨೯-೫-೧೯೪೪ರಲ್ಲಿ ಗುಲಬರ್ಗಾದಲ್ಲಿ. ಹೆಮ್ಮೆಯ ವಿಷಯವೆಂದರೆ ಪ್ರಖ್ಯಾತ ದೊಡ್ಡಾಟದ ಪುರವಂತಿಕೆ ಕಲಾವಿದರಾದ ಮೋನಪ್ಪ ಸುತಾರ ಅವರ ಸಂಬಂಧಿ ಅಲ್ಲದೆ ಅವರ ಒಡನಾಟದಲ್ಲಿ ಬೆಳದವರು. ಅವರ ಮಾರ್ಗದರ್ಶನದಲ್ಲಿ ಕಲೆಯನ್ನು ಬೆಳೆಸಿದರು. ಬಸಯ್ಯಸ್ವಾಮಿ ಹಾಗೂ ಮೋನಪ್ಪನವರ ಪ್ರೇರಣೆ ಹಾಗೂ ಆಶೀರ್ವಾದದಿಂದ ದೊಡ್ಡಾಟದಲ್ಲಿ ಹಿಮ್ಮೇಳದ ಕಲಾವಿದೆಯಾಗಿ ಬೆಳೆಯಲು ಕಾರಣವಾಯಿತು. ತಂದೆ ರಾಚಪ್ಪ ವೃತ್ತಿಯಲ್ಲಿ ಅಕ್ಕಸಾಲಿಗರು. ಪ್ರವೃತ್ತಿ ಜಾನಪದ ಕಲೆ. ಜಾನಪದ ಸಂಗೀತ ಸೇವಾ ಮನೋಭಾವನೆಯುಳ್ಳವರು. ಗುಲಬರ್ಗಾದ ಎಂ.ಎಸ್.ಕೆ.ಮಿಲ್‌ನಲ್ಲಿ ದುಡಿಯುವ ಕಾರ್ಮಿಕ ಜನರಿಗೆ ತಮ್ಮ ಸಂಗೀತ ಸೇವೆಯಿಂದ ಮನ ತಣಿಸುತ್ತಿದ್ದರು. ಮಿಲ್ಲಿನಲ್ಲೂ ಪ್ರತಿದಿನ ಎರಡು ಹೊತ್ತು ಸಂಗೀತ ಕಚೇರಿ ನಡೆಸುತ್ತಿದ್ದರು. ತಂದೆ ತಬಲಾ ; ಬಸಯ್ಯಸ್ವಾಮಿಯವರು, ಹಾರ್ಮೋನಿಯಂ ಅಂಬುಬಾಯಿ ತಮ್ಮ ಮಧುರ ಕಂಠದಿಂದ ಹಾಡಿ ಕಾರ್ಮಿಕರ ದಣಿವಾರಿಸಿ ಪ್ರೀತಿಗೆ ಪಾತ್ರರಾಗುತ್ತಿದ್ದರು. ಗಣೇಶ ಉತ್ಸವ, ದಸರಾ ಉತ್ಸವ, ದೀಪಾವಳಿ, ಅಗಸ್ಟ್ ೧೫, ನವೆಂಬರ್ ೧೪, ನವೆಂಬರ್ ೧ರಂದು ಹೀಗೆ ಹತ್ತು ಹಲವು ಉತ್ಸವಗಳಲ್ಲಿ ಅಂಬುಬಾಯಿ ಹಾಡುಗಾರಿಕೆ ಇದ್ದೇ ಇರುತ್ತಿತ್ತು.

ಚಿಕ್ಕಂದಿನಲ್ಲೆ ಕಲೆ ಬೆಳೆಸಿಕೊಂಡ ಅಂಬುಬಾಯಿ ಓದಿನಲ್ಲೂ ಅಷ್ಟೇ ಚುರುಕು ೧೦ನೇ ತರಗತಿವರೆಗೆ ಓದಿದ ಅವರಿಗೆ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುವ ಅವಕಾಶ. ಗುಲಬರ್ಗಾದ ದೊಡ್ಡಪ್ಪ ಅಪ್ಪ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಪೆಂಟರಿ ಇನಸ್ಟ್ರಕ್ಟರ್ (ಸಹಬೋಧಕ)ರಾಗಿ ಕೆಲಸ ಮಾಡುತ್ತಿದ್ದ

ಕುಸನೂರಿನ ರುದ್ರಪ್ಪ ಬಡಿಗೇರ ಅವರನ್ನು ಮದುವೆಯಾಗಿ ಗುಲಬರ್ಗಾದಲ್ಲೆ ಉಳಿದರು ರುದ್ರಪ್ಪನವರು ಕಾಲೇಜಿನಲ್ಲಿ ಕೆಲಸ ಮಾಡುವುದಲ್ಲದೆ ತಮ್ಮ ವಂಶ ಪರಂಪರೆಯಾದ ಬಡಿಗತನ ಕಟ್ಟಿಗೆಯಲ್ಲಿ ಕರಕುಶಲತೆ ಉಳಿಸಲು,ಸ್ವಂತ ಉದ್ಯೋಗವನ್ನು ಮಾಡುತ್ತಿದ್ದರು. ಅಂಬುಬಾಯಿಯವರಿಗೆ ಪ್ರೋತ್ಸಾಹ ನೀಡಿದರು.

ಭಜನೆ, ಸೋಬಾನ ಪದ ಸಂಪ್ರದಾಯದ ಹಾಡುಗಳು, ಇವರ ಜಾನಪದ ಕಲೆಗಳು, ಸಂಘಟನಾಕಾರರಾದ ಇವರು ಸಂಘ ಸಂಸ್ಥೆಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

೧. ಮನಿಷಾ ಮಹಿಳಾ ಮಂಡಳ ಸದಸ್ಯರು.

೨. ಸರ್ವಜ್ಞ ಜಾನಪದ ಕಲಾ ವೃಂದ ಗುಲಬರ್ಗಾ, ಸದಸ್ಯರು.

ವಾರ್ತಾ ಮತ್ತು ಪ್ರಚಾರ ಇಲಾಖೆಯ ವತಿಯಿಂದ ಕಾರ್ಯಕ್ರಮಗಳನ್ನು ನೀಡಿದ್ದಾರೆ ಶರಣಬಸವೇಶ್ವರ ಸಂಸ್ಥಾನದಲ್ಲಿ ಶ್ರಾವಣ ತಿಂಗಳ, ಹಬ್ಬ ಹರಿದಿನಗಳಲ್ಲಿ ಭಜನೆ ಸೇವೆ ಮಾಡಿ ದೊಡ್ಡಪ್ಪ ಅಪ್ಪ ಅವರಿಂದ ಗೌರವಿಸಿಕೊಂಡಿದ್ದಾರೆ.

ಗುಲಬರ್ಗಾದ ಕೋಟನೂರ ಯಲ್ಲಾಲಿಂಗೇಶ್ವರ ಮಠಾಧೀಶ್ವರಿಂದ ಗೌರವ ಸನ್ಮಾನ

ಕೋರಂಟಿ ಹನುಮಾನ ದೇವಸ್ಥಾನದಲ್ಲಿ ಗೌರವ ಸನ್ಮಾನ.

ಮಹಾಂತ ಪ್ರತಿಷ್ಠಾನದಿಂದ ಗಾನ ಕೋಗಿಲೆ ಬಿರುದು ಸನ್ಮಾನ

ಮಾದನ ಹಿಪ್ಪರಗಾ ಶ್ರೀ ಶಿವಲಿಂಗ ಸ್ವಾಮಿಗಳ ಸನ್ನಿಧಿಯಲ್ಲಿ ಕಾರ್ಯಕ್ರಮ ನೀಡಿ ಗೌರವ ಪಡೆದಿದ್ದಾರೆ

ವೃತ್ತಿಯಲ್ಲಿ ಶಿಕ್ಷಕರಾಗಿದ್ದುದರಿಂದ ಶಾಲೆಯಲ್ಲಿ ಪ್ರತಿವರುಷ ಪ್ರತಿ ಹಬ್ಬ ಹರಿದಿನದಂದು ವೇಷ ಭೂಷಣದೊಂದಿಗೆ ಮಕ್ಕಳಿಗೆ ನಾಡಗೀತೆ, ದೇಶ ಭಕ್ತಿ ಗೀತೆ, ಕಲಿಸಿ ರಾಷ್ಟ್ರೀಯ ಪ್ರಜ್ಞೆ ಭಾವೈಕ್ಯತೆ ಕಾರ್ಯಕ್ರಮಗಳನ್ನು ಕಲಿಸಿ ಉತ್ತಮ ಶಿಕ್ಷಕಿಯಾಗಿ ಹೆಸರು ಪಡೆದಿದ್ದಾರೆ. ಅತ್ತೆಯ ಜೊತೆ ಮನೆಯಲ್ಲಿ ಬೀಸುವಾಗ, ಹಾಡುಗಳನ್ನು ಹೇಳುತ್ತ, ಕುಟ್ಟುವ, ಬೀಸುವ ಪದಗಳಲ್ಲೂ ಪರಿಣಿತರು.

ಅಂಬುಬಾಯಿ ಆರ್. ಬಡಿಗೇರ್
ಗಣೇಶ ಕೃಪಾ, ಮ. ನಂ. ೧೦–೨–೮೫ ಜಿ.
ಕೋರ್ಟ ರಸ್ತೆ, ಗುಲಬರ್ಗಾ

## ಶಕುಂತಲಾ ಮುತ್ತಗಿ

ಶ್ರೀಮತಿ ಶಕುಂತಲಾ ಮುತ್ತಗಿಯವರು ಜನಿಸಿದ್ದು ೧೫-೬-೧೯೪೪ರಲ್ಲಿ. ಗುಲಬರ್ಗಾ ಜಿಲ್ಲೆಯ ಜೇವರ್ಗಿಯ ಶ್ರೀ ಮಲ್ಲಿಕಾರ್ಜುನಪ್ಪ ಸಾಹು (ಸಾಹುಕಾರ) ಗೋಗಿ ಮತ್ತು ಶ್ರೀಮತಿ ಗಂಗಮ್ಮನವರ ಉದರದಲ್ಲಿ. ಶ್ರೀ ಮಲ್ಲಿಕಾರ್ಜುನಮಪ್ಪ ಸಾಹು ಅವರು ತಮ್ಮ ಗಳಿಕೆಯ ದುಡ್ಡನ್ನು ಸತ್ಕಾರ್ಯಕ್ಕಾಗಿ ಉಪಯೋಗಿಸುವದು ಇವರ ದೊಡ್ಡ ಗುಣ. ತಮ್ಮ ಸಂಪತ್ತನ್ನು ಉಪಯೋಗಿಸಿದ್ದು ಆಧ್ಯಾತ್ಮದ ಸೇವೆಗಾಗಿ. ಊರಲ್ಲಿ, ಮನೆಯಲ್ಲಿ ಶ್ರಾವಣ ತಿಂಗಳ ಪೂರ್ತಿ, ಹಬ್ಬ ಹರಿದಿನಗಳಲ್ಲಿ ಪುರಾಣ, ಪ್ರವಚನ, ಕೀರ್ತನೆ ಮತ್ತು ಭಜನೆಗಳಲ್ಲಿ ಜೇವರ್ಗಿ ತಾಲೂಕಿನ ಎಲ್ಲ ಸದ್ಭಕ್ತರ ಸಮೂಹವನ್ನೇ ಆಧ್ಯಾತ್ಮದೆಡೆಗೆ ಕೊಂಡೊಯ್ಯುವ ಪುಣ್ಯಾತ್ಮರು. ಅವರಿಗೆ ತಕ್ಕ ಪತ್ನಿಯಾಗಿ ಶ್ರೀಮತಿ ಗಂಗಮ್ಮನವರೂ ಸಹ ಆಧ್ಯಾತ್ಮದ ಸೇವೆಯಲ್ಲಿ ಪತಿಯೊಡನೆ ಸಹಯೋಗದಿಂದ ನಡೆದವರು. ಅಲ್ಲದೆ ಅವರ ಜನಪದ ಕಲೆಯಾದ ಹಾಡುಗಾರಿಕೆಯನ್ನು ಮದುವೆ, ಬೀಸುವ, ಕುಟ್ಟುವ, ಸೋಬಾನ ಪದಗಳನ್ನು ದಿನಗಟ್ಟಲೇ ಹಾಡುವ ಕಲಾವಿದೆ. ಅಂಥವರ ಉದರದಲ್ಲಿ ಹದಿನಾಲ್ಕು ಮಕ್ಕಳನ್ನು ಪಡೆದ ತಂದೆ-ತಾಯಿಗಳಿಗೆ ಶಕುಂತಲಾ ಎರಡನೆಯವರು. ಇನ್ನುಳಿದ ಹನ್ನೆರಡು ಜನ ತಮ್ಮ ತಂಗಿಯರನ್ನು ಬೆಳೆಸುವಲ್ಲಿ ಮನೆಯ ಜವಾಬ್ದಾರಿಯೊಂದಿಗೆ ತಾಯಿಯಿಂದ ವಂಶ ಪರಂಪರೆಯಾಗಿ ಬಂದಂಥ ಹಾಡುಗಾರಿಕೆಯನ್ನು ಮುಂದುವರೆಸಿಕೊಂಡು ರಾಜ್ಯ ರಾಷ್ಟ್ರಮಟ್ಟದವರೆಗೆ ಗುರುತಿಸಿಕೊಂಡರು.

ಮನೆಯಲ್ಲಿ ನಡೆಯುವ ಪ್ರವಚನಗಳಲ್ಲಿ ಇವರ ಭಕ್ತಿಗೀತೆಗಳು, ತತ್ವಪದಗಳು ಇರದೇ ಇರುತ್ತಿರಲಿಲ್ಲ. ತಂದೆಗೆ ಆಧ್ಯಾತ್ಮದ ನಿಲುವಿನೊಡನೆ ರಾಜಕಾರಣಿಗಳೊಂದಿಗೆ ನಿಕಟ ಸಂಪರ್ಕ. ರಾಜ್ಯದ ರಾಜನೀತಿ, ಆಡಳಿತ ರೂಪಿಸುವಲ್ಲಿಯೂ ಸಹಾಯ ಮಾಡುತ್ತಿದ್ದರು. ಅಂತಹ ಸಭೆ ಸಮಾರಂಭಗಳಿಗೆ ಶಕುಂತಲಾ ಅವರನ್ನು ಕರೆದೊಯ್ದು

ಅಲ್ಲಿ ಸ್ವಾಗತ ಗೀತೆ ಮತ್ತು ದೇಶಭಕ್ತಿಗೀತೆಗಳನ್ನು, ಜಾನಪದ ಗೀತೆಗಳನ್ನು ಹಾಡಲು ಪ್ರೋತ್ಸಾಹಿಸುತ್ತಿದ್ದರು. ಓದಿನಲ್ಲೂ ಹಿಂದೆ ಬೀಳದ ಶಕುಂತಲಾ ಮುಂದಾಳತ್ವ ವಹಿಸಿ ಆಟ–ಪಾಠಗಳಲ್ಲಿ, ಸಾಂಸ್ಕೃತಿಕ ಉತ್ಸವಗಳಲ್ಲಿ, ನೃತ್ಯ, ಹಾಡುಗಾರಿಕೆ, ದೇಶಭಕ್ತಿ ನಾಟಕಗಳಲ್ಲಿ, ಐತಿಹಾಸಿಕ ನಾಟಕಗಳಲ್ಲಿ (ಮಹಾಭಾರತದಲ್ಲಿ ಕರ್ಣನ ಪಾತ್ರ) ಗಂಡು ಪಾತ್ರಗಳನ್ನು ಮಾಡಿ ಸೈ ಎನಿಸಿಕೊಂಡಿದ್ದರು. ಇವರ ಕಲಾ ನೈಪುಣ್ಯತೆ ಮುಂದೆ ಜಾನಪದ ಲೋಕದಲ್ಲಿ ಗುರುತಿಸುವಂತಾಯಿತು. ೧೨ನೇ ಶತಮಾನದ ಕ್ರಾಂತಿಕಾರಿ ಶ್ರೀ ಬಸವಣ್ಣನವರ ಸಮಕಾಲೀನರಾದ ಶ್ರೀ ಷಣ್ಮುಖ ಶಿವಯೋಗಿಗಳು ಜನಿಸಿದ ಜೇವರ್ಗಿ ಷಣ್ಮುಖ ಶಿವಯೋಗಿಗಳ ಮಠಾಧೀಶರಾದ ಶ್ರೀ ಶಾಂತಲಿಂಗ ಮಹಾಸ್ವಾಮಿಗಳ ಆಶೀರ್ವಾದ, ಹಾರೈಕೆಗಳೊಂದಿಗೆ ಶ್ರೀಮತಿ ಶಕುಂತಲಾ ಅವರು ೧೨ನೇ ವಯಸ್ಸಿನಲ್ಲಿಯೇ ೧೮ ವರ್ಷದ ಶ್ರೀ ಗುರಣ್ಣಾ ಮುತ್ತಗಿ ಅವರನ್ನು ಮದುವೆಯಾಗಿ ಆಂಧ್ರ ಮತ್ತು ಕರ್ನಾಟಕದ ಗಡಿ ಪ್ರದೇಶವಾದ ಗುರುಮಠಕಲ್ಲಿಗೆ ಬಂದರು. ಇವರ ಸಂಪ್ರದಾಯ ಹಾಡುಗಾರಿಕೆಯ ಆಲಿಸಿದ ಗುರುಮಠಕಲ್ಲಿನ ಮಠಾಧೀಶರಿಂದಲೂ ಆಶೀರ್ವಾದ ಹಾರೈಕೆಗಳನ್ನು ಪಡೆದರು.

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಗುಲಬರ್ಗಾದಲ್ಲಿಯೇ ನೆಲೆ ನಿಂತು ಗುಲಬರ್ಗಾದ ಜಾನಪದ ಕಲಾವಿದರೂ, ಅಕಾಡೆಮಿಯ ಸದಸ್ಯರೂ ಆದ ಶ್ರೀಮತಿ ಗಿರಿಜಾ ಕರ್ಪೂರ ಅವರೊಂದಿಗೆ ಬೆರೆತು ಜಾನಪದ ಕಲೆಯನ್ನು ಬೆಳೆಸುವಲ್ಲಿ, ಉಳಿಸುವಲ್ಲಿ ಸಹಾಯವಾದರು. ಗುಲಬರ್ಗಾದ ಸಿದ್ಧಾರೂಢ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಆಶೀರ್ವಾದ, ಗೌರವ, ಸನ್ಮಾನವನ್ನು ಪಡೆದಿದ್ದಾರೆ. ಅವರು ಸಿದ್ಧಾರೂಢ ಮಠದ ಶ್ರೀ ಶ್ರದ್ಧಾನಂದ ಸ್ವಾಮಿಯವರ ತತ್ವಪದ–ರತ್ನಮಾಲಾ ಎಂಬ ತತ್ವಪದಗಳ ಹೊತ್ತಿಗೆಯನ್ನು ಹೊರ ತರುವಲ್ಲಿ ಸಹಾಯವಾಗುವುದಲ್ಲದೆ ಅವುಗಳಲ್ಲಿ ಬಹುತೇಕ ಹಾಡುಗಳನ್ನು ಹಾಡಿ, ಹಾಡಿಸಿ, ಭಕ್ತರಿಗೆ ಭಕ್ತಿಯ ಹೊನಲನ್ನೇ ಹರಿಸಿದ್ದಾರೆ.

ಗೋದುತಾಯಿ ನಗರದ ಶಿವಮಂದಿರದಲ್ಲಿ ಶ್ರಾವಣ ತಿಂಗಳ ಪೂರ್ತಿ ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫರ ತತ್ವಪದಗಳನ್ನು ಹಾಡಿದ್ದಾರೆ. ನಾಲ್ವಾರ್ ಶ್ರೀ ಕೋರಿ ಸಿದ್ದೇಶ್ವರ ಸಂಸ್ಥಾನ ಮಠದ ಶ್ರೀ ಶ್ರೀ ಷ. ಬ್ರ. ಶ್ರೀ ತೋಟೇಂದ್ರ ಮಹಾಸ್ವಾಮಿಗಳ ಆಶೀರ್ವಾದ, ಸನ್ಮಾನ, ಗೌರವಗಳನ್ನು ಪಡೆದಿದ್ದಾರೆ. ಆಕಾಶವಾಣಿ, ದೂರದರ್ಶನ, ಜಾನಪದ ಮೇಳ, ಜಾನಪದ ಉತ್ಸವಗಳು, ಕರ್ನಾಟಕ ಜಾನಪದ ಉತ್ಸವ ದೆಹಲಿಯಲ್ಲಿ ನಡೆದಾಗ ಕುಟ್ಟುವ, ಬೀಸುವ ಪದಗಳನ್ನು ಹಾಡಿ ಅಲ್ಲಿಯೂ ಕಲಾ ಸೇವೆಯನ್ನು ಮಾಡಿದ್ದಾರೆ. ಇಂಗ್ಲೆಂಡಿದಲ್ಲಿಯೂ ಶ್ರೀಮತಿ ಗಿರಿಜಾ ಕರ್ಪೂರವರೊಂದಿಗೆ ತಮ್ಮ ಕಲೆಯನ್ನು ಪ್ರದರ್ಶಿಸಿ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಕಲಾವಿದರಾಗಿ ಬೆಳೆದವರು.

ಶ್ರೀಮತಿ ಶಕುಂತಲಾ ಗುರಣ್ಣ ಮುತ್ತಗಿ
ಮಹಾವೀರ ನಗರ, ಗುಲಬರ್ಗಾ

## ಬಸವರಾಜ ಆಲಗೂಡ

ಗೀ ಗೀ ಪದಗಳ ಸರದಾರರಾದ ೫೮ ವರ್ಷ ವಯಸ್ಸಿನ ಬಸವರಾಜ ಅವರು ಹುಟ್ಟಿದ್ದು ಅಲಗೂಡ ಗ್ರಾಮದಲ್ಲಿ. ತಂದೆ ಗುಂಡಪ್ಪ ಖ್ಯಾತ ಗೀ ಗೀ ಪದಗಳ ಕಲಾವಿದ, ತಾಯಿ ಅವ್ವಮ್ಮ, ಇವರೂ ಪತಿಯೊಡನೆ ಕಲೆಗಾಗಿ ಶ್ರಮಿಸಿದ ಕಲಾವಿದೆ. ಆಲಗೂಡ ಗ್ರಾಮ ಗುಲಬರ್ಗಾದಿಂದ ೩೦ ಕಿ. ಮಿ. ದೂರ. ತಂದೆಯೊಡನೆ ತಾಳ ಹಾಕುತ್ತಾ ಸವಾಲ–ಜವಾಬುಗಳ ಪದಗಳಲ್ಲಿ ಜವಾಬುದಾರನಾಗಿ ತನ್ನ ಎತ್ತರದ ಧ್ವನಿಯಲ್ಲಿ ಹಾಡಿ ಅಪ್ಪನಿಗಿಂತ ಒಂದು ಕೈ ಮೇಲೆಯೇ ಇರುತ್ತಿದ್ದ. ಮೊದಲು ಅಪ್ಪನಿಂದ ಕಲಿತು, ಆಳಂದ ತಾಲೂಕಿನ ಖ್ಯಾತ ಗೀ ಗೀ ಪದಕಾರನಾದ ದೇಗಾಂವ ಹನುಮಂತಪ್ಪನವರನ್ನು ಗುರುಗಳನ್ನಾಗಿ ಸ್ವೀಕರಿಸಿ ೨–೩ ವರ್ಷಗಳ ಕಾಲ ಸತತ ಅಭ್ಯಾಸ. ಇನ್ನೊಬ್ಬ ಗುರುಗಳಾದ ಶಿವಶರಣಪ್ಪ ದೇಗಾಂವ ಆವರಂತೂ ಬಸವರಾಜರ ಮನೆಯಲ್ಲಿ ಬಂದು ಉಳಿದು ತಮ್ಮ ಎಲ್ಲ ವಿದ್ಯೆಯನ್ನು ಧಾರೆಯೆರೆದರು. ಬಹಳ ದಿನಗಳವರೆಗೆ ಬಸವರಾಜನನ್ನು ತಮ್ಮ ಕಾರ್ಯಕ್ರಮದಲ್ಲಿ ಕರೆಸಿಕೊಂಡು ಹಾಡುಗಾರಿಕೆಯ ಬೆಳವಣಿಗೆಯನ್ನು ನೋಡಿ ತೃಪ್ತಿ ಪಡುತ್ತಿದ್ದರು. ಬದುಕು ಬಡತನವಾದರೂ ಕಲಾ ಶ್ರೀಮಂತಿಕೆ ಇವರನ್ನು ತೃಪ್ತರನ್ನಾಗಿಸಿದೆ. ಅವ್ವನ ಜೊತೆ, ಮಕ್ಕಳ ಜೊತ ಅಣ್ಣ ತಮ್ಮಂದಿರ ಜೊತೆ ಹೊಲಗಳಲ್ಲಿ ಕೆಲಸ ಮಾಡುವಾಗ ತಮ್ಮ ಕಲೆಯ ಕಲಿಕೆ. ತಂದೆಯವರಿಂದ ಬಂದಂಥ ಕಲೆಯನ್ನು ಮುಂದುವರಿಸುವಲ್ಲಿ ತಮ್ಮನ ಕೈಯಲ್ಲಿ ತುಂತುಣಿ, ಮಗನ ಕೈಯಲ್ಲಿ ತಾಳ ಕೊಟ್ಟು ಹಾಡುಗಾರಿಕೆಗೆ ಇನ್ನಿಬ್ಬರ ಜೊತೆ ಮಾಡಿಕೊಂಡು ತಮ್ಮ ಕಾರ್ಯಕ್ರಮಗಳನ್ನು ಗಟ್ಟಿಯಾಗಿಸುವಲ್ಲಿ ಮಹತ್ತರ ಸಾಧನೆ ಗೈದವರು.

ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಸೊಲ್ಲಾಪುರದ ಗಡಿನಾಡು

ಕನ್ನಡ ಜಾಗೃತಿ ಸಮಾವೇಶಗಳಲ್ಲಿ ಕಾರ್ಯಕ್ರಮ ನೀಡಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಹರದೇಶಿ–ನಾಗೇಶಿ, ಕಲ್ಲಿ ತುರಾಯಿ ಪದಗಳು ಇವರ ಕಲಾಪ್ರತಿಭೆಯು ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತವೆ.

ಬೆಂಗಳೂರು ಅಂಬೇಡ್ಕರ್ ಭವನದಲ್ಲಿ ಅಂಬೇಡ್ಕರ್ ಸುವರ್ಣ ಮಹೋತ್ಸವದಲ್ಲಿ, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ, ಗೀಗೀ ಪದಗಳಲ್ಲದೆ ಬಸವಣ್ಣವರ ವಚನಗಳು, ಬುದ್ಧನ ಪದಗಳು, ಬಾಬಸಾಹೇಬ ಅಂಬೇಡ್ಕರ್ ಪದಗಳು, ಖಾಜಾ ಬಂದೇ ನವಾಜರ ಪದಗಳು, ಶರಣಬಸವೇಶ್ವರರ ಹಾಡುಗಳನ್ನು ಹಿಂದಿ, ಕನ್ನಡ, ಮರಾಠಿ, ಭಾಷೆಗಳಲ್ಲಿ ಹಾಡಿ ಸೈ ಎನಿಸಿಕೊಂಡವರು.

ಗುಲಬರ್ಗಾದ ಶ್ರೀ ಶರಣಬಸವೇಶ್ವರ ಸಂಸ್ಥಾನದ ಶ್ರೀ ಶರಣಬಸಪ್ಪ ಅಪ್ಪಾ ಅವರಿಂದ ಸನ್ಮಾನ ಪ್ರಶಸ್ತಿ ಲಭಿಸಿದೆ.

ಅಫಜಲಪೂರ, ಆಳಂದ, ಸೇಡಂ, ಚಿಂಚೋಳಿ, ಶಹಾಪೂರ, ಸುರಪುರ, ಜೇವರ್ಗಿ, ಯಾದಗಿರಿ, ಲಿಂಗಸೂರ, ರಾಯಚೂರು, ಔರಾದ, ಕಪನೂರ, ಹರಸೂರ, ತಾವರಗೇರಾ, ಮಹಾಗಾಂವ, ಕುರಕುಂಟಾ, ಫತ್ತರಗಿ, ಗೊಬ್ಬೂರು ಮತ್ತು ಬೀದರಗಳಲ್ಲಿ ಬಹಳಷ್ಟು ಕಾರ್ಯಕ್ರಮ ನೀಡಿದ್ದಾರೆ.

ವಾರ್ತಾ ಮತ್ತು ಪ್ರಚಾರ ಇಲಾಖೆ, ಕುಟುಂಬ ಕಲ್ಯಾಣ ಯೋಜನೆ, ಸಾಕ್ಷರತಾ ಮಿತ್ರ ಯೋಜನೆಗಳಂತಹ ಜನಪದ ಕಲಾ ಮೇಳಗಳಲ್ಲಿ ಯಶಸ್ವಿ ಕಾರ್ಯಕ್ರಮ ನೀಡಿರುವರು.

ಮೋಹರಂ ಪದಗಳು, ಹಂತಿಯ ಪದಗಳಲ್ಲಿ ಇವರು ನಿಪುಣರು ಮತ್ತು ಸಂಗ್ರಹಕಾರರು. ಈಗ ಇಂತಹ ಆಧುನಿಕ ಜಗತ್ತಿನಲ್ಲೂ ಜನರು ತಮ್ಮ ತಮ್ಮ ಅಭಿರುಚಿಗಳನ್ನು ಬದಲಾಯಿಸಿಕೊಂಡು ಶೃತಿ, ಲಯಗಳ ಗಂಧವೇ ಇಲ್ಲ ಎಂದು ಮನ ನೊಂದು ತಮಗಿದ್ದ ಕಲೆಯ ಚಿಂತನೆಯನ್ನು ವ್ಯಕ್ತಪಡಿಸಿದರು.

ಬಬಲಾದಿ ಶರಣರಾದ ಶ್ರೀ ಚೆನ್ನವೀರ ಶಿವಾಚಾರ್ಯರಿಂದ ಆಶೀರ್ವಾದ ಮತ್ತು ಹಾರಕೂಡ ಮಠದ ಶ್ರೀ ಚೆನ್ನವೀರ ಶಿವಾಚಾರ್ಯರಿಂದ ಆಶೀರ್ವಾದ ಮತ್ತು ಹಾರೈಕೆಗಳನ್ನು ಪಡೆದಿದ್ದಾರೆ.

ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನಗಳನ್ನು ಪಡೆದು ಕೀರ್ತಿ ಇವರದು.

ಬಸವರಾಜ ಆಲಗೂಡ
ಗೀ ಗೀ ಪದ ಕಲಾವಿದರು
ಖೂಬಾ ಫ್ಯಾಕ್ಟರಿ ಹತ್ತಿರ
ಅಂಚೆ : ಕಪನೂರ, ತಾ : ಜಿ : ಗುಲಬರ್ಗಾ

## ವಿಠ್ಠಲರಾವ ಹನುಮಂತರಾವ ಹೊಸಗೌಡ

ಶ್ರೀ ವಿಠ್ಠಲರಾವ ಹನುಮಂತರಾವ ಹೊಸಗೌಡರು ಬೂದಿ ಮುಚ್ಚಿದ ಕೆಂಡದ ಹಾಗೆ ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ಕೊಗನೂರು ಗ್ರಾಮದಲ್ಲಿ ಭಜನಾಕಾರರಾಗಿ, ಜ್ಞಾನ ಭಂಡಾರಿಯಾಗಿ, ಜಾನಪದ ಸಂಗೀತಲೋಲನಾಗಿ ೧೯೬೮ ರಿಂದ ಇಲ್ಲಿಯವರೆಗೆ ಭಜನೆ ಮೇಳಗಳನ್ನು ತಯಾರಿಸಿ ತಮ್ಮ ಸೇವೆಯನ್ನು ಸಲ್ಲಿಸುತ್ತ ಬಂದಿದ್ದಾರೆ. ಎಲ್ಲ ಜಾನಪದ ಆಕಾಶವಾಣಿ ಕಲಾವಿದರು ಇವರ ಮಾರ್ಗದರ್ಶನದಲ್ಲಿ ಬೆಳೆದವರು. ತಮ್ಮ ಪ್ರಸಿದ್ಧಿಗಾಗಿ ಎಂದೂ ಹಪಹಪಿಸಿದವರಲ್ಲ. ಕಸದಲ್ಲಿ ರಸ ಆರಿಸಿ ತೆಗೆಯುವ ಬುದ್ಧಿವಂತಿಕೆ ಇವರದು. ಜಾನಪದ ವೈಭವವನ್ನು ತಮ್ಮ ಸ್ವಂತ ಜ್ಞಾನದಿಂದ ಬೆಳೆಸಿಕೊಂಡು ನೂರಾರು ಹಳ್ಳಿಗಳಿಗೆ ಮಾರ್ಗ ದರ್ಶಕರಾಗಿದ್ದಾರೆ.

ಇವರ ಮನೆ ಒಂದು ಗ್ರಂಥಾಲಯವೇ ಆಗಿದೆ. ಹಾಗೆ ಸಂಗೀತ ಪಾಠಶಾಲೆ, ಚಾವಡಿ, (ಪಂಚಾಯತಿ) ಕಟ್ಟೆಯೂ ಆಗಿದೆ. ಹಿರಿಯ ಜಾನಪದ ಕಲಾವಿದರ ಮಾಹಿತಿ ಮತ್ತು ಜಾನಪದ ಸಾಹಿತ್ಯವನ್ನು ಸರಸರ ನಿಮಿಷಾರ್ಧದಲ್ಲಿ ಹೇಳಿ ಬಿಡುತ್ತಾರೆ. ನೂರಾರು ಭಜನೆ ಪದಗಳನ್ನು ಹಾಡುವ ಸಾಮರ್ಥ್ಯವುಳ್ಳವರು. ಕರ್ನಾಟಕದಲ್ಲಿ ಪ್ರಸಿದ್ಧ ಜಾನಪದಕಾರರಾದ ಗುರುಲಿಂಗಯ್ಯ ಹಿತ್ತಲಶೀರೂರ – ರಾಮಲಿಂಗಯ್ಯ ಗೋಡಗಾಂವ ಇವರ ಮಾರ್ಗದರ್ಶನಲ್ಲಿ ನಡೆದವರು.

ತಂದೆ ಹನುಮಂತರಾವ ತಾಯಿ ತಾರಾಬಾಯಿ ರೈತ ಕುಟುಂಬದಲ್ಲಿ ಜನಿಸಿದ ವಿಠ್ಠಲರಾವ ಸ್ವಾತಂತ್ರ್ಯದ ಸಂಭ್ರಮದಲ್ಲಿ ನಾನು ಆರೇಳು ವರ್ಷದವನಿದ್ದೆ ಎಂದು ತಮ್ಮ ವಯಸ್ಸಿನ ಅಂದಾಜು ಹೇಳಿದರು. ನಮ್ಮ ಜನಪದ ಹಾಡುಗಳಲ್ಲಿ ದೇಶ ಭಕ್ತಿಗೀತೆಗಳನ್ನು ಹಾಡಿದ ನೆನಪು ಎಂದು ಹೇಳಿದವರು. ತಂದೆ–ತಾಯಿಯವರೊಡನೆ ಪ್ರತಿ ವರ್ಷ ಭಜನೆ ಮಾಡುತ್ತಾ ಪಾದಯಾತ್ರೆ ಮಾಡಿದ ಭಜನೆಕಾರ. ವಿಠ್ಠಲರಾವ ಜನಿಸಿದ್ದು

ಕೂಡಾ ಫಂಡರಾಪುರದ ವಿಠ್ಠಲನ ಮಹಿಮೆಯಿಂದಲೇ ಎಂದು ತಂದೆ-ತಾಯಿ ಹೇಳಿದ ಮಾತು ನೆನಪಿಗೆ ಬರುತ್ತಿದೆ. ಮಹಾರಾಷ್ಟ್ರದ ದುದುನಿ ಹಿರೇಮಠದಲ್ಲಿ, ಶಾಂತಲಿಂಗೇಶ್ವರ ವಿರಕ್ತಮಠದ ಪೀಠಾಧಿಪತಿಗಳಾದ ಗುರುಶಾಂತಲಿಂಗ ಶಿವಾಚಾರ್ಯರ ಆಶೀರ್ವಾದ. ಮಾರ್ಗದರ್ಶನದಲ್ಲಿ ೧೯೫೦ ರಿಂದ ಸಂಗೀತಾಭ್ಯಾಸ, ಭಜನೆ, ಪುರಾಣ, ಪ್ರವಚನ, ಕೀರ್ತನೆ ಜೊತೆಗೆ ವಿದ್ಯಾಭ್ಯಾಸವನ್ನೂ ೧೦ನೇ ತರಗತಿಯವರೆಗೆ ಓದಿ ಅವರ ಕೃಪಾಶೀರ್ವಾದದಿಂದ ಕೊಗನೂರಿಗೆ ಮರಳಿ ತಂದೆಯೊಡನೆ ಒಕ್ಕಲುತನ ಮಾಡುತ್ತ ತಮ್ಮ ಜಾನಪದ ಕಲೆ ಬೆಳೆಸುತ್ತಾ ತಮ್ಮ ಮನೆಯನ್ನೇ ವಿದ್ಯಾಲಯ ಮಾಡಿಕೊಂಡು ಪ್ರೀತಿ, ವಿಶ್ವಾಸ, ವಾತ್ಸಲ್ಯಗಳಿಗೆ ಉದಾಹರಣೆಯಾಗಿ ಗಾಂಧೀ ತತ್ವ ಪಾಲಿಸುತ್ತಾ ಶಾಂತತೆ ಹಾಗೂ ತಮ್ಮ ಕಲೆಯ ಪಾಂಡಿತ್ಯದೊಡನೆ ಜನರನ್ನು ಗಳಿಸಿದವರು.

ಇವರು ಕುಟುಂಬಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. ಒಗ್ಗಟ್ಟೇ ಬಲ ಎಂಬ ಗಾದೆಯನ್ನು ಸಾಕಾರಗೊಳಿಸಿದರವರು. ಆರು ಮಂದಿ ಅಣ್ಣ ತಮ್ಮಂದಿರು. ಅವರೆಲ್ಲರ ಕುಟುಂಬದ ಸದಸ್ಯರು ಕೂಡಿ ಈಗ ಸದಾ ಒಂದೇ ಸೂರಿನಲ್ಲಿ ೫೦ ಜನರಿದ್ದಾರೆ.

ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಬಡಿಗೇರ ಅವರು ಇವರೊಡನೆ ಬಂದು ಸಂದರ್ಶಿಸಿ ಮಾಹಿತಿ ಸಂಗ್ರಹಿಸಿದ್ದಾರೆ. ಗುಲಬರ್ಗಾ ಜಿಲ್ಲೆ ಬೇರೆ ಬೇರೆ ಚಾನಲ್‌ದವರೂ ಬಂದು ಇವರನ್ನು ಸಂದರ್ಶಿಸಿದ್ದಾರೆ. ವಿಠ್ಠಲರಾವ್ ಭಜನೆಕಾರರು, ಜಾನಪದ ಸಂಗೀತಗಾರರು, ಕವಿಗಳು ಮತ್ತು ಚಿತ್ರಕಲೆಗಾರರೂ ಆಗಿದ್ದಾರೆ. ಅನೇಕ ಜಾನಪದ ಹಾಡುಗಳನ್ನು ರಚಿಸಿದ್ದಾರೆ.

**ವಿಠ್ಠಲರಾವ ಹನುಮಂತರಾವ ಹೊಸಗೌಡ**
**ಅಂಚೆ : ಕೊಗನೂರ**
**ತಾ : ಅಫಜಲಪೂರ, ಗುಲಬರ್ಗಾ**

## ಅಂಬವ್ವ ಭೀಮಣ್ಣ ಪಟ್ಟಣ

ತಂದೆ ಭೀಮಶ್ಯಾ ತಾಯಿ ಲಕ್ಷ್ಮೀ ಭಾಯಿಯವರ ಉದರದಲ್ಲಿ ೧೯೪೨ರಲ್ಲಿ ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ಗೂಡೂರು ಗ್ರಾಮದಲ್ಲಿ ಜನಿಸಿದ ಇವರು ಮದುವೆಯಾದರೂ ಯಾವುದೋ ಕಾರಣದಿಂದಾಗಿ ಗಂಡನ ಮನೆಗೆ ಹೋಗದೆ ವೈರಾಗ್ಯ ತಾಳಿ ಆಧ್ಯಾತ್ಮಿಕ ಜೀವನ ನಡೆಸಿದ ಜಾನಪದ ಕಲಾವಿದೆ. ನಾದದ ಗುಂಗನ್ನು ಪಡೆದ ಅಂಬವ್ವಾ ಹೊಲದಲ್ಲಿ ಕೆಲಸ ಮಾಡುವಾಗ ಹಿರಿಯರ ಜೊತೆ ದನಿಗೂಡಿಸಿ ಮುಂದೆ ಪ್ರಖ್ಯಾತಳಾಗಿ ಆಕಾಶವಾಣಿ, ದೂರದರ್ಶನ ಕಲಾವಿದೆಯಾದಳು. ಅಮ್ಮನ ಜೊತೆ ಬೀಸುವಾಗ, ಕುಟ್ಟುವಾಗ “ಬಡತನ ಬಂದರ ಬಡಿಬ್ಯಾಡ ಮಕ್ಕಳ ಆಡಿ ಆಡಿ ಬಂದು ತೊಡಿಮ್ಯಾಲ ಮಲಗಿದರ ಬಂದ ಬಡತನ ಬಯಲಾಗ” ಎಂದು ಅಮ್ಮನ ಹಾಡಿನೊಂದಿಗೆ ಪ್ರಾರಂಭಿಸಿದ ಅಂಬವ್ವ ಎಲ್ಲರಲ್ಲೂ ಕಲಿತು ನೂರಾರು ಹಾಡಿನ ಅಕ್ಕನಾಗಿ ಮೆರೆದಳು. ಅಫಜಲಪೂರ ತಾಲೂಕಿನಲ್ಲಿ ಆಗಿನ ಕಾಲದ ಪ್ರಸಿದ್ಧ ಹಾಡುಗಾರ್ತಿಯರಾದ ಸಾವಳಗಿ ಗುಂಡಕ್ಕ, ಭಾಗಮ್ಮ, ಮಲ್ಲಮ್ಮರ ಜೊತೆಗೆ ಹೋಗಿ ಜೋಗುಳ ಪದ ಸೋಬಾನ ಪದ, ಮದುವೆ ಹಾಡುಗಳು, ಕೋಲಾಟದ ಹಾಡುಗಳು, ಬುಲಾಯಿ ಹಾಡುಗಳು, ಪ್ರತಿ ಹಬ್ಬಕ್ಕೂ (ಪಂಚಮಿ, ದೀಪಾವಳಿ, ಎಳ್ಳಮವಾಸ್ಯೆ, ಯುಗಾದಿ) ಕೋಲು ಹಾಕುತ್ತಾ ಹಾಡಿದರೆ ಊರಿಗೆ ಊರೆ ಸೇರುತಿತ್ತು.

೭೫ರ ವಯಸ್ಸಿನ ಅಂಬಮ್ಮನ ಉತ್ಸಾಹ ಯುವತಿಯರನ್ನೂ ನಾಚಿಸುವಂತಿದೆ. ಇನ್ನೂ ೪೦ ವರುಷ ಸೇವೆ ಮಾಡುವ ಸಧೃಡ ಕಾಯದ ಅಂಬಮ್ಮ ಯುವ ಪೀಳಿಗೆಗೆ ಅಪರೂಪದ ಉದಾಹರಣೆಯಾಗಿದ್ದಾರೆ. ೧೯೯೧ರಲ್ಲಿ ಅಕಾಡೆಮಿ ಪ್ರಶಸ್ತಿ ಪಡೆದ ಅಂಬಮ್ಮ ೧೯೮೮ ರಿಂದ ಹಿಡಿದು ಇಲ್ಲಿಯವರೆಗೆ ಆಕಾಶವಾಣಿಯ ಕಲಾವಿದೆಯಾಗಿ ಸೇವೆ ಸಲ್ಲಿಸುತ್ತಿರುವ ಇವರು ದೂರದರ್ಶನದ ಕಲಾವಿದೆಯೂ ಹೌದು. ಗುಲಬರ್ಗಾ ದೂರದರ್ಶನದಿಂದ ಪ್ರತಿವರ್ಷ ಕಾರ್ಯಕ್ರಮ ನೀಡುತ್ತಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಗುಲಬರ್ಗಾ ವತಿಯಿಂದ ೩೦ ವರುಷಗಳಿಂದ ಜಿಲ್ಲಾ ಮಟ್ಟದ ಸಮ್ಮೇಳನಗಳಲ್ಲಿ, ಉತ್ಸವಗಳಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಪ್ರಶಸ್ತಿ ಪತ್ರ ಪಡೆದು ರಾಜ್ಯ ಮಟ್ಟದಲ್ಲೂ ಗುರುತಿಸಿಕೊಂಡಿದ್ದಾರೆ.

ಗೂಡೂರು, ನೆಲೂರು, ಕೂಗನೂರು, ಬೈರಾಮಡಗಿ, ಗೌಡಗಾಂವ, ಮೇಳಕುಂದಿ, ಭಾಸಗಿ, ದಿಕ್ಸಂಗ, ಭದ್ರಿ, ಮದುರಾಕೆ, ಹಿತ್ತಲ ಶೀರೂರ, ನಿಂಬರಗಾ, ವೈಜಾಪೂರ ಬೊಮ್ಮನಳ್ಳಿ, ಕುಡತಿ, ಶಹಾಪೂರ ಇವು ಇವರು ಕಾರ್ಯಕ್ರಮ ನೀಡಿದ ಕ್ಷೇತ್ರಗಳು.

ಇವರು ಅಕ್ಕನ ಬಳಗದ (ಸ್ತ್ರೀ ಶಕ್ತಿ ಸಂಘದ) ಅಧ್ಯಕ್ಷರಾಗಿ ಕ್ರಿಯಾತ್ಮಕವಾಗಿ ನಡೆಸುತ್ತಿದ್ದಾರೆ. ಹಿರಿಯ ಜಾನಪದ ಮತ್ತು ಮಕ್ಕಳ ಸಾಹಿತಿಗಳಾದ, ಮಾಜಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾದ ಶ್ರೀ ಎ. ಕೆ. ರಾಮೇಶ್ವರ ಅವರು ಇವರ ಹಾಡುಗಳನ್ನು ಸಂಗ್ರಹಿಸಿ ಅಕಾಡೆಮಿ ವತಿಯಿಂದ ಪ್ರಕಟಿಸಿದ್ದಾರೆ.

**ಶ್ರೀಮತಿ ಅಂಬವ್ವ ಭೀಮಣ್ಣ ಪಟ್ಟಣ**
**ಗುಲಬರ್ಗಾ**



ಜಾನಪದದ ಸರ್ವಾಂಗೀಣವೂ, ತಲ ಸ್ಪರ್ಶಿಯೂ ಆದ ಅಧ್ಯಯನ ಇಂದಿನ ತುರ್ತು. ಬದಲಾದ ಕಾಲಮಾನ, ವಸಾಹತೋತ್ತರ ಜಿಜ್ಞಾಸೆ, ಆಧುನಿಕತೆಗಳ ಆಯಾಮಗಳನ್ನು ಮೀರಿದ ದೇಶಿ ಹುಡುಕಾಟ ಹಿಂದೆಂದಿಗಿಂತಲೂ ಇಂದು ಪ್ರಸ್ತುತ.

ಆ ನೆಲೆಯಲ್ಲಿ ಅಕಾಡೆಮಿ ಭಿನ್ನ ಆಲೋಚನೆಗಳಿಂದ ತನ್ನನ್ನು ಪುನಃ ರೂಪಿಸಿ ಕೊಳ್ಳುತ್ತಿದೆ. ಗ್ರಾಮೀಣ ಜಾನಪದದ ಬೆನ್ನೆಲುಬಾದ ಕಲಾವಿದರಿಗೆ ವೇದಿಕೆಗಳನ್ನು ಕಲ್ಪಿಸಿಕೊಡುವುದರ ಜೊತೆ ಜಾನಪದದ ಬೌದ್ಧಿಕ ಅಸ್ತಿತ್ವಕ್ಕೂ ಯತ್ನಿಸ ಲಾಗಿದೆ. ಆ ದಿಕ್ಕಿನಲ್ಲಿ ಅಕಾಡೆಮಿ ಹಮ್ಮಿಕೊಳ್ಳುವ ವಿಚಾರಸಂಕಿರಣಗಳು ಗಮನಾರ್ಹ. ಈ ದಿಶೆಯಲ್ಲಿ ಅಕಾಡೆಮಿ ಅವ್ಯಾಹತವಾಗಿ ಕ್ರಿಯಾಶೀಲವಾಗಿದೆ.

30 ಜಿಲ್ಲೆಗಳ ಕಲಾವಿದರ ಪರಿಚಯದ ಮಾಲಿಕೆಗಳು ಅಕಾಡೆಮಿಯ ಸ್ತುತ್ಯ ಪ್ರಕಟಣೆ ಗಳಾಗಿವೆ. ದೇಶೀಯತೆಯ ವಕ್ತಾರರಾದ, ಸಾಂಸ್ಕೃತಿಕ ರಾಯಭಾರಿಗಳಾದ ಈ ಕಲಾವಿದ ರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಉದ್ದೇಶದ ಈ ಮಾಲಿಕೆ ಜನಪದರಿಗೆ ಹಾಗೂ ಜನಪದಕ್ಕೆ ನಿಜವಾಗಿಯೂ ಸಲ್ಲಿಸಿದ ಗೌರವವಾಗಿದೆ.

ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್

